# ಕರ್ನಾಟಕ ಸ್ಕೌಟ್ ಮತ್ತು ಗೈಡ್

ತಿಂಗಳ ವಾರ್ತಾಪತ್ರಿಕೆ

# Karnataka Scout & Guide

Monthly News Magazine

Vol -20 | Issue-08 | AUGUST 2023 | ₹ 10/-




15 ಆಗಸ್ಟ್ 2023ರಂದು ಬೆಂಗಳೂರಿನ ಮಾಣಿಕ್ ಷಾ ಕವಾಯತು ಮೈದಾನದಲ್ಲಿ ರಾಜ್ಯ ಸರ್ಕಾರ ಏರ್ಪಡಿಸಿದ 77ನೇ ಸ್ವಾತಂತ್ರ್ಯ ದಿನಾಚರಣೆ ಪಥಸಂಚಲನದಲ್ಲಿ ಭಾಗವಹಿಸಿ ತೃತೀಯ ಸ್ಥಾನ ಪಡೆದ ಬೆಂಗಳೂರು ಉತ್ತರ ಜಿಲ್ಲೆಯ ಆರ್.ಟಿ. ನಗರ ಪಬ್ಲಿಕ್ ಶಾಲೆಯ ಗೈಡ್ಸ್ ತಂಡದ ನಾಯಕಿ ಕುಮಾರಿ ಆರ್. ಮಾನ್ಯಗೆ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಪಾರಿತೋಷಕವನ್ನು ನೀಡಿ ಗೌರವಿಸಿದರು. ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



The Prime Minister of Republic of South Korea Mr. Han Duck – SOO Greeting Mr. Abhishek and Mr. Pragun Purnik, Rovers of Karnataka during the Closing Ceremony of the 25th World Scout Jamboree at Seoul World Cup Stadium on 11th August 2023




ರಾಜ್ಯ ಮುಖ್ಯ ಆಯುಕ್ತರಾಗಿದ್ದ, ದಿ॥ ವಿ.ಪಿ. ದೀನದಯಾಳು ನಾಯ್ಡು ಅವರ 107ನೇ ಹುಟ್ಟು ಹಬ್ಬದ ಕಾರ್ಯಕ್ರಮವನ್ನು 16 ಆಗಸ್ಟ್ 2023 ರಂದು ರಾಜ್ಯ ಕೇಂದ್ರ ಕಛೇರಿಯಲ್ಲಿ ಕರ್ನಾಟಕ ಸರ್ಕಾರದ ಮಾನ್ಯ ಸಾರಿಗೆ ಮತ್ತು ಮುಜರಾಯಿ ಇಲಾಖೆಗಳ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿ ಅವರು ದೀಪ ಬೆಳಗಿಸುವುದರೊಂದಿಗೆ ಉದ್ಘಾಟಿಸಿದರು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯ, ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ಬಿಬಿಎಂಪಿ ಉಪ ಆಯುಕ್ತರಾದ ಡಾ. ಎನ್.ಸಿ. ವೆಂಕಟರಾಜು, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಪ್ರಾಂಶುಪಾಲರಾದ ಡಾ॥ ಎಲ್.ಎಚ್. ಶಿವಶಂಕರಪ್ಪ, ರಾಜ್ಯ ಸಂಸ್ಥೆ ಮತ್ತು ಬಿ.ಬಿ.ಎಂ.ಪಿ ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಭಾಗವಹಿಸಿದ್ದರು.



ತುಮಕೂರು ನಗರ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ನಡೆದ 77ನೇ ಸ್ವಾತಂತ್ರ್ಯೋತ್ಸವ ಪಥಚಲನದಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ರೇಂಜರ್ಸ್ ತಂಡಕ್ಕೆ ಮಾನ್ಯ ಗೃಹ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ॥ ಜಿ. ಪರಮೇಶ್ವರ್‌ರವರು ಪ್ರಶಸ್ತಿ ನೀಡಿ ಗೌರವಿಸಿದರು. ಜಿಲ್ಲಾಧಿಕಾರಿಗಳು, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು ಮತ್ತು ಇತರರು ಉಪಸ್ಥಿತರಿದ್ದರು.

**ಪೋಷಕರು**

ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**

ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**

ಕೊಂಡಜ್ಜಿ ಬ. ಷಣ್ಮುಖಪ್ಪ

**ಸಂಪಾದಕರು**

ಕೆ. ಗಂಗಪ್ಪಗೌಡ

**ಸಹಸಂಪಾದಕರು**

ಎನ್. ಶ್ರೀನಿವಾಸನ್

**ಸಂಚಾಲಕರು**

ಬಿ.ಎಸ್. ರವೀಂದ್ರ

**ಸದಸ್ಯರು**

ಮೋಹನ್ ಕೊಂಡಜ್ಜಿ

ಸಿ.ಪಿ. ಪರಮೇಶ್ವರ

ಚಳ್ಳಕೆರೆ ಯರ‍್ರಿಸ್ವಾಮಿ

ಎಂ.ಎನ್. ಷಡಕ್ಷರಿ

ಸಿ.ವಿ. ತಿರುಮಲರಾವ್

ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ

ಡಾ. ವಸುಂಧರ ಭೂಪತಿ

ಡಾ. ಶಕುಂತಲ

ಪ್ರಭಾವತಿ ಪಾಟೀಲ್



ಸಂಚಿಕೆಯ ವಾರ್ಷಿಕ ಚಂದಾ ರೂ. 100/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.


# ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸಿಕ ವಾರ್ತಾಪತ್ರಿಕೆ

# KARNATAKA Scout & Guide

MONTHLY NEWS MAGAZINE


Vol: 20 Issue : 08 August 2023


## ಒಳಪುಟಗಳಲ್ಲಿ...


ರಾಜ್ಯ ಮುಖ್ಯ ಆಯುಕ್ತರ ನುಡಿ ...04

ಒಂದು ಸಂವಾದ ...05

ದಿ॥ ವಿ.ಪಿ. ದೀನದಯಾಳು ನಾಯ್ಡುರವರ 107ನೇ ಹುಟ್ಟುಹಬ್ಬ ಆಚರಣೆ ...06

ದಿ॥ ವಿ.ಪಿ. ದೀನದಯಾಳು ನಾಯ್ಡು ಬಹುಮುಖ ವ್ಯಕ್ತಿತ್ವ ...07

ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ಸ್ಕೌಟ್ಸ್-ಗೈಡ್ಸ್ ಪರೀಕ್ಷಾ ಶಿಬಿರ ...08

ರಾಜ್ಯ ಕೇಂದ್ರ ಕಛೇರಿಯಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆ ...09

ರಾಜ್ಯ ಮಟ್ಟದ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರಗಳು ...12

ಸೆಪ್ಟೆಂಬರ್ 2023 ಮಾಹೆಯ ಕಾರ್ಯಕ್ರಮಗಳು ...15

ಹಿರಿಯ ಸ್ಕೌಟರ್ಸ್-ಗೈಡರ್ಸ್ ಹಾಗು ಪದಾಧಿಕಾರಿಗಳ ಮಾಹಿತಿ ಕಳುಹಿಸುವ ಪತ್ರ ...16

ಜಿಲ್ಲಾ ವಾರ್ತೆಗಳು ...17

Great Grandson of Late Kondajji Basappa Visits Brownsea Island as a Scout ...38

Teacher's Day ...39

ವಿ ಶಲ್ ಓವರ್ ಕಮ್ ...41

ಕಲುಷಿತ ನೀರು ...42

ಶ್ರದ್ಧಾಂಜಲಿ ...42


## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಈ ಮಾಸಪತ್ರಿಕೆಯ ಬಗ್ಗೆ ತಮ್ಮ ಅನಿಸಿಕೆ ಅಭಿಪ್ರಾಯ ಮತ್ತು ಸಲಹೆಗಳನ್ನು ಕಳುಹಿಸಲು ಕೋರಿಕೆ. ಇದರಿಂದ ಮಾಸಪತ್ರಿಕೆಯನ್ನು ಮತ್ತಷ್ಟು ಉತ್ತಮಗೊಳಿಸಲು ಸಹಕಾರಿಯಾಗುತ್ತದೆ. ಅಲ್ಲದೆ ತಾವು, ಸ್ಕೌಟ್-ಗೈಡ್ ಚಳವಳಿಯ ಬಗ್ಗೆ ರಚಿಸಿರುವ ಕವನಗಳು, ಸಣ್ಣ ಕತೆಗಳು, ಪ್ರಬಂಧಗಳು, ಪ್ರವಾಸ ಕಥನಗಳು, ಶಿಬಿರದ ಅನುಭವಗಳು ಇತ್ಯಾದಿಗಳನ್ನು ಕಳುಹಿಸಿಕೊಡಲು ಕೋರಿದೆ. ಇವುಗಳಲ್ಲಿ ಸೂಕ್ತ ಕಂಡವುಗಳನ್ನು ಮಾಸಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

– ಸಂಪಾದಕರು


080-2226 0017, 2226 7470 www.bsgkarnataka.org The Bharat Scouts & Guides-Karnataka



# ರಾಜ್ಯ ಮುಖ್ಯ ಆಯುಕ್ತರ ನುಡಿ

**ಸಮಸ್ತ ಸ್ಕೌಟ್–ಗೈಡ್ಸ್ ಬಂಧುಗಳಿಗೆ**
**ಗಣೇಶ ಚತುರ್ಥಿ ಹಾಗೂ ಶಿಕ್ಷಕ ದಿನಾಚರಣೆಯ ಹಾರ್ದಿಕ ಶುಭಾಶಯಗಳು,**

ಭಾರತಕ್ಕೆ ಈಗ 77ನೇ ಸ್ವಾತಂತ್ರ್ಯೋತ್ಸವದ ಸಂಭ್ರಮ. ಈ 77 ವರ್ಷಗಳಲ್ಲಿ ನಮ್ಮ ದೇಶ ಹಲವು ಮೈಲಿಗಲ್ಲುಗಳನ್ನು ಕಂಡಿದೆ. ಆರ್ಥಿಕತೆ, ರಾಜಕೀಯ, ತಂತ್ರಜ್ಞಾನ, ವಿಜ್ಞಾನ, ಮೂಲಭೂತ ಸೌಕರ್ಯಗಳು, ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಅನೇಕ ಸಾಧನೆಗಳಿಗೆ ಸಾಕ್ಷಿಯಾಗಿದೆ. ಇವುಗಳ ಸಾಲಿಗೆ ಇತ್ತೀಚೆಗೆ ಚಂದ್ರನ ಅಂಗಳದಲ್ಲಿ ಚಂದ್ರಯಾನ 3 ಯಶಸ್ವಿಯಾಗಿ ಉಡಾವಣೆಗೊಳಿಸಿದ ISRO ವಿಜ್ಞಾನಿಗಳ ಸಾಧನೆಯನ್ನು ವಿಶ್ವದೆಲ್ಲೆಡೆಯಿಂದ ಅಭಿನಂದಿಸಿದ್ದಾರೆ.

ಭಾರತ ಬಹುನಿರೀಕ್ಷಿತ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಚಂದ್ರಯಾನ 3 ಮಿಷನ್ ಯಶಸ್ವಿಯಾಗಿ ಉಡಾವಣೆಗೊಂಡಿದ್ದು, ಈ ಅಸಾಧಾರಣ ಸಾಧನೆಗೆ ಕಾರಣರಾದ ಇಸ್ರೋದ ಎಲ್ಲ ವಿಜ್ಞಾನಿಗಳಿಗೆ, ಅಧಿಕಾರಿಗಳಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ನಮ್ಮ ಸಂಸ್ಥೆಯಿಂದ ಹತ್ತೂರ್ವಕವಾದ ಅಭಿನಂದನೆಗಳು.

ಆಗಸ್ಟ್ ತಿಂಗಳಿನಲ್ಲಿ ಹಲವಾರು ಉತ್ತಮ ಕಾರ್ಯಕ್ರಮಗಳು, ತರಬೇತಿಗಳು ಮತ್ತು ಚಟುವಟಿಕೆಗಳನ್ನು ನಾವು ನಡೆಸಿದ್ದೇವೆ. ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆಯಂದು ಕೇಂದ್ರ ಕಛೇರಿಯಲ್ಲಿ ನಡೆದ ಸಮಾರಂಭದಲ್ಲಿ ನಾಡಿನ ಹಿರಿಯ ಸಾಹಿತಿ ಡಾ. ಗೊ.ರು. ಚನ್ನಬಸಪ್ಪ ಅವರು ಧ್ವಜಾರೋಹಣ ಕಾರ್ಯವನ್ನು ನೆರವೇರಿಸಿದರು. ಎಲ್ಲಾ ಜಿಲ್ಲೆಗಳಲ್ಲೂ ನಮ್ಮ ಸಂಸ್ಥೆಯಿಂದ ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ ಸ್ವಾತಂತ್ರ್ಯೋತ್ಸವವನ್ನು ಆಚರಿಸುವ ಜೊತೆಗೆ ಜಿಲ್ಲಾಡಳಿತಗಳಿಂದ ಆಯೋಜಿಸುವ ಪೆರೇಡ್‌ನಲ್ಲಿ ನಮ್ಮ ಮಕ್ಕಳು ಭಾಗವಹಿಸಿದ್ದಾರೆ. ಹಲವು ಜಿಲ್ಲೆಗಳಲ್ಲಿ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಬೆಂಗಳೂರಿನ ಮಾಣೆಕ್ ಷಾ ಮೈದಾನದಲ್ಲಿ ನಡೆದ ಪೆರೇಡ್‌ನಲ್ಲಿ ರಾಜ್ಯ ಸಂಸ್ಥೆಯನ್ನು ಪ್ರತಿನಿಧಿಸಿದ್ದ ಬೆಂಗಳೂರು ಉತ್ತರ ಜಿಲ್ಲಾ ಸಂಸ್ಥೆಯ ಆರ್.ಟಿ.ನಗರ ಪಬ್ಲಿಕ್ ಶಾಲೆಯ ಸ್ಕೌಟ್ಸ್–ಗೈಡ್ಸ್‌ಗಳು 3ನೇ ಬಹುಮಾನ ಪಡೆದು, ಸಂಸ್ಥೆಗೆ ಕೀರ್ತಿ ತಂದಿದ್ದಾರೆ. ಇದೇ ಪೆರೇಡ್‌ನಲ್ಲಿ ಬೆಳಗಾವಿ ಜಿಲ್ಲೆ, ಬೈಲಹೊಂಗಲದ ಕಿತ್ತೂರುರಾಣಿ ಚೆನ್ನಮ್ಮ ಎಜುಕೇಷನ್ ಸೊಸೈಟಿ ಶಾಲೆಯ ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳು ರೋಪ್ ಸ್ಕಿಪಿಂಗ್ ಪ್ರದರ್ಶನ ನೀಡಿ ಬಹುಮಾನ ಪಡೆದಿರುವುದು ಹೆಮ್ಮೆಯ ಸಂಗತಿ. ಪೆರೇಡ್‌ಗಳಲ್ಲಿ ಭಾಗವಹಿಸಿರುವ ಮತ್ತು ಪ್ರಶಸ್ತಿಗಳನ್ನು ಪಡೆದಿರುವ ಎಲ್ಲ ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳಿಗೆ, ಶಿಕ್ಷಕರುಗಳಿಗೆ ರಾಜ್ಯ ಸಂಸ್ಥೆಯಿಂದ ಹಾಗೂ ವೈಯಕ್ತಿಕವಾಗಿ ಅಭಿನಂದನೆಗಳಲ್ಲು ಸಲ್ಲಿಸುತ್ತೇನೆ.

ಸ್ಕೌಟ್ಸ್ ಗೈಡ್ಸ್‌ನ ರಾಷ್ಟ್ರ ಮತ್ತು ಕರ್ನಾಟಕ ರಾಜ್ಯ ಸಂಸ್ಥೆಗೆ ಸ್ಮರಣೀಯ ಸೇವೆ ಸಲ್ಲಿಸಿರುವ ಮಹನೀಯರುಗಳಲ್ಲಿ ಒಬ್ಬರಾದ ಶ್ರೀ ವಿ.ಪಿ. ದೀನದಯಾಳು ನಾಯ್ಡು ಅವರ 107ನೇ ಜನ್ಮ ದಿನಾಚರಣೆಯ ಅಂಗವಾಗಿ ಆಗಸ್ಟ್ 16 ರಂದು ನಡೆದ ಸಮಾರಂಭದಲ್ಲಿ ರಾಜ್ಯ ಸರ್ಕಾರದ ಮಾನ್ಯ ಸಾರಿಗೆ ಮತ್ತು ಮುಜರಾಯಿ ಇಲಾಖೆಗಳ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿ ಅವರು ಭಾಗವಹಿಸಿದ್ದು ಸಂತೋಷವಾಗಿದೆ. ಚಳುವಳಿಯ ಬೆಳವಣಿಗೆಗೆ ಸ್ಮರಣೀಯ ಸೇವೆ ಸಲ್ಲಿಸಿರುವ ಇಂತಹ ಮಹಾಪುರುಷರನ್ನು ಸ್ಮರಿಸುವುದು ನಮ್ಮ ಕರ್ತವ್ಯ.

ಈ ತಿಂಗಳೂ ಸಹ, ರಾಜ್ಯಾದ್ಯಂತ ನಮ್ಮ ತರಬೇತಿಗಳು ಯಶಸ್ವಿಯಾಗಿ ನಡೆದಿವೆ. ಮಂಗಳೂರು ಮತ್ತು ಉಡುಪಿಯಲ್ಲಿ ಜಿಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕ – ಉಪನ್ಯಾಸಕಿಯರುಗಳಿಗೆ ಏರ್ಪಡಿಸಿದ್ದ ಒಂದು ದಿನದ ರೋವರಿಂಗ್ ಮತ್ತು ರೇಂಜರಿಂಗ್ ಮಾಹಿತಿ ಶಿಬಿರ, ಆನೇಕಲ್, ಕೊಪ್ಪಳ ಮತ್ತು ಕೊಂಡಜ್ಜಿಯಲ್ಲಿ ನಡೆದ ಸ್ಕೌಟ್ಸ್ ಮಾಸ್ಟರ್ಸ್, ಗೈಡ್ ಕ್ಯಾಪ್ಟನ್ಸ್ ಮತ್ತು ಕಬ್ ಮಾಸ್ಟರ್ಸ್, ಫ್ಲಾಕ್ ಲೀಡರ್ಸ್‌ಗಳ ಮೂಲ ತರಬೇತಿ ಶಿಬಿರಗಳು, ದೊಡ್ಡಬಳ್ಳಾಪುರ, ಕೊಂಡಜ್ಜಿ, ಬೆಳಗಾವಿ, ಮೈಸೂರುಗಳಲ್ಲಿ ನಡೆದ ರಾಜ್ಯ ಪುರಸ್ಕಾರ್ ಟೆಸ್ಟಿಂಗ್ ಕ್ಯಾಂಪ್‌ಗಳೆಲ್ಲವೂ ಅತ್ಯಂತ ಯಶಸ್ವಿಯಾಗಿವೆ. ಈ ಶಿಬಿರಗಳ ಆಯೋಜನೆಗೆ ಸಹಕರಿಸಿದ ಮತ್ತು ಭಾಗವಹಿಸಿದವರೆಲ್ಲರಿಗೂ ಧನ್ಯವಾದಗಳು.

"ರಕ್ಷಾ ಬಂಧನ್" ದಿನದ ಅಂಗವಾಗಿ, ಬೆಳಗಾವಿಯ ಜೈನ್ ಹೆರಿಟೇಜ್ ಶಾಲೆಯ ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳು, ನಮ್ಮ ಚಳುವಳಿಯ ಕ್ರಿಯಾಶೀಲ ಶಿಕ್ಷಕಿಯಾದ ಶ್ರೀಮತಿ ಪಲ್ಲವಿ ನಾಡಕರ್ಣಿ ಅವರ ನೇತೃತ್ವದಲ್ಲಿ ಆಗಸ್ಟ್ 31ರಂದು ಗೌರವಾನ್ವಿತ ರಾಷ್ಟ್ರಪತಿಗಳಿಗೆ ಹಾಗೂ ರಾಜಸ್ಥಾನದ ಜೋಧ್‌ಪುರದಲ್ಲಿನ ನಮ್ಮ ಹೆಮ್ಮೆಯ ಸೈನಿಕರಿಗೆ "ರಕ್ಷಾ ಬಂಧನ" ಕಟ್ಟುವ ಕಾರ್ಯಕ್ರಮ ನಿಗಧಿಪಡಿಸಿಕೊಂಡಿದ್ದಾರೆ. ಇದು ನಮ್ಮೆಲ್ಲರಲ್ಲೂ ರೋಮಾಂಚನ ಮೂಡಿಸಿದೆ. ಈ ಮಕ್ಕಳಿಗೆ, ಅವರ ಶಾಲೆಗೆ ಹಾಗೂ ಪೋಷಕರಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಒಟ್ಟಾರೆಯಾಗಿ, ಆಗಸ್ಟ್ ತಿಂಗಳಿನಲ್ಲಿ ರಾಜ್ಯಾದ್ಯಂತ ಹಲವು ಕಾರ್ಯಕ್ರಮಗಳು, ತರಬೇತಿ ಶಿಬಿರಗಳು ಮತ್ತು ವೈವಿಧ್ಯಮಯ ಚಟುವಟಿಕೆಗಳಲ್ಲಿ ನಮ್ಮ ಸ್ಕೌಟ್ಸ್–ಗೈಡ್ಸ್‌ಗಳು ತೊಡಗಿಸಿಕೊಂಡಿರುವುದು ಸಂತಸ ತಂದಿದೆ.

ಸೆಪ್ಟೆಂಬರ್ 5 ದೇಶದ ಪ್ರತಿಯೊಬ್ಬರ ಪಾಲಿಗೆ ಮಹತ್ವದ ದಿನ. ಬದುಕು ರೂಪಿಸಿದ ಶಿಕ್ಷಕರಿಗೆ ಧನ್ಯವಾದ ಅರ್ಪಿಸುವ ದಿನವದು. ಆಧುನಿಕತೆಯಲ್ಲಿ ಇಂದು ಎಷ್ಟೇ ವಿಜ್ಞಾನ, ತಂತ್ರಜ್ಞಾನ ಆವರಿಸಿದ್ದರೂ, ಮಕ್ಕಳ ಪರಿಪೂರ್ಣ ವಿಕಾಸದಲ್ಲಿ ಮಾನವ ಶಿಕ್ಷಕರ ಪಾತ್ರ ಅನನ್ಯ ಮತ್ತು ಅನಿವಾರ್ಯವೂ ಆಗಿದೆ. ಶಿಕ್ಷಕರಿಲ್ಲದೆ, ಸ್ಕೌಟ್ಸ್–ಗೈಡ್ಸ್ ಚಳುವಳಿಯ ಬೆಳವಣಿಗೆ ಸಾಧ್ಯವೇ ಇಲ್ಲ. ಕಾರಣ ನಮ್ಮ ಸಂಸ್ಥೆಯಿಂದ ಸೆಪ್ಟೆಂಬರ್ 5ರಂದು ಎಲ್ಲಾ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಅರ್ಥಪೂರ್ಣವಾಗಿ ಆಚರಿಸೋಣ.

ಇನ್ನು ಕೆಲವೇ ದಿನಗಳಲ್ಲಿ ಮಕ್ಕಳಿಂದ ಹಿಡಿದು ದೊಡ್ಡವರವರೆಗೂ ವೈಭವದಿಂದ ಆಚರಿಸಲ್ಪಡುವ ಗಣೇಶ ಚತುರ್ಥಿ ಬರಲಿದೆ. ಪರಿಸರ ರಕ್ಷಣೆಗೆ ಒತ್ತು ಕೊಡುವ ನಮ್ಮ ಸಂಸ್ಥೆ, ಅದರಲ್ಲಿ ತೊಡಗಿಸಿಕೊಂಡಿರುವ ನಾವೆಲ್ಲರೂ ಈ ಸಾಲಿನ ಗಣೇಶ ಹಬ್ಬವನ್ನು ಪರಿಸರ ಸ್ನೇಹಿಯಾಗಿ ಆಚರಿಸಬೇಕು. ನಮ್ಮ ಜೀವನಾಡಿ ನದಿಗಳು ಇಂದು ಬಹುತೇಕವಾಗಿ ಕಲುಷಿತಗೊಂಡಿವೆ. ಅವುಗಳ ರಕ್ಷಣೆ ಹಾಗೂ ಶುದ್ಧಿಯಾಗಿಟ್ಟುಕೊಳ್ಳುವುದು ನಮ್ಮೆಲ್ಲರ ಹೊಣೆ. ನಾವು ಮನೆಗಳಲ್ಲಿ ಕೂರಿಸುವ ಗಣೇಶ ಮೂರ್ತಿಗಳು ರಾಸಾಯನಿಕ ಬಣ್ಣಗಳಿಂದ ಕೂಡಿರದಂತೆ ನೋಡಿಕೊಳ್ಳೋಣ. ಪರಿಸರಸ್ನೇಹಿ ಗಣೇಶ ಮೂರ್ತಿಗಳನ್ನು ವಿಸರ್ಜನೆ ಮಾಡಿದಾಗ ನದಿಗಳಿಗೆ ಹಾಗೂ ಜಲಚರಗಳಿಗೆ ಯಾವುದೇ ಅಪಾಯ ಉಂಟಾಗದು. ಈ ದಿಸೆಯಲ್ಲಿ ನಾವೆಲ್ಲರೂ ಪರಿಸರ ಸ್ನೇಹಿ ಗಣೇಶ ಮೂರ್ತಿಗಳ ಬಳಕೆಯ ಬಗ್ಗೆ ಜಾಗೃತಿ ಮೂಡಿಸಬೇಕೆಂದು ಮನವಿ ಮಾಡುತ್ತೇನೆ. ನಮ್ಮ ಮಕ್ಕಳು ಇದರ ಕಡೆ ಆಸಕ್ತಿವಹಿಸುತ್ತಿರುವುದು ಹೆಮ್ಮೆಯ ಸಂಗತಿ.

ಸ್ಕೌಟ್ ಮತ್ತು ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)
ರಾಜ್ಯ ಮುಖ್ಯ ಆಯುಕ್ತರು

'ಆಹಾರದ ಮೌಲ್ಯವನ್ನು ಗುರುತಿಸಿ,
ಎಂದಿಗೂ ವ್ಯರ್ಥ ಮಾಡಬೇಡಿ'

# ಒಂದು ಸಂವಾದ

ನಾಡೋಜ ಡಾ. ಗೊ.ರು. ಚೆನ್ನಬಸಪ್ಪ
ಗೌರವಾಧ್ಯಕ್ಷರು
ಪ್ರಕಟಣೆಗಳ ಸಮಿತಿ, ಭಾರತ್ ಸ್ಕೌಟ್ಸ್-ಗೈಡ್ಸ್, ಕರ್ನಾಟಕ

ನಮ್ಮ ನಾಡಿನ ಹಿರಿಯ ಕವಿ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರ ಒಂದು ಚಿಂತನಾತ್ಮಕ ಕವನವಿದೆ: "ಹೋಗಬಾರದು ಮಗೂ ನೀನೆಲ್ಲೂ ಹೊರಗೆ", "ಕರೆಯುತಿಹವಲ್ಲ ತಂದೆ ಏನೇನೋ ಒಳಗೆ", "ಆಸೆ ಸೆಳೆವುದೆ ಹಾಗೆ ಮೊದಮೊದಲು ಮಗುವೆ", "ಮಧುಸ್ಪಂದಿಯಾಗುತಾವಲ್ಲ ತಂದೆ", "ಕೆಟ್ಟದೆಲ್ಲಾ ಹಾಗೆ ಮಗುವೆ", "ಮೂಗು ಕಣ್ಣುಗಳನೇಕೆ ಮುಚ್ಚುವಿಯಪ್ಪ?" "ಮಂತ್ರ ಹಿಡಿದೊಳಗಿಳಿವುದಕ್ಕೆ!" "ಅದಕ್ಕೇಕಿಷ್ಟು ಪರದಾಟ?" "ದೊಡ್ಡದೆಲ್ಲಾ ಹಾಗೆ. ಹುಬ್ಬು ಮಧ್ಯ ಬೆಳಕೆದ್ದು ಬಳಿವರಿದೆರಡೂ ಸರೋವರಗಳಲ್ಲಿ ಕಡಲಾಗುವುದು", "ಹಾಗಾದರೀ ಹೊರಗಿರುವುದರ ಗುರಿಯೇನು?"

ಸಂವಾದ ರೂಪದಲ್ಲಿರುವ ಈ ಹತ್ತು ಸಾಲುಗಳು ಕವನ ಒಂದು ಗಂಭೀರ ಚಿಂತನೆ. ಇದು ತಂದೆ-ಮಗ ಇಬ್ಬರು ಮಧ್ಯೆ ನಡೆದಿರುವ ಸಂವಾದ. ಮುಗ್ಧಮಗು; ಪ್ರಬುದ್ಧ ತಂದೆ. ಮಗುವೇ ಇಲ್ಲಿ ಮನಸ್ಸು; ತಂದೆಯೇ ಇಲ್ಲಿ ಬುದ್ಧಿ. ಎಂದರೆ ಇದು ಮನಸ್ಸು ಮತ್ತು ಬುದ್ಧಿಗಳ ಮಧ್ಯೆ ನಡೆದ ಸಂವಾದ.

ತಂದೆಗೆ ಸಹಜವಾಗಿ ಮಗನ ಕ್ಷೇಮದ ಚಿಂತೆ. ಮಗ ಸರಿದಾರಿಯಲ್ಲಿ ನಡೆಯಬೇಕು. ಸಾತ್ವಿಕವಾಗಿ ಬದುಕಬೇಕು. ಸಮಾಧಾನದಿಂದ ಇರಬೇಕು – ಇದು ಹೆತ್ತ ತಂದೆಗೆ ಮಕ್ಕಳ ಬಗೆಗೆ ಇರಬೇಕಾದ ಕಕ್ಕುಲತೆ, ಆಸೆ, ಹಂಬಲ, ನಿರೀಕ್ಷೆ. ಅಂತೇ ತನ್ನ ಮಗ ಅತ್ತಿತ್ತ ಅಲೆದಾಡಿ, ಗೊತ್ತು ಗುರಿತಪ್ಪಿ, ಸುತ್ತಣ ಪರಿಸರಕ್ಕೆ ತೊಂದರೆ ಕೊಟ್ಟು, ತಾನೂ ಕೆಟ್ಟು, ಹೆತ್ತವರ ಹೆಸರನ್ನೂ ಕೆಡಿಸಿ, ಬದುಕನ್ನು ವ್ಯರ್ಥಗೊಳಿಸಿಕೊಂಡಾನೆಂದು ಎಚ್ಚರಿಸಲು "ಹೋಗಬಾರದು ಮಗೂ, ನೀನೆಲ್ಲೂ ಹೊರಗೆ" ಎನ್ನುತ್ತಾನೆ ತಂದೆ.

ಆ ಒಳಶಕ್ತಿಗಳು ಒಂದೆರಡಲ್ಲ. ಹೊರ ಆಕರ್ಷಣೆಗಳಿಗಂತೂ ಲೆಕ್ಕವಿಲ್ಲ. ಅದಕ್ಕೇ ಮಗ "ಕರೆಯುತಿಹವಲ್ಲ ತಂದೆ ಏನೇನೋ ಒಳಗೆ-ಹೊರಗೆ" ಎನ್ನುತ್ತಾನೆ. ಹಾಗೆ ಹೇಳುವಲ್ಲಿ ಅವನಲ್ಲಿ ಪ್ರಾಮಾಣಿಕತೆಯಿದೆ. "ಅಪ್ಪ, ನೀನು ಹೇಳಿದಂತೆ ನಾನೆಲ್ಲೂ ಹೋಗುವುದಿಲ್ಲ" ಎಂದು ಹೇಳಿಬಿಡಬಹುದಾಗಿತ್ತು. ಆದರೆ ಒಳ-ಹೊರಗಿನ ಒತ್ತಡವನ್ನು ಹತ್ತಿಕ್ಕಿ ಆ ಮಗ ತೋರಿಕೆಯ ಮಾತಾಡಲಿಲ್ಲ. ಕಾಡುತ್ತಿರುವ ಆಸೆ-ಆಕರ್ಷಣೆಗಳನ್ನು ಸಂಕೋಚವಿಲ್ಲದೆ ತಂದೆಯ ಮುಂದಿಡುತ್ತಾನೆ.

ಆಗ ತಂದೆ, ಆಸೆಯ ಸ್ವಭಾವವೇ ಹಾಗೆ. ಅದು ಆಯಸ್ಕಾಂತದಂತೆ ನಮ್ಮನ್ನು ಸೆಳೆಯುತ್ತದೆ. ಅದು ಮೊದಮೊದಲು ಹಿತವಾಗಿಯೂ ಅನಿಸುತ್ತದೆ ಎಂಬುದಕ್ಕೆ "ಆಸೆ ಸೆಳೆವುದೆ ಹಾಗೆ" ಎನ್ನುತ್ತಾನೆ. ಅದು ನಿಜವಿರಬಹುದು. ಆಸೆಯ ಮಧುರರಸ ಒಸರುತ್ತದೆ. ಅದರ ಸ್ವಾದಕ್ಕಾಗಿ ನಮ್ಮ ಕಣ್ಣು-ನಾಲಗೆಗಳು ತವರಿಸುತ್ತವೆ "ಕಣ್ಣ ಮುಂದೆ ಹಣ್ಣಿದ್ದರೂ ಹಸಿವಿದ್ದರೂ ಅದನ್ನು ಸವಿಯದಿದ್ದರೆ ಹೇಗೆ?" ಎಂದು ಪ್ರಶ್ನಿಸುತ್ತಾನೆ ಮಗ. ಅದಕ್ಕೆ ತಂದೆ "ಕೆಟ್ಟದ್ದೆಲ್ಲ ಹಾಗೆ ಮಗುವೆ" ಎನ್ನುತ್ತಾನೆ. ಮದ್ಯಪಾನ, ಜೂಜು, ಲೈಂಗಿಕ ಲಾಲಸೆ, ಹಣ, ಅಧಿಕಾರ ಇವುಗಳ ಆಕರ್ಷಣೆಗಳೂ ಹಾಗೆಯೇ. ಅವುಗಳ ವಿಶೇಷವೆಂದರೆ, ತಮ್ಮ ವಿಶಿಷ್ಟ ಆಕರ್ಷಣೆಗಳಿಂದಾಗಿ ದುರ್ಬಲ ಮನಸ್ಸುಗಳನ್ನು ಸೆಳೆಯುವ ಶಕ್ತಿಯಿರುವುದು. ಯಾರನ್ನು, ಯಾವಾಗ, ಎಲ್ಲಿ, ಹೇಗೆ ಬಲಿ ತೆಗೆದುಕೊಳ್ಳಬೇಕೆಂಬ ಕಲೆ ಅವುಗಳಿಗೆ ಸಿದ್ಧಿಸಿದೆ. ಆತ್ಮಸಂಯಮ ಇದ್ದವನು ಆ ಬಲೆಗೆ ಬೀಳಲಾರ. ಅಂತಹ ಸಂದರ್ಭಗಳಲ್ಲಿ ಹೊರಗಣ್ಣು ಮುಚ್ಚಿ ತನ್ನೊಳಗೇ ದೃಷ್ಟಿ ಹಾಯಿಸುತ್ತಾನೆ. ಹೊರಗಣ್ಣಿನಿಂದ ಅವನ್ನು ನಿಟ್ಟಿಸಿ ನೋಡುತ್ತಿದ್ದರೆ, ಅವು ಮೋಡಿ ಮಾಡಿಬಿಡುತ್ತವೆಂಬುದನ್ನು ತಂದೆ ಬಲ್ಲ. ಅಂತೇ ಕಣ್ಣು ಮುಚ್ಚಿಕೊಳ್ಳುತ್ತಾನೆ. ಅದನ್ನು ಕಂಡು "ಮೂಗು-ಕಣ್ಣುಗಳನೇಕೆ ಮುಚ್ಚುವಿಯಪ್ಪ?" ಎಂದು ಕೇಳುತ್ತಾನೆ.

ಈ ಮಗು ಮುಗ್ಧನಾದರೂ ಸಾಮಾನ್ಯನಲ್ಲ. ಅವನು ಕೇಳುವ ಪ್ರಶ್ನೆಗಳು ಯಾರನ್ನಾದರೂ ತಬ್ಬಿಬ್ಬು ಮಾಡುವಂತಹವು. ಸೃಷ್ಟಿ ನಮಗೆ ಕಣ್ಣು-ಮೂಗುಗಳನ್ನು ಕೊಟ್ಟಿರುವುದೇ ದೃಶ್ಯ-ವಾಸನೆಗಳನ್ನು ಅನುಭವಿಸುವುದಕ್ಕಾಗಿ. ಹೀಗಿದ್ದೂ ಇವುಗಳನ್ನು ಮುಚ್ಚಿಕೊಳ್ಳುವುದೇಕೆ ಎಂಬುದು ಮಗನ ಪ್ರಶ್ನೆ. ಸರಿಯಾದ ಪ್ರಶ್ನೆಯೇ. ಹಾಗೆಯೇ ಆ ಪ್ರಬುದ್ಧ ತಂದೆಯೂ ಅಷ್ಟೆ. ಮಗನ ಪ್ರಶ್ನೆಗೆ ಉತ್ತರಿಸಲು ಅಳುಕಲಿಲ್ಲ ಅಥವಾ ಹಾರಿಕೆಯ ಉತ್ತರ ಕೊಡಲಿಲ್ಲ.

"ಮಂತ್ರ ಹಿಡಿದೊಳಗಿಳಿವುದಕ್ಕೆ" ಎನ್ನುತ್ತಾನೆ. ಮಂತ್ರ ಎಂದರೆ ಪ್ರಾರ್ಥನೆ ಎಂಬರ್ಥವಿದ್ದರೂ ಅದು ಅಂತರಾತ್ಮನೊಡನೆ ನಡೆಯುವ ಅನುಸಂಧಾನ. ಧ್ಯಾನ ಮಾಡುವಾಗ ಕಣ್ಣು ಮುಚ್ಚುವುದು ಹೊರಗಿನ ಸೆಳೆತಗಳಿಗೆ ನಮ್ಮ ಮನ ಒಳಗಾಗಬಾರದೆಂದು. ಧ್ಯಾನ ಮನದ ಕೇಂದ್ರೀಕರಣದ ಒಂದು ಪ್ರಭಾವಪೂರ್ಣ ಮಾರ್ಗ. ಅಂತೇ ಆ ತಂದೆ "ಮಂತ್ರದ ಮೂಲಕ ಅಂತರಾತ್ಮನ ಬಳಿಗೆ ಹೋಗಲಿಕ್ಕಾಗಿ ಕಣ್ಣು ಮುಚ್ಚಿದೆ" ಎನ್ನುತ್ತಾನೆ.

ಆದರೆ ಕೆಟ್ಟದೆನ್ನುವುದರಿಂದ ದೂರವಿರಲು ಇಷ್ಟೆಲ್ಲ ಕಷ್ಟಪಡಬೇಕೆ ಎನ್ನುವುದು ಮಗನ ಗೊಂದಲ. ತಂದೆಯನ್ನು ಕೇಳಿಯೇ ಬಿಡುತ್ತಾನೆ : "ಅಪ್ಪ ಇದಕ್ಕೇಕಿಷ್ಟು ಪರದಾಟ?" ಎಂದು. ಅಪ್ಪನ ಪರವಸ್ತುವಿನ ನೋಟ ಮಗನಿಗೆ 'ಪರದಾಟ'ವೆನಿಸಿದೆ! ಆದರೂ ಅವನ ಮಾತಿನಲ್ಲಿ ಗಂಭೀರ ಸತ್ಯದ ಹುಡುಕಾಟವಿದೆ, ಹಂಬಲವಿದೆ. ಅದನ್ನು ಅರ್ಥಮಾಡಿಕೊಂಡ ತಂದೆ, ಮಗನಿಗೆ "ಏನು ಹುಡುಕಾಟ?" ಎನ್ನಲಿಲ್ಲ. ಅಂತರ್ಮುಖದ ಆನಂದವನ್ನು ಮಾತುಗಳಲ್ಲಿ ಹೇಳಲಾಗುವುದಿಲ್ಲ. ಎಂತಲೇ "ದೊಡ್ಡದೆಲ್ಲ ಹಾಗೆ ಮಗು. ಹುಬ್ಬುಗಳ ಮಧ್ಯೆ ಬೆಳಕೆದ್ದು ಬಳ್ಳಿವರಿದೆರಡೂ ಸರೋವರಗಳಲ್ಲಿ ಕಡಲಾಗುವುದು" ಎನ್ನುತ್ತಾನೆ ತಂದೆ. ಈ ಮಾತು ಮನದ ಘನಗಂಭೀರ ಅವಸ್ಥಾ ಸ್ಥಿತಿಯನ್ನು ತಿಳಿಸುತ್ತದೆ. ಇದು ಯೋಗದಲ್ಲಿ ಅನುಭವವಾಗುವ ಒಂದು ಅನಿರ್ವಚನೀಯ ಅವಸ್ಥೆ! ಅದನ್ನು ಅರ್ಥೈಸಲಾಗದ ಕಾರಣ "ದೊಡ್ಡದೆಲ್ಲ ಹಾಗೆ ಮಗು" ಎಂದ ತಂದೆ, "ಹುಬ್ಬುಗಳ ಮಧ್ಯೆ ಬೆಳಕೆದ್ದು" ಎಂದರೆ, ದೃಷ್ಟಿಯೋಗದ ವ್ಯಕ್ತಿಗೆ ಭೂಮಧ್ಯದಲ್ಲಿ ಬೆಳಕಿನ ಚುಳುಕೊಂದರ ಅನುಭವವಾಗುತ್ತದೆ. ಅದು ಅವರ್ಣನೀಯ. ಅದನ್ನೇ ತಂದೆ "ಆ ಬೆಳಕೇ ಆನಂದಜಲವಾಗಿ ಕಣ್ಣಿನಲ್ಲಿ ತುಂಬಿಕೊಳ್ಳುತ್ತದೆ. ಆ ಎರಡೂ ಕಣ್ಣುಗಳೇ (ಇಲ್ಲಿ ಕವಿ ಹೇಳುವ ಎರಡು ಸರೋವರಗಳು) ಆನಂದದ ಜಲತುಂಬಿ ಕಡಲಾಗುತ್ತವೆ" ಎಂದಿದ್ದಾನೆ.

ಇಷ್ಟೆಲ್ಲ ಹೇಳಿದ ಮೇಲೂ ಆ ಮಗು ಮತ್ತೊಂದು ಪ್ರಶ್ನೆಯನ್ನು ತಂದೆಯ ಮುಂದಿಡುತ್ತಾನೆ : "ಹಾಗಾದರೆ ಹೊರಗಿರುವುದರ ಗುರಿಯೇನು ತಂದೆ?" ಈಗ ತಂದೆ ಪೂರ್ಣ ಅಂತರ್ಮುಖಿಯಾಗಿದ್ದಾನೆ. ಮೌನ ತಾಳಿದ್ದಾನೆ. ವ್ಯಕ್ತಿ ಚೈತನ್ಯ ವಿಶ್ವಚೈತನ್ಯದಲ್ಲಿ ಸಮರಸಗೊಂಡಿದೆ. ಅವನಿಗೆ ಹೊರಗಿನದೇನೂ ಕಾಣಿಸುತ್ತಿಲ್ಲ. ತಂದೆಯ ಈ ಮೌನಮುದ್ರೆಯೇ ಮಗನಿಗೆ ಉತ್ತರವಾಗುತ್ತದೆ!

ಈ ಕವನ ಅಂತರ್ಚಿಂತನೆಗೆ ಒಂದು ಸ್ಪಷ್ಟ ಸಂದೇಶ ನೀಡುತ್ತದೆ. ಈ ಅಂತರಂಗದ ಅನುಭವ ಅನಂತವಾದುದು; ಅದ್ಭುತವಾದುದು. ಅದರ ಬಗೆಗೆ ನಾವು ಚಿಂತನೆ ನಡೆಸಬೇಕು; ಸಾಧನೆ ನಡೆಸಬೇಕು. ಸಾಧನೆಗೆ ನಿಲುಕದ್ದು ಏನೂ ಇಲ್ಲ. ಅದನ್ನು ಸಾಧಿಸಬೇಕು ಅಷ್ಟೆ. ಅದಕ್ಕೆ ಬೇಕಾಗಿರುವುದು ಪೂರ್ಣ ಶ್ರದ್ಧಾನಿಷ್ಠೆ ಮತ್ತು ಪ್ರಾಮಾಣಿಕ ಪ್ರಯತ್ನ.

ನಮ್ಮ ಗೊಂದಲವಿರುವುದು ಈ ಒಳ-ಹೊರಗನ್ನು ಅರ್ಥಮಾಡಿಕೊಳ್ಳುವಲ್ಲಿ. ಹೊರಗಿರುವುದರ ಗುರಿ ಒಳಗಿರುವುದಕ್ಕೆ ಬಳಕೆಯಾಗಬೇಕು; ಒಳಗಿರುವುದರ ಗುರಿ ಹೊರಗಿರುವುದಕ್ಕೆ ರಕ್ಷೆಯಾಗಬೇಕು. ಈ ಅನುಸಂಧಾನವನ್ನೇ 'ಅನುಭಾವ' ಎನ್ನುವುದು.




# ದಿ|| ವಿ.ಪಿ. ದೀನದಯಾಳು ನಾಯ್ಡುರವರ 107ನೇ ಹುಟ್ಟುಹಬ್ಬ ಆಚರಣೆ



ಆಗಸ್ಟ್ 16 ರಂದು ರಾಜ್ಯ ಕೇಂದ್ರ ಕಛೇರಿಯಲ್ಲಿ ದಿ|| ವಿ.ಪಿ. ದೀನದಯಾಳು ನಾಯ್ಡು ರವರ 107ನೇ ಹುಟ್ಟುಹಬ್ಬವನ್ನು ಬಿ.ಬಿ.ಎಂ.ಪಿ. ಜಿಲ್ಲಾ ಸಂಸ್ಥೆ ಸಹಯೋಗದೊಂದಿಗೆ ನೆರವೇರಿಸಲಾಯಿತು.

ಸನ್ಮಾನ್ಯಶ್ರೀ ರಾಮಲಿಂಗಾರೆಡ್ಡಿ, ಮಾನ್ಯ ಸಾರಿಗೆ ಮತ್ತು ಮುಜರಾಯಿ ಇಲಾಖೆಗಳ ಸಚಿವರು, ಕರ್ನಾಟಕ ಸರ್ಕಾರ ಇವರು “ಆಹಾರ ಧಾನ್ಯ ಮತ್ತು ವಸ್ತ್ರ ಬ್ಯಾಂಕ್” ಹಾಗೂ ಹುಟ್ಟುಹಬ್ಬದ ಕಾರ್ಯಕ್ರಮವನ್ನು ದೀಪ ಬೆಳಗಿಸುವುದರೊಂದಿಗೆ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅವರು ಮಾತನಾಡಿ ವಿ.ಪಿ. ದೀನದಯಾಳು ನಾಯ್ಡುರವರ ವ್ಯಕ್ತಿತ್ವ, ಅವರ ಸಾಧನೆ ಬಗ್ಗೆ ಶ್ಲಾಘಿಸಿ ಅವರ ಸೇವೆಯನ್ನು ಸ್ಮರಿಸಿದರು ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ಸಂಪೂರ್ಣ ಸಹಕಾರ ಮತ್ತು ಪ್ರೋತ್ಸಾಹವನ್ನು ನೀಡುವುದಾಗಿ ತಿಳಿಸಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಮಾತನಾಡಿ ವಿ.ಪಿ. ದೀನದಯಾಳು ನಾಯ್ಡುರವರು ಬೆಂಗಳೂರು ಮಹಾನಗರ ಪಾಲಿಕೆ ಉಪ ಮಹಪೌರರು ಮತ್ತು ಮಹಾಪೌರರಾಗಿದ್ದ ಸಂದರ್ಭದಲ್ಲಿ ಮಾಡಿದ ಸೇವೆಗಳನ್ನು ಕೊಂಡಾಡಿದರು ಹಾಗೂ ಸ್ಕೌಟ್-ಗೈಡ್ ಸಂಸ್ಥೆಯಲ್ಲಿ ಅವರು ತೊಡಗಿಸಿಕೊಂಡಿದ್ದ ವಿವರಗಳನ್ನು ಸ್ಮರಿಸಿದರು. ಅವರ ಸರಳತೆ, ಸಜ್ಜನಿಕೆ, ಗಾಂಭೀರ್ಯ, ಪರೋಪಕಾರಗಳು ಇವುಗಳು ನಮಗೆಲ್ಲಾ ಆದರ್ಶ ಎಂದು ತಿಳಿಸಿದರು.

ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ಉಪಾಧ್ಯಕ್ಷರು ಮಾತನಾಡಿ ವಿ.ಪಿ. ದೀನದಯಾಳು ನಾಯ್ಡು ಅವರೊಂದಿಗೆ ರಾಜ್ಯ ಕಾರ್ಯದರ್ಶಿಯಾಗಿ, ರಾಜ್ಯ ಕೋಶಾಧಿಕಾರಿಯಾಗಿ, ಜಾಂಬೂರಿಗಳು ಹಾಗೂ ಇತ್ಯಾದಿಗಳಲ್ಲಿ ಸೇವೆ ಸಲ್ಲಿಸುವ ಅವಕಾಶ ಲಭಿಸಿದ್ದು ನನ್ನ ಸೌಭಾಗ್ಯ ಎಂದು ತಿಳಿಸಿದರು.

ಡಾ. ಎನ್.ಸಿ. ವೆಂಕಟರಾಜು, ಉಪ ಆಯುಕ್ತರು, ಬಿ.ಬಿ.ಎಂ.ಪಿ. ಇವರು ಮಾತನಾಡಿ ಮಹನೀಯರ ಹುಟ್ಟುಹಬ್ಬಗಳನ್ನು ಆಚರಿಸುವ ಸಂಪ್ರದಾಯ ಬಹಳ ಒಳ್ಳೆಯದು. ನಾನೂ ಸಹ ಅವರು ಹಾಕಿಕೊಟ್ಟ ದಾರಿಯಲ್ಲಿ ಸಾಗುತ್ತೇನೆ ಎಂದು ತಿಳಿಸಿದರು.

ವಿ.ಪಿ. ದೀನದಯಾಳು ನಾಯ್ಡು ರವರ ಸುಪುತ್ರರೂ ಹಾಗೂ ಸಹಾಯಕ ರಾಜ್ಯ ಸ್ಕೌಟ್ ಆಯುಕ್ತರಾದ ಶ್ರೀ ಡಿ. ವೆಂಕಟೇಶ್ ಮಾತನಾಡಿ ಅವರ ಮಗನಾಗಿ ಹುಟ್ಟಿದ್ದು ನನ್ನ ಸೌಭಾಗ್ಯ, ಅವರು ಹೇಳಿಕೊಟ್ಟ ಅನೇಕ ಮಾರ್ಗದರ್ಶನಗಳನ್ನು ನಾನು ಪಾಲಿಸುತ್ತಿದ್ದೇನೆ. ಶ್ರದ್ಧೆ, ಶ್ರಮ, ಜವಾಬ್ದಾರಿ ಇವುಗಳು ಅವರ ಸದ್ಗುಣಗಳಲ್ಲಿ ಬಹಳ ಮುಖ್ಯವಾದವುಗಳು ಎಂದು ತಿಳಿಸಿದರು.

ಬಿ.ಬಿ.ಎಂ.ಪಿ. ಸ್ಕೌಟ್ಸ್, ಗೈಡ್ಸ್ ಮಕ್ಕಳಿಗೆ ಪ್ಲಾಸ್ಟಿಕ್ ನಿಯಂತ್ರಣ ಮತ್ತು ನೀರು ಉಳಿಕೆ ಬಗ್ಗೆ ಭಾಷಣ ಸ್ಪರ್ಧೆಯನ್ನು ಏರ್ಪಡಿಸಿ 40 ಮಕ್ಕಳಿಗೆ ಬಹುಮಾನವನ್ನು ವಿತರಿಸಲಾಯಿತು. ಇದೇ ಸಂದರ್ಭದಲ್ಲಿ ಡಾ|| ಎಲ್.ಹೆಚ್. ಶಿವಶಂಕರಪ್ಪ, ಪ್ರಾಂಶುಪಾಲರು, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಬೆಂಗಳೂರು ಇವರು ಮಕ್ಕಳಿಗೆ ಶುಭಹಾರೈಸಿ ಸ್ಕೌಟ್-ಗೈಡ್ ಸಂಸ್ಥೆಗೆ ನಾನು ಸದಾ ಬೆಂಬಲವಾಗಿರುತ್ತೇನೆ ಎಂದು ತಿಳಿಸಿದರು.

ಶ್ರೀ ಎಂ.ಎ. ಖಾಲಿದ್, ರಾಜ್ಯ ಆಯುಕ್ತರು (ಸ್ಕೌಟ್ಸ್), ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್ಸ್) ಇವರು ವಿ.ಪಿ. ದೀನದಯಾಳು ನಾಯ್ಡುರವರ ಬಗ್ಗೆ ಅವರ ಕೆಲಸದ ವೈಖರಿ, ಸಹೃದಯತೆಯ ಬಗ್ಗೆ ಮಾತನಾಡಿದರು.

ಬಿ.ಬಿ.ಎಂ.ಪಿ ಜಿಲ್ಲೆಯ 450ಕ್ಕೂ ಹೆಚ್ಚು ಸ್ಕೌಟ್ಸ್, ಗೈಡ್ಸ್, ಶಿಕ್ಷಕ/ ಶಿಕ್ಷಕಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಇವರಿಗೆ ಊಟೋಪಚಾರದ ವ್ಯವಸ್ಥೆಯನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಇವರು ಏರ್ಪಡಿಸಿ ಸಹಕರಿಸಿದರು. ಶ್ರೀಮತಿ ಬಿ.ವಿ. ರಾಮಲತ, ರಾಜ್ಯ ಜಂಟಿ ಕಾರ್ಯದರ್ಶಿ (ಗೈ), ಶ್ರೀಮತಿ ಮುಕ್ತಾ ಕಾಗಲೆ, ರಾಜ್ಯ ಕೇಂದ್ರ ಸ್ಥಾನಿಕ ಆಯುಕ್ತರು (ಗೈ), ಶ್ರೀಮತಿ ಗೀತಾಂಜಲಿ ವೆಂಕಟೇಶ್, ಬಿ.ಬಿ.ಎಂ.ಪಿ. ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು, ರಾಜ್ಯ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿದ್ದರು.



# ದಿ|| ವಿ.ಪಿ. ದೀನದಯಾಳು ನಾಯ್ಡು
## ಬಹುಮುಖ ವ್ಯಕ್ತಿತ್ವ

ದಿ. ಶ್ರೀ ವಿ. ಪಾಪಯ್ಯ ನಾಯ್ಡು ಅವರ ಪುತ್ರರಾದ ಶ್ರೀ ವಿ.ಪಿ. ದೀನದಯಾಳು ನಾಯ್ಡು ಅವರು ಜನಿಸಿದ್ದು 1917 ಆಗಸ್ಟ್ 16 ರಂದು. ದೇಶದ ಸ್ವಾತಂತ್ರ್ಯ ಹೋರಾಟದ ಮೂಲಕ ದೇಶದ ಸೇವೆ ಸಲ್ಲಿಸುವ ಆಸಕ್ತಿಯಿಂದ 1942ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿಗೆ ಸೇರ್ಪಡೆಗೊಂಡು ಸ್ವಾತಂತ್ರ್ಯ ಹೋರಾಟದ ಮುಂದಾಳುಗಳಾಗಿದ್ದ ಮಹಾತ್ಮ ಗಾಂಧೀಜಿ, ಶ್ರೀ ಜವಾಹರ್‌ಲಾಲ್ ನೆಹರು, ಶ್ರೀ ರಾಜಗೋಪಾಲಚಾರಿ, ಶ್ರೀ ನಿಜಲಿಂಗಪ್ಪ ಮುಂತಾದ ನಾಯಕರ ಮಾರ್ಗದರ್ಶನ ದೊಡನೆ ಕ್ವಿಟ್‌ಇಂಡಿಯಾ ಚಳುವಳಿಯಲ್ಲಿ ನೇರವಾಗಿ ಪಾಲುಗೊಂಡು 2 ಬಾರಿ ಸೆರೆಮನೆ ವಾಸ ಅನುಭವಿಸಿದರು.

ಇವರು 1948ರಲ್ಲಿ ರಾಜ್ಯ ವಿಧಾನ ಪರಿಷತ್ ಸದಸ್ಯರಾಗಿ ನಾಮಕರಣಗೊಂಡರು. 1957–62ರ ಅವಧಿಯಲ್ಲಿ ಕಬ್ಬನ್‌ಪೇಟೆ ಕ್ಷೇತ್ರದಿಂದ ಕರ್ನಾಟಕ ವಿಧಾನ ಸಭೆಯ ಸದಸ್ಯರಾಗಿ ಆಯ್ಕೆಯಾದರು. 1945ರಲ್ಲಿ ಕಾನೂನು ಪದವಿಗಳಿಸಿ, ಕರ್ನಾಟಕ ನ್ಯಾಯವಾದಿಗಳ ಮಂಡಳಿ ಸದಸ್ಯರಾಗಿ 1947ರಲ್ಲಿ ಕರ್ನಾಟಕ ಅಡ್ವೊಕೇಟ್ ಜನರಲ್ ಆಗಿ ಹೆಸರಾಂತ ನ್ಯಾಯವಾದಿಯಾಗಿ ಬೆಳೆದು ಬಂದರು.

1949ರಲ್ಲಿ ಬೆಂಗಳೂರು ನಗರ ಪಾಲಿಕೆಯ ಮೊದಲ ಉಪಮಹಾಪೌರರಾಗಿ, ನಂತರ 1955ರಲ್ಲಿ ಬೆಂಗಳೂರು ನಗರ ಮಹಾಪೌರರಾಗಿ ಆಯ್ಕೆಯಾಗಿ ನಗರದ ಸಮಗ್ರ ಅಭಿವೃದ್ಧಿಗೆ ಅಡಿಪಾಯ ಹಾಕಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿ ಹಾಗೂ ಸಾರ್ವಜನಿಕ ಸೇವಾ ಕಾರ್ಯಗಳಲ್ಲಿ ಶ್ರೀ ವಿ.ಪಿ. ದೀನದಯಾಳು ನಾಯ್ಡು ಅವರದ್ದು ಸ್ಮರಣೀಯ ದಾಖಲೆ. 6 ದಶಕಗಳ ಸುದೀರ್ಘ ಸೇವೆಯನ್ನು ಸಮರ್ಪಿಸಿದ ಇವರು ರಾಜ್ಯ ಕಾರ್ಯದರ್ಶಿಯಾಗಿ ನಮ್ಮ ಸಂಘಟನೆಯಲ್ಲಿ ಸಹಾಯಕ ರಾಜ್ಯ ಆಯುಕ್ತರಾಗಿ, ಬೆಂಗಳೂರು ಉತ್ತರ ಜಿಲ್ಲಾ ಮುಖ್ಯ ಆಯುಕ್ತರಾಗಿ, ರಾಜ್ಯ ಸ್ಕೌಟ್ ಆಯುಕ್ತರಾಗಿ, ರಾಜ್ಯ ಮತ್ತು ರಾಷ್ಟ್ರೀಯ ಮುಖ್ಯ ಆಯುಕ್ತರಾಗಿ ಕರ್ನಾಟಕ ರಾಜ್ಯದ ಸ್ಕೌಟ್–ಗೈಡ್ ಚಳವಳಿಯನ್ನು ಅಭಿವೃದ್ಧಿ ಪಡಿಸುವಲ್ಲಿ ಇವರ ಕೊಡುಗೆ ಅಪಾರವಾದುದು.

ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ರಾಜ್ಯದ ಸಪ್ತರ್ಷಿಗಳಾದ ರಾಜ್ಯ ಮುಖ್ಯ ಆಯುಕ್ತರ ಹುಟ್ಟುಹಬ್ಬ ಹಾಗೂ ಅವರ ಸಾಧನೆಗಳನ್ನು ಸದಾ ಸ್ಮರಿಸಿ ಅವರ ಕುಟುಂಬದೊಂದಿಗೆ ಕೃತಜ್ಞತೆಯನ್ನು ಸಲ್ಲಿಸುವ ಪರಿಪಾಠ ಹಾಕಿಕೊಂಡು ನಿರಂತರವಾಗಿ ನಡೆಸುತ್ತಿದ್ದಾರೆ. ಈ ನಿಟ್ಟಿನಲ್ಲಿ ವಿ.ಪಿ. ದೀನದಯಾಳು ನಾಯ್ಡುರವರ ಸೇವೆಯನ್ನು ಅಪಾರವಾಗಿ ಸ್ಮರಿಸಿ 2016ರಲ್ಲಿ ರಾಜ್ಯಾದ್ಯಂತ ನಡೆದ ಎಲ್ಲಾ ಚಟುವಟಿಕೆ, ಕಾರ್ಯಕ್ರಮ, ತರಬೇತಿಗಳನ್ನು ಶ್ರೀ ನಾಯ್ಡುರವರಿಗೆ ಸ್ಮರಣಾರ್ಥ ಸಮರ್ಪಿಸಿದರು.

ಬಿ.ಬಿ.ಎಂ.ಪಿ ಸಹಯೋಗದೊಂದಿಗೆ 29 ಡಿಸೆಂಬರ್ 2017 ರಂದು ಶ್ರೀ ಎಂ. ವೆಂಕಯ್ಯ ನಾಯ್ಡು, ಮಾನ್ಯ ಉಪ ರಾಷ್ಟ್ರಪತಿಗಳನ್ನು ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಿ ಶ್ರೀ ನಾಯ್ಡುರವರ ಶತಮಾನೋತ್ಸವ ಸಮಾರಂಭವನ್ನು ಯಶಸ್ವಿಯಾಗಿ ಆಚರಿಸಲಾಯಿತು.

## ಹಸಿರೆ-ಉಸಿರು....



ಹಸಿರಿನಿಂದ ಕಂಗೊಳಿಸುವ
ಭೂಮಿ ತಾಯಿಯ ಒಡಲು
ಮಾತೃ ಹೃದಯದ ಮಡಿಲು
ಬಾಳಿ ಬದುಕಲು ನಾವುಗಳು ॥೧॥

ಪ್ರಕೃತಿಯಲ್ಲಿ ವಿಧ ವಿಧ
ಹೂವುಗಳು ನೋಡಲು
ಎರಡು ಕಣ್ಣುಗಳು ಸಾಲದು
ಅಮ್ಮ ಅಂದರೆ ಹಾಗೆ ಇರಲು ॥೨॥

ಕೃತಕ ಮೇಕಪ್ ಯಾಕೆ
ಅವಳ ಉಸಿರೆ ಸಾಕು
ನಾವು ಬಾಳಿ ಬದುಕಲು
ಹಸಿರೆ ನಮ್ಮ ಉಸಿರು ॥೩॥

ಸಾಲು ಸಾಲು ಸಸಿಗಳು
ಹನಿ, ಹನಿ, ಮಳೆ ಬರಲು
ಹಸಿರು ಸೀರೆ ಉಟ್ಟ ಸುಂದರಿ
ಒಬ್ಬಳು ಸುಂದರ ಸುಂದರ ॥೪॥

ಹೆಣ್ಣನ್ನು ಪೂಜಿಸಿ
ಹೆಣ್ಣನ್ನು ಗೌರವಿಸಿ
ಹೆಣ್ಣ ಮಕ್ಕಳ ಪ್ರೋತ್ಸಾಹಿಸಿ
ಪ್ರಕೃತಿ ಮಾತೆಯ ಮಕ್ಕಳಲ್ಲವೆ ॥೫॥

ಬನ್ನಿ ಬನ್ನಿ ಎಲ್ಲರು
ಪ್ರಕೃತಿ ಮಾತೆಯ ಗೌರವಿಸೋಣ
ಪರಿಸರವ ಉಳಿಸೋಣ
ಪರಿಸರವ ಬೆಳೆಸೋಣ ॥೬॥

ಚಂದ್ರಕಲಾ ಎಂ. ಪಾಟೀಲ್
ಹಿ.ವೃ.ಮ.(ಗೈ), ಕಲಬುರಗಿ

# ರಾಜ್ಯ ಮಟ್ಟದ
# ರಾಜ್ಯ ಪುರಸ್ಕಾರ ಸ್ಕೌಟ್ಸ್–ಗೈಡ್ಸ್ ಪರೀಕ್ಷಾ ಶಿಬಿರ

**ಕೊಂಡಜ್ಜಿ –** ರಾಜ್ಯ ಸಂಸ್ಥೆಯ ವತಿಯಿಂದ ಆಗಸ್ಟ್ 09 ರಿಂದ 11ರ ವರೆಗೆ ದಾವಣಗೆರೆ, ಚಿಕ್ಕಮಗಳೂರು, ಶಿವಮೊಗ್ಗ ಹಾಗೂ ಗದಗ ಜಿಲ್ಲೆಗಳ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ಸ್ಕೌಟ್ಸ್–ಗೈಡ್ಸ್ ಪರೀಕ್ಷಾ ಶಿಬಿರವನ್ನು ಕೊಂಡಜ್ಜಿ ಬಸಪ್ಪ, ರಾಜ್ಯ ತರಬೇತಿ ಕೇಂದ್ರ, ಕೊಂಡಜ್ಜಿ, ದಾವಣಗೆರೆ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಪರೀಕ್ಷಾ ಶಿಬಿರದಲ್ಲಿ 220 ಸ್ಕೌಟ್ಸ್, 248 ಗೈಡ್ಸ್, ದಳ ನಾಯಕರುಗಳು ಹಾಗೂ ಸ್ಕೌಟ್–ಗೈಡ್ ವಿಭಾಗದಿಂದ 11 ಸಹ ನಾಯಕರುಗಳು ಹಾಗೂ ಇಬ್ಬರು ನಾಯಕರು ಸೇರಿ ಒಟ್ಟು 481 ಜನರು ಭಾಗವಹಿಸಿದರು. ಶ್ರೀ ಚಂದ್ರಶೇಖರಯ್ಯ, ಸ್ಕೌಟ್ ವಿಭಾಗ ಮತ್ತು ಶ್ರೀಮತಿ ಎಂ. ರತ್ನಾ, ಗೈಡ್ ವಿಭಾಗದ ನಾಯಕರುಗಳಾಗಿದ್ದರು.

**ದೊಡ್ಡಬಳ್ಳಾಪುರ –** ಆಗಸ್ಟ್ 9 ರಿಂದ 11ರ ವರೆಗೆ ಡಾ. ಅನಿಬೆ ಸೆಂಟ್ ಪಾರ್ಕ್, ರಾಜ್ಯ ಸ್ಕೌಟ್ಸ್ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರದಲ್ಲಿ ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರವನ್ನು ಏರ್ಪಡಿಸಲಾಗಿತ್ತು, ಶಿಬಿರದಲ್ಲಿ ಬೆಂಗಳೂರು ದಕ್ಷಿಣ, ಬೆಂಗಳೂರು ಪೂರ್ವ, ಕೋಲಾರ, ಕಲ್ಬುರ್ಗಿ ಮತ್ತು ತುಮಕೂರು ಜಿಲ್ಲೆಗಳ 177 ಸ್ಕೌಟ್ಸ್ 139 ಗೈಡ್ಸ್, 32 ದಳನಾಯಕರು, 15 ಸಿಬ್ಬಂದಿಗಳು ಭಾಗವಹಿಸಿದ್ದರು. ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಆಗಸ್ಟ್ 10 ರಂದು ಶಿಬಿರಕ್ಕೆ ಬೇಟಿ ನೀಡಿ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಹಾಗೂ ಶಿಕ್ಷಕರುಗಳಿಗೆ ಪ್ರೋತ್ಸಾಹ ನೀಡಿ ಪ್ರಾವಿಣ್ಯತಾ ಪದಕಗಳು ಮತ್ತು ಕೌಶಲ್ಯಗಳಿಂದ ಆಗುವ ಉಪಯೋಗ ಮತ್ತು ಅವಶ್ಯಕತೆಗಳನ್ನು ತಿಳಿಸಿ ಅವರೊಂದಿಗೆ ಸಂವಾದವನ್ನು ನಡೆಸಿದರು. ಪರೀಕ್ಷಾ ಶಿಬಿರದ ಸ್ಕೌಟ್ಸ್ ವಿಭಾಗದ ನಾಯಕರಾಗಿ ಶ್ರೀ ಕೃಷ್ಣಯ್ಯ ಹೆಚ್.ವಿ. ಮತ್ತು ಗೈಡ್ಸ್ ವಿಭಾಗದ ನಾಯಕರಾಗಿ ಶ್ರೀಮತಿ ಅರುಣಮಾಲ, ಸೇವೆಯನ್ನು ಸಲ್ಲಿಸಿದರು. ರಾಜ್ಯ ಪುರಸ್ಕಾರ ಪರೀಕ್ಷೆಯ ಎಲ್ಲಾ ವಿಷಯಗಳ ಬಗ್ಗೆ ಪ್ರಾಯೋಗಿಕವಾಗಿ, ಮೌಖಿಕ ಮತ್ತು ಲಿಖಿತವಾಗಿ ಪರೀಕ್ಷೆಗಳನ್ನು ನಡೆಸಲಾಯಿತು. ಶ್ರೀಮತಿ ಸಿ. ಮಂಜುಳ, ರಾಜ್ಯ ಸಂಘಟನಾ ಆಯುಕ್ತರು ಗೈಡ್ಸ್ ಶಿಬಿರದ ಮೇಲ್ವಿಚಾರಕರಾಗಿ ಕಾರ್ಯನಿರ್ವಹಿಸಿದರು. ಶಿಬಿರದ ಯಶಸ್ವಿಗೆ ಶ್ರೀ ನಾಗರಾಜ, ಜಿಲ್ಲಾ ಮುಖ್ಯ ಆಯುಕ್ತರು ಬೆಂಗಳೂರು ಗ್ರಾಮಾಂತರ ಇವರು ಉತ್ತಮ ಸಹಕಾರ ನೀಡಿದರು. ರಾಜ್ಯ ಸಂಘಟನಾ ಆಯುಕ್ತರು (ಸ್ಕೌ) ಶ್ರೀ ಎಂ. ಪ್ರಭಾಕರ್ ಭಟ್ ಇವರು ಶಿಬಿರಕ್ಕೆ ಭೇಟಿ ನೀಡಿ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಹಾಗೂ ಶಿಕ್ಷಕರನ್ನು ಪ್ರೋತ್ಸಾಹಿಸಿದರು.

**ಬೆಳಗಾವಿ –** ರಾಜ್ಯ ಸಂಸ್ಥೆ ಹಾಗೂ ಬೆಳಗಾವಿ ಜಿಲ್ಲಾ ಸಂಸ್ಥೆಯ ಸಹಯೋಗದೊಂದಿಗೆ ಆಗಸ್ಟ್ 09 ರಿಂದ 11ರ ವರೆಗೆ ಬೆಳಗಾವಿ ಜಿಲ್ಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ಸ್ಕೌಟ್ಸ್–ಗೈಡ್ಸ್ ಪರೀಕ್ಷಾ ಶಿಬಿರವನ್ನು ಬೆಳಗಾವಿ ಸನ್ಮತಿ ವಿದ್ಯಾಲಯ, ಶೆಡ್ಬಾಲ್, ಕಾಗವಾಡ ತಾಲ್ಲೂಕು, ಬೆಳಗಾವಿ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಪರೀಕ್ಷಾ ಶಿಬಿರದಲ್ಲಿ 188 ಸ್ಕೌಟ್ಸ್, 182 ಗೈಡ್ಸ್, ದಳ ನಾಯಕರುಗಳು, ಸ್ಕೌಟ್–ಗೈಡ್ ವಿಭಾಗದಿಂದ 14 ಸಹ ನಾಯಕರುಗಳು ಹಾಗೂ ಇಬ್ಬರು ನಾಯಕರು ಸೇರಿ ಒಟ್ಟು 386 ಜನರು ಭಾಗವಹಿಸಿದ್ದರು. ಶ್ರೀ ಜಗದೀಶ್ ಬೋಳಸೂರ್, ಸ್ಕೌಟ್ ವಿಭಾಗ ಮತ್ತು ಶ್ರೀಮತಿ ಜಯಶೀಲ, ಗೈಡ್ ವಿಭಾಗದ ನಾಯಕರುಗಳಾಗಿದ್ದರು. ಶ್ರೀಮತಿ ಕೆ.ವಿ. ಶಾಮಲಾ, ರಾಜ್ಯ ತರಬೇತಿ ಆಯುಕ್ತರು (ಗೈಡ್)ರವರು ಪರಿವೀಕ್ಷಕರಾಗಿ ಕಾರ್ಯನಿರ್ವಹಿಸಿದರು.

**ಮೈಸೂರು –** ರಾಜ್ಯ ಸಂಸ್ಥೆ ಹಾಗೂ ಮೈಸೂರು ಜಿಲ್ಲಾ ಸಂಸ್ಥೆಯ ಸಹಯೋಗದೊಂದಿಗೆ ಆಗಸ್ಟ್ 11 ರಿಂದ 13ರ ವರೆಗೆ ಮೈಸೂರು, ಕೊಡಗು, ಚಾಮರಾಜನಗರ, ಮಂಡ್ಯ ಮತ್ತು ರಾಮನಗರ ಜಿಲ್ಲೆಗಳ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ಸ್ಕೌಟ್ಸ್–ಗೈಡ್ಸ್ ಪರೀಕ್ಷಾ ಶಿಬಿರವನ್ನು ಮೈಸೂರು ಶ್ರೀ ಜಯಚಾಮರಾಜೇಂದ್ರ ಸ್ಕೌಟ್–ಗೈಡ್ ಭವನ, ಮೈಸೂರು ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಪರೀಕ್ಷಾ ಶಿಬಿರದಲ್ಲಿ 127 ಸ್ಕೌಟ್ಸ್, 182 ಗೈಡ್ಸ್, 26 ದಳ ನಾಯಕರುಗಳು ಹಾಗೂ ಸ್ಕೌಟ್–ಗೈಡ್ ವಿಭಾಗದಿಂದ 14 ಸಹ ನಾಯಕರುಗಳು, ಇಬ್ಬರು ನಾಯಕರು ಹಾಗೂ 5 ಸ್ವಯಂ ಸೇವಕರು ಸೇರಿ ಒಟ್ಟು 356 ಜನರು ಭಾಗವಹಿಸಿದ್ದರು. ಶ್ರೀ ಜಿಮ್ಮಿ ಸಿಕ್ವೇರಾ, ಎಲ್.ಟಿ.(ಸ್ಕೌ)ರವರು ಸ್ಕೌಟ್ ವಿಭಾಗ ಮತ್ತು ಶ್ರೀಮತಿ ಬಿ.ಡಿ. ಶಾಂತಾ, ಎಲ್.ಟಿ.(ಗೈ)ರವರು ಗೈಡ್ ವಿಭಾಗದ ನಾಯಕರುಗಳಾಗಿದ್ದರು. ಶ್ರೀಮತಿ ಕುಮಾರಿ ಹೊನ್ನಮ್ಮ ಎನ್., ಸಹಾಯಕ ರಾಜ್ಯ ಸಂಘಟನಾ ಆಯುಕ್ತರು (ಗೈ) ಮತ್ತು ಪರೀಕ್ಷಾ ವಿಭಾಗದ ಉಸ್ತುವಾರಿ ಇವರು ಪರಿವೀಕ್ಷಕರಾಗಿ ಕಾರ್ಯನಿರ್ವಹಿಸಿರುತ್ತಾರೆ. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ವಿಶ್ವನಾಥ್‌ರವರು ಸರ್ವಧರ್ಮ ಪ್ರಾರ್ಥನೆಯಲ್ಲಿ ಭಾಗವಹಿಸಿರುತ್ತಾರೆ. ಶ್ರೀ ಜಮೀಲ್‌ಸಾಬ್, ಜಿಲ್ಲಾ ಕಾರ್ಯದರ್ಶಿ, ಶ್ರೀ ಗುರುಮೂರ್ತಿ, ಜಿಲ್ಲಾ ಖಜಾಂಚಿರವರು ಶಿಬಿರದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಕ್ಕಳನ್ನು ಪ್ರೋತ್ಸಾಹಿಸಿರುತ್ತಾರೆ.



## ರಾಜ್ಯ ಕೇಂದ್ರ ಕಛೇರಿಯಲ್ಲಿ

# 77ನೇ ಸ್ವಾತಂತ್ರ್ಯ ದಿನಾಚರಣೆ

ರಾಜ್ಯ ಕೇಂದ್ರ ಕಛೇರಿಯಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ನಾಡೋಜ ಡಾ. ಗೊ.ರು. ಚನ್ನಬಸಪ್ಪ, ಅಧ್ಯಕ್ಷರು, ಪ್ರಕಟಣೆಗಳ ಸಮಿತಿ ಹಾಗೂ ಹಿರಿಯ ಸಾಹಿತಿಗಳು, ಧ್ವಜಾರೋಹಣ ನೆರವೇರಿಸಿ, ಸ್ವಾತಂತ್ರ್ಯ ದಿನಾಚರಣೆ ವಿಶೇಷತೆ ಮತ್ತು ಹೋರಾಟಗಾರರ ತ್ಯಾಗ-ಬಲಿದಾನ, ರಾಷ್ಟ್ರಧ್ವಜ ಇತ್ಯಾದಿಗಳ ಬಗ್ಗೆ ತಿಳಿಸಿದರು. ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಮಾತನಾಡಿ, ಸ್ವಾತಂತ್ರ್ಯ ಹೋರಾಟಗಾರರ ಶ್ರಮ ಮತ್ತು ಸಾಧನೆಯ ಬಗ್ಗೆ, ನಮ್ಮ ಸಂಸ್ಥೆಯ ಚಟುವಟಿಕೆಗಳು ಕಾರ್ಯಕ್ರಮ ತರಬೇತಿಗಳ ಬಗ್ಗೆ ಹೆಮ್ಮೆಯಿಂದ ಅಭಿನಂದನೆಗಳನ್ನು ಸಲ್ಲಿಸಿದರು. ಇದೇ ಸಂದರ್ಭದಲ್ಲಿ 25ನೇ ವಿಶ್ವಜಾಂಬೂರಿ, ದಕ್ಷಿಣ ಕೊರಿಯಾದಲ್ಲಿ ಭಾಗವಹಿಸಿದ ಮಕ್ಕಳಿಗೆ ಪ್ರಶಸ್ತಿ ಪತ್ರಗಳನ್ನು ಪ್ರದಾನ ಮಾಡಲಾಯಿತು ಮತ್ತು ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ತಂಡಕ್ಕೆ ಅಭಿನಂದನೆಗಳನ್ನು ಸಲ್ಲಿಸಲಾಯಿತು. ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ಉಪಾಧ್ಯಕ್ಷರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಕ್ಲೂನಿ ಕಾನ್ವೆಂಟ್, ಬೆಂಗಳೂರು ಉತ್ತರ ಜಿಲ್ಲೆಯ ಬುಲ್‌ಬುಲ್ ಮಕ್ಕಳು, ರಾಜ್ಯ ಸಂಸ್ಥೆ ಪದಾಧಿಕಾರಿಗಳು, ಪೋಷಕರು, ಕೇಂದ್ರ ಕಛೇರಿಯ ಸಿಬ್ಬಂದಿ ಭಾಗವಹಿಸಿದ್ದರು.






## ಅಭಿನಂದನೆಗಳು

ದೇಶದ ಹೆಮ್ಮೆಯ ಚಂದ್ರಯಾನ-3 ಬಾಹ್ಯಾಕಾಶ ಯೋಜನೆಯ ವಿಕ್ರಂ ಲ್ಯಾಂಡ್‌ಅನ್ನು ಯಶಸ್ವಿಯಾಗಿ ಚಂದ್ರನಲ್ಲಿಗೆ ಇಳಿಸಿ ಐತಿಹಾಸಿಕ ಸಾಧನೆಗೆ ಕಾರಣರಾದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಎಲ್ಲ ಹೆಮ್ಮೆಯ ವಿಜ್ಞಾನಿಗಳಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯ ವತಿಯಿಂದ ಹೃತ್ಪೂರ್ವಕವಾದ ಅಭಿನಂದನೆಗಳು.

– ರಾಜ್ಯ ಕಾರ್ಯದರ್ಶಿ

# ಅಭಿನಂದನೆಗಳು





ಮಾಣಿಕ್ ಷಾ ಕವಾಯತು ಮೈದಾನ
ಬೆಂಗಳೂರು ಇಲ್ಲಿ ಕರ್ನಾಟಕ ಸರ್ಕಾರ ಏರ್ಪಡಿಸಿದ
77ನೇ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ
ನೆರವೇರಿದ ರಾಜ್ಯಮಟ್ಟದ ಸಾಂಸ್ಕೃತಿಕ
ಕಾರ್ಯಕ್ರಮಗಳಲ್ಲಿ
ಬೆಳಗಾವಿ ಜಿಲ್ಲೆ ಬೈಲಹೊಂಗಲದ
'ಕಿತ್ತೂರು ರಾಣಿ ಚೆನ್ನಮ್ಮ ಆಂಗ್ಲ ಮಾಧ್ಯಮ ಶಾಲೆ'ಯ ಗ್ರಾಮೀಣ ಪ್ರತಿಭಾನ್ವಿತ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಅದ್ಭುತ
'ರೋಪ್ ಸ್ಕಿಪ್ಪಿಂಗ್‌ನ ವಿವಿಧ ವಿನ್ಯಾಸಗಳನ್ನು' ಪ್ರದರ್ಶನ ನೀಡಿ ತೃತೀಯ ಸ್ಥಾನಗಳಿಸಿದ್ದಾರೆ.
ಇವರಿಗೆ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಪಾರಿತೋಷಕವನ್ನು ವಿತರಿಸಿ ಹರ್ಷವನ್ನು ವ್ಯಕ್ತಪಡಿಸಿದರು.
ಸಮಾರಂಭದಲ್ಲ ಸನ್ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್ ಅವರು ಭಾಗವಹಿಸಿದ್ದರು.
ಇವರಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ರಾಜ್ಯ ಸಂಸ್ಥೆಯಿಂದ ಹೃದಯಪೂರ್ವಕ ಅಭಿನಂದನೆಗಳು.

– ರಾಜ್ಯ ಕಾರ್ಯದರ್ಶಿ




Dr. V. I. Patil Ex M.L.A
Chairman

Shri. R. P. Badas
Secretaries

Shri. M. V. Wali
Treasurer

Shri. S. C. Patil
Sub-commitee Chairman

Shri. M. C. Biradar
Principal

Shri. M. S. Koujalagi M.L.A
Secretaries

## ಅಭಿನಂದನೆಗಳು



ಶ್ರೀ ಬಿ.ಆರ್. ಪ್ರಸನ್ನ ಕುಮಾರ್
ಜಿಲ್ಲಾ ಮುಖ್ಯ ಆಯುಕ್ತರು, ಬೆಂಗಳೂರು ಉತ್ತರ
ಅಧ್ಯಕ್ಷರು, ಆರ್.ಟಿ. ನಗರ ಪಬ್ಲಿಕ್ ಶಾಲೆ

# ಆರ್.ಟಿ. ನಗರ ಪಬ್ಲಿಕ್ ಶಾಲೆ

15 ಆಗಸ್ಟ್ 2023ರಂದು ಬೆಂಗಳೂರಿನ ಮಾಣಿಕ್ ಷಾ ಕವಾಯತು ಮೈದಾನದಲ್ಲಿ ರಾಜ್ಯ ಸರ್ಕಾರ ಏರ್ಪಡಿಸಿದ 77ನೇ ಸ್ವಾತಂತ್ರ್ಯ ದಿನಾಚರಣೆ ಪಥ ಚಲನದಲ್ಲಿ ಭಾಗವಹಿಸಿ ತೃತೀಯ ಸ್ಥಾನ ಪಡೆದ ಬೆಂಗಳೂರು ಉತ್ತರ ಜಿಲ್ಲೆಯ ಆರ್.ಟಿ. ನಗರ ಪಬ್ಲಿಕ್ ಶಾಲೆಯ ಸ್ಕೌಟ್ಸ್-ಗೈಡ್ಸ್‌ಗಳಿಗೆ

ಜಿಲ್ಲಾ ಮುಖ್ಯ ಆಯುಕ್ತರು ಮತ್ತು ಆರ್.ಟಿ. ನಗರ ಪಬ್ಲಿಕ್ ಶಾಲೆಯ ಅಧ್ಯಕ್ಷರಾದ ಶ್ರೀ ಬಿ.ಆರ್. ಪ್ರಸನ್ನ ಕುಮಾರ್ ಮತ್ತು ಸ್ಕೌಟರ್-ಗೈಡರ್‌ಗಳನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಹಾಗೂ ರಾಜ್ಯ ಸಂಸ್ಥೆಯ ಪದಾಧಿಕಾರಿಗಳು ಅಭಿನಂದಿಸಿದರು.

- ರಾಜ್ಯ ಕಾರ್ಯದರ್ಶಿ







## "ರಾಜ್ಯ ಮಟ್ಟದಿಂದ ಆಯೋಜಿಸಿದ್ದ ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರ ಹಾಗೂ ಕಬ್ ಮಾಸ್ಟರ್ಸ್, ಫ್ಲಾಕ್ ಲೀಡರ್ಸ್, ಸ್ಕೌಟ್ ಮಾಸ್ಟರ್ಸ್, ಗೈಡ್ ಕ್ಯಾಪ್ಟನ್ಸ್‌ರವರ ಮುಂದುವರೆದ ತರಬೇತಿ ಶಿಬಿರಗಳು"

ರಾಜ್ಯ ಸಂಸ್ಥೆಯ ವತಿಯಿಂದ ರಾಜ್ಯ ಮಟ್ಟದ ಮೂಲ ಮತ್ತು ಮುಂದುವರೆದ ರೋವರ್ ಸ್ಕೌಟ್ ಲೀಡರ್ಸ್, ರೇಂಜರ್ ಲೀಡರ್ಸ್, ಸ್ಕೌಟ್ ಮಾಸ್ಟರ್ಸ್, ಗೈಡ್ ಕ್ಯಾಪ್ಟನ್ಸ್ ಕಬ್ ಮಾಸ್ಟರ್ಸ್ ಮತ್ತು ಫ್ಲಾಕ್ ಲೀಡರ್ಸ್‌ರವರ ತರಬೇತಿ ಶಿಬಿರಗಳನ್ನು ಕೊಂಡಜ್ಜಿ ಮತ್ತು ದೊಡ್ಡಬಳ್ಳಾಪುರದಲ್ಲಿ ಜುಲೈ 24 ರಿಂದ 30ರ ವರೆಗೆ ಹಮ್ಮಿಕೊಳ್ಳಲಾಗಿತ್ತು. ಶಿಬಿರದಲ್ಲಿ ಭಾಗವಹಿಸಿದ ಒಟ್ಟು ಸಂಖ್ಯೆ ಹಾಗು ನಾಯಕರು ಹಾಗೂ ಸಹನಾಯಕರ ವಿವರ ಈ ಕೆಳಕಂಡಂತಿದೆ.

ಕಬ್ ಮಾಸ್ಟರ್ಸ್, ಫ್ಲಾಕ್ ಲೀಡರ್ಸ್, ಸ್ಕೌಟ್ ಮಾಸ್ಟರ್ಸ್, ಗೈಡ್ ಕ್ಯಾಪ್ಟನ್ಸ್‌ರವರ ಮುಂದುವರೆದ ತರಬೇತಿ ಶಿಬಿರ ಮತ್ತು ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರ ದೊಡ್ಡಬಳ್ಳಾಪುರ

### ಗೈಡ್ ವಿಭಾಗ

| ಕ್ರ.ಸಂ | ತರಬೇತಿ | ಭಾಗವಹಿಸಿದವರ ಒಟ್ಟು ಸಂಖ್ಯೆ | ನಾಯಕರು | ಸಹನಾಯಕರು |
|---|---|---|---|---|
| 1 | ಫ್ಲಾಕ್ ಲೀಡರ್ಸ್ | 9 | ಶ್ರೀಮತಿ ಗೌರಬಾಯಿ ಎಲ್.ಟಿ(ಬಿ), ಕೋಲಾರ | ಶ್ರೀಮತಿ ಕುಸುಮ ಎನ್.ಡಿ, ಪ್ರಿ–ಎ.ಎಲ್.ಟಿ, ಮೈಸೂರು |
| 2 | ಗೈಡ್‌ಕ್ಯಾಪ್ಟನ್ಸ್ | 30 | ಶ್ರೀಮತಿ ಕೃಪಾ ವಿಜಯ್ ಎಲ್.ಟಿ(ಗೈ), ಬೆಂಗಳೂರು | ಶ್ರೀಮತಿ ಉಮಾದೇವಿ .ಎನ್, ಎಲ್.ಟಿ(ಗೈ), ಕೋಲಾರ<br>ಶ್ರೀಮತಿ ಸುಜಾತ, ಎ.ಎಲ್.ಟಿ(ಗೈ), ಬೆಂಗಳೂರು ದಕ್ಷಿಣ<br>ಶ್ರೀಮತಿ ಸುಶೀಲ ಮಹಾದೇವ್, ಪ್ರಿ–ಎ.ಎಲ್.ಟಿ, ಬೆಂಗಳೂರು ದಕ್ಷಿಣ<br>ಶ್ರೀಮತಿ ರೇಣುಕಾ, ಪ್ರಿ–ಎ.ಎಲ್.ಟಿ,(ಗೈ) ಬಳ್ಳಾರಿ |
| 3 | ರೇಂಜರ್ ಲೀಡರ್ಸ್ ಮೂಲ ತರಬೇತಿ | 26 | ಶ್ರೀಮತಿ ಬಿ.ವಿ ರಾಮಲತಾ ಎಲ್.ಟಿ(ರೇ), ಬೆಂಗಳೂರು ಉತ್ತರ | ಶ್ರೀಮತಿ ಅರುಣಮಾಲ ಎಲ್.ಟಿ(ಗೈ), ಬೆಂಗಳೂರು ಗ್ರಾಮಾಂತರ |
| 4 | ರೇಂಜರ್ ಲೀಡರ್ಸ್ ಮುಂದುವರೆದ ತರಬೇತಿ | 14 | ಶ್ರೀಮತಿ ಸುಮನ ಎಸ್.ವಿ., ಎಲ್.ಟಿ(ರೇ) ಬೆಂಗಳೂರು ಉತ್ತರ | ಶ್ರೀಮತಿ ದೀಪಿಕಾ, ಪ್ರಿ–ಎ.ಎಲ್.ಟಿ(ರೇ.), ದ.ಕ<br>ಶ್ರೀಮತಿ ದಿವ್ಯ, ಪ್ರಿ–ಎ.ಎಲ್.ಟಿ(ರೇ.), ದ.ಕ<br>ಶ್ರೀಮತಿ ಜ್ಯೋತಿ ಆಚಾರ್ಯ, ಪ್ರಿ–ಎ.ಎಲ್.ಟಿ ಉಡುಪಿ |
| | | | ಸ್ಕೌಟ್ ವಿಭಾಗ | |
| 5 | ಕಬ್ ಮಾಸ್ಟರ್ | 18 | ಶ್ರೀ ಕೃಷ್ಣಮೂರ್ತಿ, ಎ.ಎಲ್.ಟಿ(ಕಬ್), ಮಂಡ್ಯ | ಶ್ರೀ ರವಿಕುಮಾರ್, ಹೆಚ್.ಡಬ್ಲ್ಯೂ.ಬಿ(ಕಬ್), ಕೋಲಾರ |
| 6 | ಸ್ಕೌಟ್ ಮಾಸ್ಟರ್ಸ್ | 28 | ಶ್ರೀ ಕೃಷ್ಣಯ್ಯ ಎಲ್.ಟಿ(ಸ್ಕೌಟ್), ರಾಮನಗರ | ಶ್ರೀ ಸೈಯದ್ ಹುಸೇನ್, ಪ್ರಿ–ಎ.ಎಲ್.ಟಿ(ಸ್ಕೌ) ಬೆಂಗಳೂರು ದಕ್ಷಿಣ<br>ಶ್ರೀ ಅಬ್ದುಲ್‌ಖಾದರ್, ಪ್ರಿ–ಎ.ಎಲ್.ಟಿ(ಸ್ಕೌ) ಬೆಂಗಳೂರು<br>ಶ್ರೀ ಈರ ನಾಯಕ್,ಪ್ರಿ–ಎ.ಎಲ್.ಟಿ,ರಾಮನಗರ |
| 7 | ರೋವರ್ ಸ್ಕೌಟ್ ಲೀಡರ್ಸ್ ಮೂಲ ತರಬೇತಿ | 57 | ಶ್ರೀ ಕೆ.ಎಸ್. ಪ್ರತಿಮ್ ಕುಮಾರ್ ಎ.ಎಲ್.ಟಿ(ರೋ), ದಕ್ಷಿಣ ಕನ್ನಡ | ಶ್ರೀ ಸಂತೋಷ ಹುಗ್ಗಿ, ಹೆಚ್.ಡಬ್ಲ್ಯೂ.ಬಿ, ಕಲಬುರ್ಗಿ<br>ಶ್ರೀ ಮೋಹನ್‌ರೆಡ್ಡಿ, ಹೆಚ್.ಡಬ್ಲ್ಯೂ.ಬಿ, ಕೋಲಾರ<br>ಶ್ರೀ ಕುಮಾರ್ ಸ್ವಾಮಿ, ಮುಂದುವರೆದ(ರೋ) ಹಾಸನ<br>ಶ್ರೀ ವಿಷ್ಣು, ಮುಂದುವರೆದ(ರೋ) ಮೈಸೂರು |

| | | | | |
|---|---|---|---|---|
| 8 | ರೋವರ್ ಸ್ಕೌಟ್ ಲೀಡರ್ಸ್ ಮುಂದುವರೆದ ತರಬೇತಿ | 28 | ಶ್ರೀ ನರೇಂದ್ರಕುಮಾರ್, ಎಲ್.ಟಿ(ರೋ) | ಶ್ರೀ ಶಾಂತಪುರ ಮಲ್ಲಾಪುರ, ಪ್ರಿ–ಎ.ಎಲ್.ಟಿ, ಗದಗ<br>ಶ್ರೀ ಯೋಗೇಶ್, ಪ್ರಿ–ಎ.ಎಲ್.ಟಿ, ತುಮಕೂರು<br>ಶ್ರೀ ಬೋರೇಗೌಡ, ಮುಂದುವರೆದ(ರೋ), ಮೈಸೂರು |










ಸ್ಕೌಟ್ ಮಾಸ್ಟರ್ಸ್, ಗೈಡ್ ಕ್ಯಾಪ್ಟನ್ಸ್‌ರವರ ಮುಂದುವರೆದ ತರಬೇತಿ ಶಿಬಿರ ಮತ್ತು ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರ –ಕೊಂಡಜ್ಜಿ

## ಗೈಡ್ ವಿಭಾಗ

| | | | | |
|---|---|---|---|---|
| 9 | ಗೈಡ್ ಕ್ಯಾಪ್ಟನ್ಸ್ | 17 | ಶ್ರೀಮತಿ ರತ್ನವ್ವಗುಂಜಾಲ್, ಎಲ್.ಟಿ(ಗೈ), ಗದಗ | ಶ್ರೀಮತಿ ಮಮತಾ ಶೀಲವಂತ ಎ.ಎಲ್.ಟಿ(ಗೈ) ಹಾವೇರಿ<br>ಶ್ರೀಮತಿ ರೂಪಾಂಜಲಿ ಹೆಚ್.ಡಬ್ಲ್ಯೂ.ಬಿ, ಹಾವೇರಿ |
| 10 | ರೇಂಜರ್ ಲೀಡರ್ಸ್ ಮೂಲ ತರಬೇತಿ | 19 | ಶ್ರೀಮತಿ ಶಾಮಲ ಕೆ.ವಿ, ಎಸ್.ಟಿ.ಸಿ(ಗೈ) | ಶ್ರೀಮತಿ ಅನ್ನಪೂರ್ಣಕುರಬೆಟ್ಟು ಪ್ರಿ–ಎ.ಎಲ್.ಟಿ ಬೆಳಗಾವಿ<br>ಶ್ರೀಮತಿ ಮಧುಶ್ರೀ ಹೆಚ್.ಡಬ್ಲ್ಯೂ.ಬಿ (ರೇ), ಶಿರಸಿ |
| 11 | ರೇಂಜರ್ ಲೀಡರ್ಸ್ ಮುಂದುವರೆದ ತರಬೇತಿ | 17 | ಡಾ. ಎಸ್. ಶುಭಾ, ಎಲ್.ಟಿ(ರೇ), ಬೆಂಗಳೂರು ಉತ್ತರ | ಶ್ರೀಮತಿ ಸುಜಾತಾದೇವರಮನಿ ಹೆಚ್.ಡಬ್ಲ್ಯೂ.ಬಿ (ರೇ), ಧಾರವಾಡ |

| | | | | |
|---|---|---|---|---|
| 12 | ಸ್ಕೌಟ್ ಮಾಸ್ಟರ್ | 36 | ಶ್ರೀಮತಿ ಹೇಮಲತಾ ಎ.ಎಲ್.ಟಿ(ಸ್ಕೌ), ಶಿವಮೊಗ್ಗ | ಶ್ರೀ ವಿಜಯ್ ಎ.ಎಲ್.ಟಿ (ಸ್ಕೌಟ್) ದಾವಣಗೆರೆ<br>ಶ್ರೀ ಪರಮೇಶ್ವರಯ್ಯ ಎ.ಎಲ್.ಟಿ (ಸ್ಕೌಟ್) ಶಿವಮೊಗ್ಗ |
| 13 | ರೋವರ್ ಸ್ಕೌಟ್ ಲೀಡರ್ಸ್ ಮೂಲ ತರಬೇತಿ | 72 | ಶ್ರೀ ಗಣಪತಿ ಎ.ಎಲ್.ಟಿ(ರೋ) ಶಿವಮೊಗ್ಗ | ಶ್ರೀ ಶಿವಶಂಕರ ಎ.ಎಲ್.ಟಿ (ಸ್ಕೌಟ್) ಶಿವಮೊಗ್ಗ<br>ಶ್ರೀ ಸಾತಪುತೆ ಮುಂದುವರೆದ (ರೋ) ಬೆಳಗಾವಿ |
| 14 | ರೋವರ್ ಸ್ಕೌಟ್ ಲೀಡರ್ಸ್ ಮುಂದುವರೆದತರಬೇತಿ | 37 | ಶ್ರೀ ರಾಜೇಶ ಅವಲಕ್ಕಿ ಎಲ್.ಟಿ(ರೋ) ಶಿವಮೊಗ್ಗ | ಶ್ರೀ ರವಿ ಮುಂದುವರೆದ (ರೋ) ಬೆಳಗಾವಿ<br>ಶ್ರೀ ನರಸಿಂಹ ವೈ. ಮುಂದುವರೆದ (ರೋ) ರಾಯಚೂರು |















ಸದರಿ ಶಿಬಿರಗಳ ಉದ್ಘಾಟನೆ ಸಮಾರಂಭವು ಆಯಾ ಶಿಬಿರಗಳ ನಾಯಕರ ಉಪಸ್ಥಿತಿಯಲ್ಲಿ ಜರುಗಿದವು. ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಇವರು ಮೈಸೂರು ತರಬೇತಿ ಶಿಬಿರಕ್ಕೆ ಭೇಟಿ ನೀಡಿದರು.

ಮೇಲ್ಕಂಡ ದೊಡ್ಡಬಳ್ಳಾಪುರ ತರಬೇತಿ ಶಿಬಿರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಸಿ.ಎಸ್. ರೆಡ್ಡಿ, ರಾಜ್ಯ ಆಯುಕ್ತರು (ವ.ಸಂ.), ಎಲ್.ಟಿ(ಎಸ್) ಮತ್ತು ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈ), ಎಲ್.ಟಿ(ಗೈ), ಶ್ರೀ ಎನ್. ಶ್ರೀನಿವಾಸನ್, ಎಲ್.ಟಿ(ಎಸ್), ಶ್ರೀ ಸುಕುಮಾರ್, ಎಲ್.ಟಿ(ಎಸ್), ರಾಷ್ಟ್ರೀಯ ಸಂಸ್ಥೆಯ ಮಾಜಿ ನಿರ್ದೇಶಕರು ಶಿಬಿರಕ್ಕೆ ಭೇಟಿ ನೀಡಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಇವರು ಕೊಂಡಜ್ಜಿ ಮತ್ತು ದೊಡ್ಡಬಳ್ಳಾಪುರ ತರಬೇತಿ ಶಿಬಿರಗಳಿಗೆ ಭೇಟಿ ನೀಡಿ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ ತರಬೇತಿ ಪಡೆದ ನಂತರ ತಾವು ದಳಗಳನ್ನು ಪರಿಣಾಮಕಾರಿಯಾಗಿ ನಡೆಸಿ ಮಕ್ಕಳ ಪ್ರಗತಿಪರ ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ಕೊಡಲು ಕೋರಿ ಶಿಬಿರಾರ್ಥಿಗಳಿಗೆ ಮುಂದುವರೆದ ತರಬೇತಿಗಳನ್ನು ಪಡೆಯಲು ತಿಳಿಸಿದರು. ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಣದ ಮಹತ್ವದ ಬಗ್ಗೆ ಹಾಗೂ ತರಬೇತುದಾರರು ಮತ್ತು ಶಿಬಿರಾರ್ಥಿಗಳು ಮಾಡಬೇಕಾದ ಕರ್ತವ್ಯಗಳ ಬಗ್ಗೆ ತಿಳಿಸಿ, ಯುವ ಜನಾಂಗದ ಶ್ರೇಯೋಭಿವೃದ್ಧಿಗೆ ಶ್ರಮಿಸಲುಕರೆ ನೀಡಿದರು. ಜುಲೈ 30 ರಂದು ಸರ್ವಧರ್ಮ ಪ್ರಾರ್ಥನೆಯನ್ನು ನಡೆಸಲಾಯಿತು. ಈ ದಿನ 11 ಗಂಟೆಗೆ ಶಿಬಿರಗಳ ಸಮಾರೋಪ ಸಮಾರಂಭವನ್ನು ನಡೆಸಲಾಯಿತು.

ಮೇಲ್ಕಂಡ ತರಬೇತಿಗಳ ಸಂಪೂರ್ಣ ಜವಾಬ್ದಾರಿಯನ್ನು ಶ್ರೀ ನಾಗೇಶ್ ಆರ್. ಶಿವಪೂರ್, ಎಲ್.ಟಿ(ಎಸ್), ಎಸ್.ಟಿ.ಸಿ(ಎಸ್) ಮತ್ತು ಶ್ರೀಮತಿ ಕೆ.ವಿ ಶಾಮಲ, ಎಲ್.ಟಿ(ಗೈ), ಎಸ್.ಟಿ.ಸಿ(ಗೈ)ರವರು ವಹಿಸಿದ್ದರು.

**ಕೆ. ವಿ. ಶಾಮಲ**
ರಾಜ್ಯ ತರಬೇತಿ ಆಯುಕ್ತರು (ಗೈಡ್)

# ಸೆಪ್ಟೆಂಬರ್ 2023 ಮಾಹೆಯ ಕಾರ್ಯಕ್ರಮಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 01 | ಶಿಕ್ಷಕರ ದಿನಾಚರಣೆ | 5–9–2023 | ಎಲ್ಲಾ ಹಂತಗಳಲ್ಲಿ |
| 02 | ಕರಾವಳಿ ತೀರ ಸ್ವಚ್ಛತಾ ಕಾರ್ಯಕ್ರಮ | 18–9–2023 | ಕರಾವಳಿ ಜಿಲ್ಲೆಗಳು ಸಮುದ್ರ ತೀರಗಳಲ್ಲಿ |
| 03 | ವಿಶ್ವ ಶಾಂತಿ ದಿನಾಚರಣೆ | 21–9–2023 | ಎಲ್ಲಾ ಹಂತಗಳಲ್ಲಿ |
| 04 | ಪರಿಸರ ಸ್ನೇಹಿ / ಅರಿಶಿಣ ಗಣಪತಿ ಸಿದ್ಧತೆ | | ಕರ್ನಾಟಕದಾದ್ಯಂತ ಎಲ್ಲಾ ದಳಗಳಲ್ಲಿ |
| 05 | ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆ | 17–9–2023 | ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ |
| 06 | "ಉತ್ತಮ ಶಿಕ್ಷಕ" ಪ್ರಶಸ್ತಿ ಪಡೆದ ದಳ ನಾಯಕರುಗಳಿಗೆ ಗೌರವ ಸಮರ್ಪಣೆ | – | ರಾಜ್ಯ ಕೇಂದ್ರ ಕಛೇರಿಯಲ್ಲಿ |
| 07 | ಜಿಲ್ಲಾ ತರಬೇತಿ ಆಯುಕ್ತರುಗಳ ರಾಜ್ಯಮಟ್ಟದ ಸಭೆ | – | – |
| 08 | ದಳನಾಯಕರುಗಳಿಗೆ ತರಬೇತಿ ಸಲಹೆಗಾರರ ತರಬೇತಿ ಶಿಬಿರ | – | – |
| 09 | ರೋವರ್ಸ್–ರೇಂಜರ್ಸ್ ಮತ್ತು ಯುವನಾಯಕರುಗಳಿಗೆ ಸುಸ್ಥಿರ ಅಭಿವೃದ್ಧಿ ಗುರಿಗಳ ಬಗ್ಗೆ ತರಬೇತಿ ಕಾರ್ಯಗಾರ | – | ಎಲ್ಲಾ ಜಿಲ್ಲೆಗಳಲ್ಲಿ |

– ರಾಜ್ಯ ಕಾರ್ಯದರ್ಶಿ



# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001
ದೂ:+91–80–2226 0017; +91–80–2226 7470; +91–80–2226 1047
ಮಿಂಚಂಚೆ: info@bsgkarnataka.org / shanthigruha@scout.org.in ಅಂತರ್ಜಾಲ: www.bsgkarnataka.org

ಸಂಖ್ಯೆ: ಬಿಎಸ್‌ಜಿ/ಎಸ್‌ಹೆಚ್‌ಕ್ಯೂ/1160/2023–24 ದಿನಾಂಕ: 10.08.2023

ಎಲ್ಲಾ ಜಿಲ್ಲಾ ಕಾರ್ಯದರ್ಶಿಯವರಿಗೆ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ, ಕರ್ನಾಟಕ.

ಮಾನ್ಯರೆ,

"ಅತೀ ಮುಖ್ಯವೆಂದು ಪರಿಗಣಿಸುವುದು"

ವಿಷಯ: ಸ್ಥಳೀಯ/ಜಿಲ್ಲಾ ಸಂಸ್ಥೆಗಳು ಹಾಗೂ ಮುಕ್ತದಳಗಳಲ್ಲಿ ಈ ಹಿಂದೆ ರಾಜ್ಯದೆಲ್ಲೆಡೆ ವಿವಿಧ ಹಂತಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿ, ನಿಧನಹೊಂದಿರುವ ಹಾಗೂ ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಹಿರಿಯ ಪದಾಧಿಕಾರಿಗಳ ಮತ್ತು ಸ್ಕೌಟರ್ಸ್ ಮತ್ತು ಗೈಡರ್ಸ್‌ಗಳ ಸಂಕ್ಷಿಪ್ತ ಮಾಹಿತಿ ಕಳುಹಿಸುವ ಕುರಿತು.

ಉಲ್ಲೇಖ:
1. ದಿನಾಂಕ: 7.10.2021 ಮತ್ತು ದಿನಾಂಕ:4.8.2023ರ ಜರುಗಿದ ಪ್ರಕಟಣಾ ಸಮಿತಿ ಮತ್ತು ಮಾಸಪತ್ರಿಕೆ ಸಂಪಾದಕ ಮಂಡಳಿ ಸಭೆಯ ನಿರ್ಣಯದಂತೆ
2. ಪತ್ರ ಸಂಖ್ಯೆ:ಬಿಎಸ್‌ಜಿ/ಎಸ್‌ಹೆಚ್‌ಕ್ಯೂ/1269/2021–22 ದಿನಾಂಕ:25.10.2021.
3. ಪತ್ರ ಸಂಖ್ಯೆ:ಬಿಎಸ್‌ಜಿ/ಎಸ್‌ಹೆಚ್‌ಕ್ಯೂ/2342/2022–23 ದಿನಾಂಕ:02.02.2023.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯು, ರಾಜ್ಯ ಸಂಸ್ಥೆ ಮತ್ತು ಎಲ್ಲಾ ಜಿಲ್ಲಾ ಸಂಸ್ಥೆಗಳಲ್ಲಿ ಸ್ಕೌಟ್–ಗೈಡ್ ಚಳವಳಿಗೆ ಹೆಚ್ಚು ಕಾಲ ಸೇವೆ ಸಲ್ಲಿಸಿ ಈಗಾಗಲೇ ನಿಧನ ಹೊಂದಿರುವ ಹಾಗೂ ಪ್ರಸ್ತತ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಪದಾಧಿಕಾರಿಗಳು ಮತ್ತು ಸ್ಕೌಟರ್ಸ್ ಮತ್ತು ಗೈಡರ್ಸ್‌ಗಳ, ಸಂಸ್ಥೆಗೆ ಸಹಾಯ ಮಾಡಿ ಅಭಿವೃದ್ಧಿಗೆ ಶ್ರಮಿಸಿರುವ ದಾನಿಗಳ ಮಾಹಿತಿಗಳನ್ನು ಸಂಗ್ರಹಿಸಿ, ಪುಸ್ತಕ ರೂಪದಲ್ಲಿ ಹೊರತರಲು ರಾಜ್ಯ ಸಂಸ್ಥೆ ತೀರ್ಮಾನಿಸಿದಂತೆ, ಸಂಕ್ಷಿಪ್ತ ಮಾಹಿತಿಗಳನ್ನು ಕಳುಹಿಸುವಂತೆ ಈಗಾಗಲೇ ಉಲ್ಲೇಖ 02 & 03ರ ಪತ್ರದಲ್ಲಿ ಕೋರಿರುವುದು ಸರಿಯಷ್ಟೆ.

ಆದುದರಿಂದ ಕೂಡಲೇ ತಮ್ಮ ಜಿಲ್ಲೆಯ ಮತ್ತು ತಾಲ್ಲೂಕುಗಳಲ್ಲಿ ಸ್ಕೌಟ್–ಗೈಡ್ ಚಳುವಳಿಗೆ ಹೆಚ್ಚು ಕಾಲ ಸೇವೆ ಸಲ್ಲಿಸಿದ ಹಾಗೂ ಸಲ್ಲಿಸುತ್ತಿರುವ ಎಲ್.ಟಿ., ಎಎಲ್‌ಟಿ, ಹೆಚ್‌ಡಬ್ಲ್ಯೂಬಿ, ಸ್ಕೌಟರ್ಸ್, ಗೈಡರ್ಸ್, ಜಿಲ್ಲೆ ಮತ್ತು ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು, ದಾನಿಗಳ ಸ್ವ–ವಿವರಗಳನ್ನು ಹಾಗೂ ಭಾವಚಿತ್ರವನ್ನು ರಾಜ್ಯ ಸಂಸ್ಥೆಗೆ ಕಳುಹಿಸಲು ಕೋರಲಾಗಿದೆ.

ಈ ಪುಸ್ತಕವನ್ನು ಮುದ್ರಿಸಲು ತಮ್ಮ ಸಹಕಾರ ಅತ್ಯಗತ್ಯವಾಗಿದ್ದು, ತಾವು ಹಿರಿಯ ಪದಾಧಿಕಾರಿಗಳೊಂದಿಗೆ ಚರ್ಚಿಸಿ, ಅವರುಗಳ ಸಂಕ್ಷಿಪ್ತ ಮಾಹಿತಿಗಳನ್ನು ಈ ಕೆಳಕಂಡ ವಿವರಗಳಂತೆ ಸಂಗ್ರಹಿಸಿ, ದಿನಾಂಕ: 15.09.2023ರ ಒಳಗಾಗಿ ರಾಜ್ಯ ಸಂಸ್ಥೆಗೆ ಕಳುಹಿಸಲು ಕೋರಲಾಗಿದೆ.

- ಹೆಸರು:
- ಹುಟ್ಟಿದ ದಿನಾಂಕ:
- ಕಾರ್ಯನಿರ್ವಹಿಸುತ್ತಿದ್ದ ಹುದ್ದೆ/ಕಾರ್ಯನಿರ್ವಹಿಸುತ್ತಿರುವ ಹುದ್ದೆ:
- ಸಮವಸ್ತ್ರದ ಭಾವಚಿತ್ರ ಅಥವಾ ಅವರ ಭಾವಚಿತ್ರ
- ಅವರ ಅವಧಿಯಲ್ಲಿ ನಮ್ಮ ಸಂಸ್ಥೆಗೆ ಸಲ್ಲಿಸಿರುವ ಸೇವೆ, ಸಾಧನೆ, ವಿಶೇಷ ಕೊಡುಗೆ, ಅಭಿವೃದ್ಧಿ ಮುಂತಾದವುರಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ಮತ್ತು ಸಂಬಂಧಿಸಿದ ಪೋಟೋಗಳು
- ಸಂಬಂದಪಟ್ಟ ಸದಸ್ಯರ ಹತ್ತಿರದ ಸಂಬಂಧಿಗಳ ಹೆಸರು, ಮನೆಯ ವಿಳಾಸ, ಮತ್ತು ದೂರವಾಣಿ/ಮೊಬೈಲ್ ಸಂಖ್ಯೆ. ಅವರುಗಳು ಸ್ಕೌಟ್ಸ್–ಗೈಡ್ಸ್ ಸಂಸ್ಥೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಲ್ಲಿ ಆ ಬಗ್ಗೆ ಅವರ ವಿವರಗಳು.

ತಾವು ದಯಮಾಡಿ ಮೇಲ್ಕಂಡ ಮಾಹಿತಿಗಳನ್ನು ಕಳುಹಿಸಿಕೊಡಲು ಕೂಡಲೇ ಕ್ರಮ ಕೈಗೊಂಡು, ಹಿಂದಿನ ಹಾಗೂ ಈಗಿನ ಹಿರಿಯ ಪದಾಧಿಕಾರಿಗಳ ಸಂಕ್ಷಿಪ್ತ ಪರಿಚಯಗಳ ವಿವರಗಳು ಮತ್ತು ಅವರುಗಳ ಪೋಟೋದೊಂದಿಗೆ ರಾಜ್ಯ ಸಂಸ್ಥೆಗೆ ದಿನಾಂಕ:15.09.2023ರ ಒಳಗಾಗಿ ಕಳುಹಿಸಬೇಕಾಗಿ ಕೋರುತ್ತೇನೆ.

ಸ್ಕೌಟ್–ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಕೆ. ಗಂಗಪ್ಪ ಗೌಡ)
ರಾಜ್ಯ ಕಾರ್ಯದರ್ಶಿ

# ಜಿಲ್ಲಾ ವಾರ್ತೆಗಳು



## ಬಾಗಲಕೋಟೆ

ಆಗಸ್ಟ್ 2 ರಂದು ನೂತನ ಉಪನಿರ್ದೇಶಕರು ಮತ್ತು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ದೊಡ್ಡಬಸಪ್ಪ ನೀರಲಕೇರಿ ಅವರನ್ನು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ ಹಿರಿಯರಾದ ಶ್ರೀ ಸಿ.ಎಂ. ಸಾವಳಗಿರವರು ಸನ್ಮಾನಿಸಿ ಪುಸ್ತಕವನ್ನು ನೀಡುವುದರೊಂದಿಗೆ ಅವರನ್ನು ಸ್ವಾಗತಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲೆಯ ಕಾರ್ಯದರ್ಶಿಗಳಾದ ಶ್ರೀ ಎಸ್.ಎಸ್. ದಳವಾಯಿ, ಸಂಘಟಕರಾದ ಶ್ರೀ ಪ್ರಮೋದ ಚೌಗುಲೆ ಉಪಸ್ಥಿತರಿದ್ದರು.



* ಶ್ರೀ ಅನ್ನದಾನೇಶ್ವರ ಕಲಾ ಹಾಗೂ ವಾಣಿಜ್ಯ ಪದವಿ ಪೂರ್ವ ಮಹಾವಿದ್ಯಾಲಯ ಬೇಲೂರಿನಲ್ಲಿ ಆಗಸ್ಟ್ 05 ರಂದು ರೋವರ್ಸ್–ರೇಂಜರ್ಸ್ ಘಟಕಗಳ ಉದ್ಘಾಟನಾ ಸಮಾರಂಭವನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎ.ಎಸ್. ಹಳದ, ಶ್ರೀ ಶಂಕ್ರಣ್ಣ ಸಾಂಕನ್ನೇವರ, ಶ್ರೀ ಎಂ.ಡಿ. ಯಲಿಗಾರ ಸದಸ್ಯರ ವಿದ್ಯಾವರ್ಧಕ ಸಂಘ ಬೇಲೂರ ಶ್ರೀ ಶರಣಗೌಡ್ರು ಪಾಟೀಲ ಕಾರ್ಯದರ್ಶಿಗಳು, ಶ್ರೀ ಚಂದ್ರಶೇಖರ ಯಾಲಿಗಾರ ಇತರ ಗಣ್ಯರು ನೇರವೇರಿಸಿದರು.

* ಆಗಸ್ಟ್ 14 ರಂದು ವಿದ್ಯಾಪ್ರಸಾರಕ ಮಂಡಲದ ಶ್ರೀ ಎಸ್.ಡಿ. ಹೆರಜಲ ಕಲಾ, ಶ್ರೀ ಎಸ್. ಸಕ್ರಿ ವಾಣಿಜ್ಯ ಹಾಗೂ ಶ್ರೀ ಆರ್. ದೊಡಿಹಾಳ ವಿಜ್ಞಾನ ಪದವಿ ಪೂರ್ವ ಕಾಲೇಜು ಬಾಗಲಕೋಟೆಯಲ್ಲಿ ರೋವರ್ಸ್ ಘಟಕವನ್ನು ಸಂಘಟಕರಾದ ಶ್ರೀ ಪ್ರಮೋದ ಚೌಗುಲೆ, ಪ್ರಾಚಾರ್ಯರಾದ ಶ್ರೀ ಅಶೋಕ ಕಂದಗಲ್ಲಿ, ಆರ್.ಎಸ್.ಎಲ್. ಶ್ರೀ ವಸಂತ ಬಂಡಿವಡ್ಡರ ಉದ್ಘಾಟನೆಯನ್ನು ಮಾಡಿದರು. ನಂತರ ಶ್ರೀ ಪ್ರಮೋದ ಚೌಗಲೆ ಸ್ಕೌಟ್ಸ್–ಗೈಡ್ಸ್ ಕುರಿತು ಮಾಹಿತಿಯನ್ನು ನೀಡಿದರು. ಅಧ್ಯಕ್ಷತೆಯನ್ನು ಪ್ರಾಚಾರ್ಯರಾದ ಶ್ರೀ ಅಶೋಕ ಕಂದಗಲ್ಲಿರವರು ವಹಿಸಿದ್ದರು. ಕಾರ್ಯಕ್ರಮವನ್ನು ಶ್ರೀ ರಮೇಶ್ ಬೊಮ್ಮಣಗಿರವರು ನಡೆಸಿದರು.



ವಂದನಾರ್ಪಣೆಯನ್ನು ಶ್ರೀ ಉಮೇಶ್ ತಿಮ್ಮಾಪುರರವರು ಮಾಡಿದರು.

## ಬೆಳಗಾವಿ

ಆಗಸ್ಟ್ 15 ರಂದು 77ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಚಿಕ್ಕೋಡಿ ನಗರದ ಆರ್.ಡಿ. ಪ್ರೌಢ ಶಾಲೆಯ ಮೈದಾನದಲ್ಲಿ ಸಾಮೂಹಿಕ ಕವಾಯತು ಪ್ರದರ್ಶನ ಜರುಗಿತು. ಸದರಿ ಕವಾಯತನಲ್ಲಿ ಶಾಸಕರ ಮಾದರಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಇಂದಿರಾ ನಗರ, ಸರಕಾರಿ ಉರ್ದು ಪ್ರಾಥಮಿಕ ಶಾಲೆ ಹೊಸಪೇಟ ಗಲ್ಲಿ ಮೂರು ಗೈಡ್ ದಳಗಳು ಭಾಗವಹಿಸಿದ್ದವು. ಅವುಗಳಲ್ಲಿ ಶಾಸಕರ ಮಾದರಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಲ್ಪನಾ ಚಾವ್ಲಾ ಗೈಡ್ ದಳವು ಪ್ರಥಮ ಸ್ಥಾನ, ಇಂದಿರಾ ನಗರ ಶಾಲೆಯ ಗೈಡ್ ದಳವು ದ್ವಿತೀಯ ಸ್ಥಾನ, ಸರಕಾರಿ ಉರ್ದು ಪ್ರಾಥಮಿಕ ಶಾಲೆ ಹೊಸಪೇಟ ಗಲ್ಲಿ ತೃತೀಯ ಸ್ಥಾನ ಪಡೆದುಕೊಂಡಿವೆ. ಮಕ್ಕಳಿಗೆ ದೈಹಿಕ ಶಿಕ್ಷಣ ಶಿಕ್ಷಕಿಯರಾದ ಶ್ರೀಮತಿ. ಕಲ್ಯಾಣಿ ಹಾಗೂ ಗೈಡ್ ಕ್ಯಾಪ್ಟನ್ ಶ್ರೀಮತಿ ಶೈಲಾ ಜೋಶಿ, ಮುಖ್ಯೋಪಾಧ್ಯಾಯರಾದ ಶ್ರೀಮತಿ ಜಂಬಗಿ ಮಾರ್ಗದರ್ಶನ ಮಾಡಿದ್ದಾರೆ.

* ಜುಲೈ 14 ರಂದು ರಾಜ್ಯ ಸಂಸ್ಥೆ ಬೆಂಗಳೂರು ಮತ್ತು ಜಿಲ್ಲಾ ಸಂಸ್ಥೆ ಬೆಳಗಾವಿಯ ಇವರ ಸಹಯೋಗದಲ್ಲಿ ಬೆಳಗಾವಿ ನಗರದ ಸೆಂಟ್ ಅಂಥೋಣಿ ಕನ್ನಡ ಪ್ರಾಥಮಿಕ ಶಾಲೆ ಕ್ಯಾಂಪ್ ಇಲ್ಲಿ ಬೆಳಗಾವಿ ವಿಭಾಗದ ಅನುದಾನ ರಹಿತ, ಅನುದಾನಿತ ಹಾಗೂ ಸರಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರು ಮತ್ತು ಉಪನ್ಯಾಸಕಿಯರುಗಳಿಗೆ ಒಂದು ದಿನದ ಮಾಹಿತಿ ಶಿಬಿರವು ಜರುಗಿತು. ಶಿಬಿರವನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಜ್ಯೋತಿ ಬೆಳಗಿಸುವುದರೊಂದಿಗೆ ಉದ್ಘಾಟಿಸಿದರು. ನಂತರ ಅವರು ಮಾತನಾಡುತ್ತಾ "ಭಾರತದ ಭಾವಿ ಭವಿಷ್ಯಕ್ಕೆ ಪರಿಸರದ ಅವಶ್ಯಕತೆ ಇದೆ. ಇದನ್ನು ಉಳಿಸಲು ಬನ್ನಿ




ಹಂತದಿಂದ ರೋವರ್ ಮತ್ತು ರೇಂಜರ್ ಹಂತದವರೆಗೆ ಪರಿಸರ ಸಂರಕ್ಷಣೆಯ ಜವಾಬ್ದಾರಿ ನಿರ್ವಹಿಸಲು ಮಕ್ಕಳಿಗೆ ಪ್ರೇರೇಪಣೆ ನೀಡಬೇಕೆಂದು" ಹೇಳಿದರು. ಜಿಲ್ಲಾ ಮಟ್ಟದ ಫ್ಲಾಕ್ ಲೀಡರ್ ಮೂಲ ತರಬೇತಿ ಶಿಬಿರಕ್ಕೆ ಭೇಟಿ ನೀಡಿ ಶಿಬಿರಾರ್ಥಿಗಳೊಂದಿಗೆ ಸಂವಾದ ನಡೆಸಿ ಎಲ್ಲರಿಗೂ ಶುಭ ಕೋರಿದರು. ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ಗಜಾನನ ಮನ್ನಿಕೇರಿ, ಜಿಲ್ಲಾ ಆಯುಕ್ತರು (ಗೈಡ್) ಶ್ರೀಮತಿ ಪ್ರಭಾವತಿ ಪಾಟೀಲ, ಜಿಲ್ಲಾ ಕಾರ್ಯದರ್ಶಿ ಶ್ರೀ ವೆಂಕಟೇಶ ಬೀಳಗಿ ಉಪಸ್ಥಿತರಿದ್ದರು. ಶಿಬಿರದ ನಾಯಕರಾದ ಶ್ರೀ ರಾಜೇಶ ಅವಲಕ್ಕಿ, ಶ್ರೀ ಅನ್ನಪೂರ್ಣ ಕುರಬೇಟ, ಶ್ರೀಮತಿ ಲಕ್ಷ್ಮಿ ಬಹಾದ್ದೂರಿ, ಶ್ರೀ ಪ್ರಕಾಶ ಪಾಟೀಲ ಉಪನ್ಯಾಸ ನೀಡಿದರು.

* ಜುಲೈ 15 ರಂದು ಸವದತ್ತಿ ನಗರದಲ್ಲಿ ಸ್ಥಳೀಯ ಸಂಸ್ಥೆಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ ಜರುಗಿತು. ಸದರಿ ಕಾರ್ಯಕ್ರಮವನ್ನು ನೂತನ ಶಾಸಕರಾದ ಸನ್ಮಾನ್ಯ ಶ್ರೀ ವಸಂತ ವೈದ್ಯ ಇವರು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು. ನಂತರ ಮಾತನಾಡಿ ಸ್ಕೌಟ್ ಮತ್ತು ಗೈಡ್ ಚಟುವಟಿಕೆಗೆ ನಾನು ಸಹಕಾರ ನೀಡುತ್ತೇನೆ. ತಾಲ್ಲೂಕಿನ ಪ್ರತಿ ಶಾಲೆಯಲ್ಲಿ ಸ್ಕೌಟ್ ಮತ್ತು ಗೈಡ್ ಘಟಕಗಳು ಪ್ರಾರಂಭವಾಗಬೇಕೆಂದು ಕರೆ ನೀಡಿದರು. ರಾಜ್ಯ ಮುಖ್ಯ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯರವರು ನೂತನ ಕಛೇರಿಯ ಉದ್ಘಾಟನೆಯನ್ನು ಜ್ಯೋತಿ ಬೆಳಗಿಸುವುದರೊಂದಿಗೆ ನೆರವೇರಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀ ಎಸ್.ಸಿ. ಕರೀಕಟ್ಟಿಯವರ ಕಾರ್ಯವನ್ನು ಶ್ಲಾಘಿಸಿದರು. ಜಂಟಿ ನಿರ್ದೇಶಕರು ಮತ್ತು ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ಗಜಾನನ ಮನ್ನಿಕೇರಿ ಉಪಸ್ಥಿತರಿದ್ದರು. ಶ್ರೀ ವಿ.ಎಚ್. ಪಾಟೀಲ ನಿರೂಪಿಸಿದರು. ಶ್ರೀ ಎಚ್.ಕೆ. ಯತ್ನಟ್ಟಿ ವಂದಿಸಿದರು. ಕಾರ್ಯದರ್ಶಿ ಶ್ರೀ ಎಂ.ಬಿ. ಕೊಪ್ಪದ ಹಾಗೂ ಸ್ಕೌಟ್ ಮಾಸ್ಟರ ಮತ್ತು ಗೈಡ್ ಕ್ಯಾಪ್ಟನ್‌ಗಳು ಭಾಗವಹಿಸಿದ್ದರು.



* ಜುಲೈ 23 ರಂದು ಜಿಲ್ಲಾ ಸಂಸ್ಥೆ ಬೆಳಗಾವಿ ವತಿಯಿಂದ ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ಗಜಾನನ ಮನ್ನಿಕೇರಿ ಇವರ ಅಧ್ಯಕ್ಷತೆಯಲ್ಲಿ ವರ್ಚ್ಯುವಲ್ ಮೂಲಕ ವಿಶ್ವ ಪೋಷಕರ ದಿನಾಚರಣೆ ಕಾರ್ಯಕ್ರಮವು ಜರುಗಿತು. ರಾಜ್ಯ ಮುಖ್ಯ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯರವರು ಆಗಮಿಸಿ ಬೆಳಗಾವಿ ಜಿಲ್ಲೆಯ ಪೋಷಕರನ್ನು ಉದ್ದೇಶಿಸಿ ಮಾತನಾಡಿ ಪೋಷಕರಿಗೆ ಶುಭ ಕೋರಿದರು. ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ಗಜಾನನ ಮನ್ನಿಕೇರಿ ಇವರು ಮಾತನಾಡುತ್ತಾ ಪೋಷಕರೆಂದರೆ ಯಾರು ಎಂಬುದನ್ನು ತಮ್ಮ ಕಾಲೇಜಿನ ವಿದ್ಯಾರ್ಥಿ ಜೀವನವನ್ನು ನೆನಪಿಸಿಕೊಂಡು ಈ ಅನುಭವವನ್ನು ಎಲ್ಲರೊಂದಿಗೆ ಹಂಚಿಕೊಂಡರು. ರಾಜ್ಯ ಸಂಘಟನಾ ಆಯುಕ್ತರು(ಸ್ಕೌ) ಶ್ರೀ ಎಂ. ಪ್ರಭಾಕರ ಭಟ್, ರಾಜ್ಯ ಸಂಘಟನಾ ಆಯುಕ್ತರು(ಗೈ) ಶ್ರೀಮತಿ ಮಂಜುಳಾ ಸಿ., ಜಿಲ್ಲಾ ಆಯುಕ್ತರು (ಗೈ) ಶ್ರೀಮತಿ ಪ್ರಭಾವತಿ ಪಾಟೀಲ, ಜಿಲ್ಲಾ ಕಾರ್ಯದರ್ಶಿ ಶ್ರೀ ವೆಂಕಟೇಶ ಬೀಳಗಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಪೋಷಕರು ಹಾಡು ಹಾಡಿ ಕವನಗಳನ್ನು ಹೇಳಿ ತಮ್ಮ ಮಕ್ಕಳು ಸ್ಕೌಟ್ ಮತ್ತು ಗೈಡ್ ಚಳುವಳಿಯಲ್ಲಿ ಸೇರಿದ ನಂತರ ಅವರ ಪಡೆದ ಅನುಭವಗಳನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ 90ಕ್ಕೂ ಹೆಚ್ಚು ಪೋಷಕರು ಸ್ಕೌಟರ್ ಮತ್ತು ಗೈಡರ್‌ಗಳು ಹಾಗೂ ಸ್ಕೌಟ್ ಮತ್ತು ಗೈಡ್ ಮಕ್ಕಳು ಭಾಗವಹಿಸಿದ್ದರು.

* ಆಗಸ್ಟ್ 12 ರಂದು ಗೋಕಾಕ್ ನಗರದ ನೇತಾಜಿ ಆಂಗ್ಲ ಮಾಧ್ಯಮ ಶಾಲೆಯ ಭಾಗ್ಯನಗರ ಇಲ್ಲಿ ನೂತನವಾಗಿ ಬನ್ನಿ, ಕಬ್, ಬುಲ್‌ಬುಲ್ ದಳಗಳ ಉದ್ಘಾಟನಾ ಸಮಾರಂಭ ಜರುಗಿತು. ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀ ಜರತಾರಕರ ವಹಿಸಿದ್ದರು. ಸಹಾಯಕ ರಾಜ್ಯ ಸಂಘಟನಾ ಆಯುಕ್ತರು (ಸ್ಕೌ) ಶ್ರೀ ಡಿ.ಬಿ. ಅತ್ತಾರ ಹಾಗೂ ಸಂಸ್ಥೆಯ ಕಾರ್ಯದರ್ಶಿ ಮತ್ತು ಪದಾಧಿಕಾರಿಗಳು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು. ಕಬ್ ಘನ ವಂದನೆಯೊಂದಿಗೆ ಧ್ವಜಾರೋಹಣ ನೆರವೇರಿಸಿದರು. ಚಳುವಳಿಯ ಕುರಿತು ಸಹಾಯಕ ರಾಜ್ಯ ಸಂಘಟನಾ ಆಯುಕ್ತರು ಮಾತನಾಡಿದರು. ಶ್ರೀ ಪಿ.ವೈ. ಪಾಟೀಲ, ಶ್ರೀ ಚೇತನಾ ಪಾಟೀಲ, ಶಾಲೆಯ ಕಬ್ ಮಾಸ್ಟರ್, ಫ್ಲಾಕ್ ಲೀಡರ್, ಬನ್ನಿ ಆಂಟಿ ಹಾಗೂ ಶಾಲೆಯ ಶಿಕ್ಷಕ ಬಂಧುಗಳು, ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

## ಬಳ್ಳಾರಿ

ಆಗಸ್ಟ್ 15 ರಂದು ಸಿರಗುಪ್ಪ ತಾಲ್ಲೂಕಿನ ಎಲ್ಲಾ ಶಾಲೆಗಳಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಸಿರಗುಪ್ಪ ತಾಲ್ಲೂಕು ಕ್ರೀಡಾಂಗಣದಲ್ಲಿ ನಡೆದ ಸಮಾರಂಭದಲ್ಲಿ ನಗರದ ವಿವಿಧ ಶಾಲೆಗಳ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸಿದ್ದರು. ಶ್ರೀ ಬಿ.ಎಂ. ನಾಗರಾಜ್, ಸನ್ಮಾನ್ಯ ಶಾಸಕರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಇದೇ ತಾಲ್ಲೂಕಿನ ಸರ್ಕಾರಿ ಪ್ರೌಢಶಾಲೆ, ಕೆ. ಬೆಳಗಲ್ ಇಲ್ಲಿ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು. ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಸದಸ್ಯರು, ಎಸ್.ಡಿ.ಎಂ.ಸಿ ಅಧ್ಯಕ್ಷರು ಹಾಗೂ ಸದಸ್ಯರು, ಮುಖ್ಯ ಶಿಕ್ಷಕರು-ಶಿಕ್ಷಕರು, ಸ್ಕೌಟ್ಸ್-ಗೈಡ್ಸ್, ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಸಸಿ ನೆಡಲಾಯಿತು. ತಾಲ್ಲೂಕು ಕಾರ್ಯದರ್ಶಿ ಶ್ರೀ ನಟರಾಜಸ್ವಾಮಿರವರು ಈ ಸಂದರ್ಭದಲ್ಲಿ ಮಾತನಾಡಿದರು.



## ಬೆಂಗಳೂರು ದಕ್ಷಿಣ

ಬೆಂಗಳೂರು ದಕ್ಷಿಣ ಜಿಲ್ಲೆಯ ವಿಲ್ಸನ್ ಗಾರ್ಡನ್ ಸ್ಥಳೀಯ ಸಂಸ್ಥೆಯ ವತಿಯಿಂದ ಜುಲೈ 28 ಮತ್ತು 29ರಂದು ಮಿತ್ರ ಅಕಾಡೆಮಿ ಶಾಲೆ ಅರಕೆರೆಯಲ್ಲಿ 2023–24ನೇ ಸಾಲಿನ ದಳ ನಾಯಕರುಗಳ ಕಾರ್ಯಾಗಾರವನ್ನು ಆಯೋಜನೆ ಮಾಡಲಾಯಿತು. ಕಾರ್ಯಾಗಾರವನ್ನು ಮಿತ್ರ ಅಕಾಡೆಮಿ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ವಾಣಿಯವರು ಉದ್ಘಾಟನೆಯನ್ನು ಮಾಡಿ ದಳ ನಾಯಕರುಗಳನ್ನು ಉದ್ದೇಶಿಸಿ ಮಾತನಾಡಿದರು. ಇದರಲ್ಲಿ 37 ದಳ ನಾಯಕರುಗಳು ಭಾಗವಹಿಸಿದರು. ಶ್ರೀ ಬಿ.ಎಸ್. ಅನಂತ್, ಸಹಾಯಕ ಜಿಲ್ಲಾ ಕಾರ್ಯದರ್ಶಿಗಳು ಮತ್ತು ಶ್ರೀ ಜೀತೇಶ್ ಸೇಠ್, ವೈಟ್‌ಫೀಲ್ಡ್ ಸ್ಥಳಿಯ ಸಂಸ್ಥೆಯ ಕಾರ್ಯದರ್ಶಿಗಳು ಮತ್ತು ರಾಷ್ಟ್ರೀಯ ಆಯುಕ್ತರು ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯಾಗಾರಕ್ಕೆ ಭೇಟಿ ನೀಡಿದರು. ಶ್ರೀಮತಿ ಅಮಲಪೂರ್ವ ಮೇರಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ, ಶ್ರೀ ಲಕ್ಷ್ಮಣ್, ಸ್ಥಳಿಯ ಸಂಸ್ಥೆಯ ಸ್ಥಾನೀಯ ಆಯುಕ್ತರು, ಸ್ಥಳಿಯ ಸಂಸ್ಥೆಯ ಪದಾಧಿಕಾರಿಗಳು, ಶ್ರೀ ಚಂದ್ರು ಪಿ., ಸಹಾಯಕ ರಾಜ್ಯ ಸಂಘಟನಾ ಆಯುಕ್ತರು (ಸ್ಕೌ) ಉಪಸ್ಥಿತರಿದ್ದರು.




* ಬೆಂಗಳೂರು ದಕ್ಷಿಣ ಜಿಲ್ಲೆಯ ದಳ ಮಟ್ಟಗಳಲ್ಲಿ ಆಗಸ್ಟ್ 01 ರಂದು ವಿಶ್ವ ಸನ್‌ರೈಸ್ ಡೇ ಮತ್ತು ವಿಶ್ವ ಸ್ಕಾರ್ಫ್ ಡೇಯನ್ನು ಆಚರಣೆ ಮಾಡಲಾಯಿತು. ಕಬ್, ಬುಲ್–ಬುಲ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್, ದಳ ನಾಯಕರುಗಳು, ಸ್ಥಳೀಯ ಸಂಸ್ಥೆಯ ಮತ್ತು ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಜುಲೈ 26 ರಂದು ರಾಷ್ಟ್ರೀಯ ಸೈನಿಕ ಮ್ಯಾನೇಜ್‌ಮೆಂಟ್ ಟ್ರಸ್ಟ್‌ನ ವತಿಯಿಂದ ಕಾರ್ಗಿಲ್ ವಿಜಯ್ ದಿವಸ್ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯರವರು ರಾಷ್ಟ್ರೀಯ ಮಿಲಿಟರಿ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿ ಎಲ್ಲರನ್ನು ಉದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಕೆ.ಆರ್.ಪುರಂ ಸ್ಥಳೀಯ ಸಂಸ್ಥೆಯ ಸ್ಕೌಟ್ಸ್–ಗೈಡ್ಸ್, ದಳ ನಾಯಕರುಗಳು ಭಾಗವಹಿಸಿ ರಾಷ್ಟ್ರೀಯ ಮಿಲಿಟರಿ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿದರು.



* ಆಗಸ್ಟ್ 12 ರಂದು ಜಯನಗರ ಸ್ಥಳೀಯ ಸಂಸ್ಥೆಯ ವತಿಯಿಂದ ವಿ.ಇ.ಟಿ. ಶಾಲೆ ಜೆ.ಪಿ. ನಗರದಲ್ಲಿ ಸ್ಥಳೀಯ ಮಟ್ಟದಲ್ಲಿ ಗೀತಗಾಯನ ಸ್ಪರ್ಧೆಯ ಆಯೋಜನೆಯನ್ನು ಮಾಡಲಾಯಿತು. ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಉಷಾ ಲಕ್ಷ್ಮೀಕಾಂತ್, ಶ್ರೀ ಟಿ.ಕೆ. ನಾಯರಾಣಸ್ವಾಮಿ, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌ), ಶ್ರೀ ಎನ್. ಆನಂದ್, ಜಯನಗರ ಸ್ಥಳೀಯ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಚೆರ್‌ಮನ್‌ರವರು ಗೀತ ಗಾಯನ ಸ್ಪರ್ಧೆಯನ್ನು ಉದ್ಘಾಟನೆ ಮಾಡಿದರು.



* ಬೆಂಗಳೂರು ದಕ್ಷಿಣ ಜಿಲ್ಲೆಯ ದಳಮಟ್ಟದಲ್ಲಿ 77ನೇ ಸ್ವಾತಂತ್ರ ದಿನಾಚರಣೆಯನ್ನು ಆಚರಿಸಲಾಯಿತು.

* ಆಗಸ್ಟ್ 18 ರಂದು ಕೆ.ಆರ್.ಪುರಂ ಸ್ಥಳೀಯ ಸಂಸ್ಥೆಯ ವತಿಯಿಂದ ಅಮರ್ ಜ್ಯೋತಿ ಇಂಗ್ಲೀಷ್ ಶಾಲೆಯಲ್ಲಿ ಸ್ಥಳೀಯ ಮಟ್ಟದಲ್ಲಿ ಗೀತಗಾಯನ ಸ್ಪರ್ಧೆಯನ್ನು ಆಯೋಜನೆ ಮಾಡಲಾಯಿತು. ಡಾ॥ ನಾಗೇಶ್ ಸ್ಥಾನಿಕ ಆಯುಕ್ತರು(ಸ್ಕೌ), ಡಾ॥ ಮಾನಸ ಹೆಬ್ಬಾರ್(ಗೈ) ಶ್ರೀಮತಿ ನೀಲಾ, ಸಂಗೀತಾಗಾರರು, ಶ್ರೀಮತಿ ರಾಧ ಚಂದ್ರಶೇಖರ್, ತೀರ್ಪುಗಾರರು ಮತ್ತು ದಳನಾಯಕರುಗಳು ಗೀತ ಗಾಯನ ಸ್ಪರ್ಧೆಯನ್ನು ಉದ್ಘಾಟನೆ ಮಾಡಿದರು.ಶ್ರೀ ರವಿಕುಮಾರ್ ಸ್ಥಳಿಯ ಸಂಸ್ಥೆಯ ಕಾರ್ಯದರ್ಶಿ,ಶ್ರೀಮತಿ ರಾಜೇಶ್ವರಿ, ಶ್ರೀ ಲೋಕನಾಥ್, ಶ್ರೀ ಧೀರಜ್, ಶ್ರೀಮತಿ ಸುಧಾ, ಶ್ರೀಮತಿ ವೈಷ್ಣವಿ, ಲುಮೀನಾ ಗೀತಾಗಾಯನ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು, ಸ್ಪರ್ಧೆಯಲ್ಲಿ 15 ಶಾಲೆಗಳಿಂದ 210 ಮಕ್ಕಳು ಭಾಗವಹಿಸಿದರು.



* ಜಯನಗರ ಸ್ಥಳೀಯ ಸಂಸ್ಥೆಯಿಂದ ಆಗಸ್ಟ್ 18 ಮತ್ತು 19 ರಂದು ಆಲ್ ಪೈನ್ ಪಬ್ಲಿಕ್ ಶಾಲೆಯಲ್ಲಿ 2023–24ನೇ ಸಾಲಿನ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಆಯೋಜನೆ ಮಾಡಲಾಯಿತು. ಶ್ರೀ ಟಿ.ಕೆ. ನಾರಾಯಣಸ್ವಾಮಿ, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌ) ಪರೀಕ್ಷಾ ಶಿಬಿರದ ನಾಯಕರಾಗಿದ್ದರು. ಶಿಬಿರದಲ್ಲಿ 250 ಶಿಬಿರಾರ್ಥಿಗಳು ಭಾಗವಹಿಸಿದರು.



* ಆಗಸ್ಟ್ 19 ರಂದು ವಿಜಯನಗರ ಸ್ಥಳೀಯ ಸಂಸ್ಥೆಯ ವತಿಯಿಂದ ಶ್ರೀ ಭಾರತಿ ವಿದ್ಯಾಲಯದಲ್ಲಿ ಸ್ಥಳೀಯ ಮಟ್ಟದಲ್ಲಿ ಗೀತ ಗಾಯನ ಸ್ವರ್ಧೆಯನ್ನು ಆಯೋಜನೆ ಮಾಡಲಾಯಿತು. ಶ್ರೀ ಸತ್ಯನಾರಾಯಣ ಭಟ್, ಶಾಲೆಯ ಮುಖ್ಯೋಪಾಧ್ಯಾಯರು, ಶ್ರೀಮತಿ ಅನಂತಲಕ್ಷ್ಮಿ, ಶ್ರೀಮತಿ ಗಾಯತ್ರಿಗೌಡ, ಜಿಲ್ಲಾ ತರಬೇತಿ ಆಯುಕ್ತರು (ಗೈ) ಮತ್ತು ಶ್ರೀಮತಿ ಸೌಮ್ಯ, ಶ್ರೀಮತಿ ವಸುಧ, ತೀರ್ಪುಗಾರರು ಗೀತ ಗಾಯನ ಸ್ಥರ್ಧೆಯನ್ನು ಉದ್ಘಾಟನೆ ಮಾಡಿದರು. ಶ್ರೀ ಟಿ. ಸಿದ್ದಗಂಗಯ್ಯ, ಸ್ಥಳಿಯ ಸಂಸ್ಥೆಯ ಕಾರ್ಯದರ್ಶಿ 9 ದಳನಾಯಕರುಗಳು, 8 ಶಾಲೆಗಳಿಂದ ಮತ್ತು 1 ಕಾಲೇಜಿನಿಂದ ಒಟ್ಟು 125 ಮಕ್ಕಳು ಭಾಗವಹಿಸಿದರು.

* ಆಗಸ್ಟ್ 19 ರಂದು ವಿಲ್ಸನ್ ಗಾರ್ಡನ್ ಸ್ಥಳೀಯ ಸಂಸ್ಥೆಯ ವತಿಯಿಂದ ಶಾಂತಿ ನಿಕೇತನ ಟ್ರಸ್ಟ್ ಶಾಲೆಯಲ್ಲಿ ಸ್ಥಳೀಯ ಮಟ್ಟದಲ್ಲಿ ಗೀತ ಗಾಯನ ಸ್ವರ್ಧೆಯನ್ನು ಆಯೋಜನೆ ಮಾಡಲಾಯಿತು. ಶ್ರೀಮತಿ ವನಿತಾ, ಶಾಲೆಯ ಪ್ರಾಂಶುಪಾಲರು, ಶ್ರೀಮತಿ ಫಾತಿಮ, ಉಪ ಪ್ರಾಂಶುಪಾಲರು, ಗೀತ ಗಾಯನ ಸ್ಫರ್ಧೆಯನ್ನು ಉದ್ಘಾಟನೆ ಮಾಡಿದರು. ಶ್ರೀ ಅಮಲಪೂರ್ವ ಮೇರಿ, ಸ್ಥಳಿಯ ಸಂಸ್ಥೆಯ ಕಾರ್ಯದರ್ಶಿ ದಳನಾಕರುಗಳು, 6 ಶಾಲೆಗಳಿಂದ ಮಕ್ಕಳು ಭಾಗವಹಿಸಿದರು. ಗೀತಗಾಯನ ಸಮಾರೋಪ ಸಮಾರಂಭಕ್ಕೆ ಶ್ರೀ ಟಿ.ಕೆ. ನಾರಾಯಣಸ್ವಾಮಿ, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌ), ಶ್ರೀ ಬಿ.ಎಸ್. ಅನಂತ್, ಜಿಲ್ಲಾ ಸಹಾಯಕ ಕಾರ್ಯದರ್ಶಿ ಮುಖ್ಯ ಅಥಿತಿಗಳಾಗಿ ಆಗಮಿಸಿದ್ದರು.

*** One day Hike was arranged for the family members of HAL Open Scout Group to Dr. Annie Besant Scouts & Guides State Training Center, Doddaballapura on July 9th, 2023. The purpose of Hike was to give information about Scouting to the family members. Sri P. Nandakumar, Group Leader arranged the event and Sri J.P. Vijaykumar Co-ordinated.**



*** Books & Badges were distributed to 300 poor children by Gayathri Guide Company and Uday Scout Group on 9-7-2023. Sri Jain Prutviraj V. Mehate F.C.A. Vision promoter was the Chief Guest. Sri Prakash G. Kothari, life Member was the Special Guest and Smt. Shantha Bai, Member, Sojath Mahila Mandal was the Guest of Honour. Guides who passed in Distrinction were honored on the same occastion. Sri Deepak Kumar Jain Hosted the event. Miss Anjana Surya Prakash, Ranger welcomed and Miss Aishwarya, Ranger proposed Vote of Thanks.**




## ಬೆಂಗಳೂರು ಪೂರ್ವ

ಜುಲೈ 21 ರಿಂದ 23ರ ವರೆಗೆ ಸೂರ್ಯಸಿಟಿಯ ಸುರಾನಾ ವಿದ್ಯಾಮಂದಿರ ಶಾಲೆಯಲ್ಲಿ ಜಿಲ್ಲಾ ಮಟ್ಟದ ತೃತೀಯ ಸೋಪಾನ ಸ್ಕೌಟ್, ಗೈಡ್, ನಿಪುಣ್ ರೋವರ್ ರೇಂಜರ್, ತೃತೀಯ ಚರಣ್ ಕಬ್ ಹಾಗೂ ಸುವರ್ಣ ಪಂಕ್ ಬುಲ್‌ಬುಲ್ ಪರೀಕ್ಷಾ ಶಿಬಿರಗಳು ನಡೆದವು. ಶಿಬಿರದಲ್ಲಿ 195 ಸ್ಕೌಟ್ಸ್, 132 ಗೈಡ್ಸ್, 31 ಕಬ್ಸ್, 26 ಬುಲ್‌ಬುಲ್ಸ್, 31 ರೋವರ್ಸ್ ಹಾಗೂ 26 ರೇಂಜರ್ಸ್ ಭಾಗವಹಿಸಿದ್ದರು. ಶಿಬಿರದ ನಾಯಕರಾಗಿ ಕಿತ್ತಿಗಾನಹಳ್ಳಿಯ ಬಿ.ಎಸ್. ಕಾರ್ಮೆಲ್ ಶಾಲೆಯ ಸ್ಕೌಟ್ ಮಾಸ್ಟರ್ ಶ್ರೀ ಆರ್. ಅರುಣ್, ಕಾರ್ಯ ನಿರ್ವಹಿಸಿದರು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಜಯಲಕ್ಷ್ಮಿ ಜೆ.ಎಂ., ಜಿಲ್ಲಾ ಸಹ ಕಾರ್ಯದರ್ಶಿ ಶ್ರೀ ಜಿ. ನಾಗರಾಜು, ಶಾಲೆಯ ಪ್ರಾಂಶುಪಾಲರಾದ ಶ್ರೀ ಸಂದೀಪ್ ಪೈ, ಉಪ ಪ್ರಾಂಶುಪಾಲರಾದ ಶ್ರೀ ಉಮೇಶ್, ಮತ್ತಿತರರು ಶಿಬಿರಕ್ಕೆ ಭೇಟಿ ನೀಡಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರಕುಮಾರ್ ಶಿಬಿರದ ಮೇಲುಸ್ತುವಾರಿ ವಹಿಸಿಕೊಂಡಿದ್ದರು.

* ಆಗಸ್ಟ್ 01 ರಂದು ಆನೇಕಲ್‌ನ ಗುರುಭವನದಲ್ಲಿ ಜಿಲ್ಲಾ ಮಟ್ಟದ ಸ್ಕೌಟರ್, ಗೈಡರ್ ಸಮಾವೇಶ ಮತ್ತು ಸ್ಕೌಟಿಂಗ್ ಸೂರ್ಯೋದಯ ದಿನ ಹಾಗೂ ಸ್ಕಾರ್ಫ್‌ಡೇ ಸಮಾರಂಭವನ್ನು ಆಯೋಜಿಸಲಾಗಿತ್ತು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಜಿಲ್ಲಾ ಸಂಸ್ಥೆಯ ಅಧ್ಯಕ್ಷರು ಹಾಗೂ





ರಾಜ್ಯ ಆಯುಕ್ತರು (ವಯಸ್ಕ ಸಂಪನ್ಮೂಲ) ಶ್ರೀ ಚಿನ್ನಸ್ವಾಮಿ ರೆಡ್ಡಿರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಜೆ.ಎಂ. ಜಯಲಕ್ಷ್ಮಿ, ಜಿಲ್ಲಾ ಆಯುಕ್ತರು (ಸ್ಕೌಟ್) ಶ್ರೀ ಎನ್. ಶಂಕರಮೂರ್ತಿ, ಜಿಲ್ಲಾ ಆಯುಕ್ತರು (ಗೈಡ್) ಶ್ರೀಮತಿ ಭಾಗ್ಯ ಶ್ರೀನಿವಾಸ್, ದೈಹಿಕ ಶಿಕ್ಷಣ ಪರಿವೀಕ್ಷಕಿ ಶ್ರೀಮತಿ ನೇತ್ರಾವತಿ, ಸರ್ಕಾರಿ  ನೌಕರರ ಸಂಘದ ತಾಲ್ಲೂಕು ಅಧ್ಯಕ್ಷರಾದ ಶ್ರೀ ಕೆ. ಶಿವಣ್ಣ, ಪ್ರೌಢ ಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಶ್ರೀ ವಿ. ಪ್ರಕಾಶ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಶ್ರೀ ಕೆ. ಚಂದ್ರಶೇಖರ್, ಶಿಕ್ಷಕರ ಸಂಘದ ಅಧ್ಯಕ್ಷ ಶ್ರೀ ಎಂ. ಗೋಪಾಲ್, ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರ ಕುಮಾರ್ ಮೊದಲಾದವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಎಲ್ಲರೂ ಪ್ರತಿಜ್ಞೆಯನ್ನು ಪುನರುಚ್ಚರಿಸಿ ನವೀಕರಿಸಿದರು. ದೀರ್ಘಾವಧಿ ಸೇವೆ ಸಲ್ಲಿಸಿದ ಸ್ಕೌಟರ್, ಗೈಡರ್‌ಗಳಿಗೆ ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯಿತು. ವರ್ಗಾವಣೆಗೊಂಡ ಶಿಕ್ಷಕರಾದ ಹೆಬ್ಬಗೋಡಿಯ ಶ್ರೀ ಪಿ. ಪ್ರಸನ್ನಕುಮಾರ್, ಸಂಪಿಗೆಹಳ್ಳಿಯ ಶ್ರೀಮತಿ ಶಾರದಮ್ಮರವರನ್ನು ಸನ್ಮಾನಿಸಿ ಬೀಳ್ಕೊಡುಗೆ ನೀಡಲಾಯಿತು. ನೇಪಾಳದಲ್ಲಿ ನಡೆದ ಅಂತಾರಾಷ್ಟ್ರೀಯ ಸಮಾವೇಶದಲ್ಲಿ ಭಾಗವಹಿಸಿ ಬಂದ ಶ್ರೀಮತಿ ಭಾಗ್ಯ ಶ್ರೀನಿವಾಸ್‌ರವರನ್ನೂ ಸಹ ಸನ್ಮಾನಿಸಲಾಯಿತು.

* ಆಗಸ್ಟ್ 18 ರಂದು ಜಿಗಣಿಯ ಶ್ರೀ ನಿತ್ಯಾನಂದ ಸ್ವಾಮಿ ಪ್ರೌಢ ಶಾಲಾ ಸಭಾಂಗಣದಲ್ಲಿ ಜಿಗಣಿ ಸ್ಥಳೀಯ ಸಂಸ್ಥೆ "ದೇಶ ಭಕ್ತಿ ಗೀತೆಗಳ ಗೀತಗಾಯನ ಸ್ಪರ್ಧೆ" ಏರ್ಪಡಿಸಲಾಗಿತ್ತು. ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಜೆ.ಎಂ. ಜಯಲಕ್ಷ್ಮಿರವರು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರಕುಮಾರ್ ಹಾಗೂ ಇತರರು ಉಪಸ್ಥಿತರಿದ್ದರು. ತೀರ್ಪುಗಾರರಾಗಿ ಶ್ರೀ ಶಿವಾನಂದ ಬಡಿಗೇರ್, ಶ್ರೀಮತಿ ಗೋರಿಜಾನ್, ಶ್ರೀಮತಿ ಹೆಚ್. ಶ್ವೇತರವರು ಕಾರ್ಯನಿರ್ವಹಿಸಿದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಎಂ.ಜಿ. ರಾಜಮೋಹನ್ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.




## ಬೀದರ್

ಆಗಸ್ಟ್ 01 ರಂದು ಜಿಲ್ಲಾ ಸಂಸ್ಥೆ ಬೀದರ್ ವತಿಯಿಂದ "ವಿಶ್ವ ಸನ್ ರೈಸ್ ಡೇ" ಮತ್ತು "ಸ್ಕಾರ್ಫ್ ಡೇ"ಯನ್ನು ಆಚರಿಸಲಾಯಿತು. ಸನ್ಮಾನ್ಯ ಶ್ರೀ ಗೋವಿಂದ ರೆಡ್ಡಿ, ಜಿಲ್ಲಾಧಿಕಾರಿಯವರನ್ನು ಭೇಟಿ ಮಾಡಿ ಸಂಸ್ಥೆ ವತಿಯಿಂದ ಕಂಠ ವಸ್ತ್ರ ನೀಡುವ ಮೂಲಕ ಸ್ಕಾರ್ಫ್ ಡೇಗೆ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಶ್ರೀ ಸಿದ್ದಾರೆಡ್ಡಿ, ಸ್ಕೌಟ್ ಭವನ ಕುರಿತು ಕೆ.ಕೆ.ಆರ್.ಡಿ.ಬಿ. ವತಿಯಿಂದ ಧನಸಹಾಯ ನೀಡುವಂತೆ ಮನವಿ ಮಾಡಿದರು. ಮನವಿಗೆ ಮಾನ್ಯ ಜಿಲ್ಲಾಧಿಕಾರಿಗಳು ಸ್ಪಂದಿಸಿ ಸಹಕರಿಸುತ್ತೇವೆ ಎಂದು ಹೇಳಿದರು. ರಾಜ್ಯ ಸಂಸ್ಥೆಯಿಂದ ಹೊರಡಿಸಿರುವ 2023–24ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಪುಸ್ತಕ ನೀಡಿ ಅವರಿಗೆ ಸಂಸ್ಥೆ ನಡೆಸುವ ಚಟುವಟಿಕೆಗಳ ಬಗ್ಗೆ ತಿಳಿಸಲಾಯಿತು. ನಂತರ ಎಲ್ಲ ಪದಾಧಿಕಾರಿಗಳೊಂದಿಗೆ ಜಿಲ್ಲಾ ಪಂಚಾಯುತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಸೂರ್ಯಕಾಂತ್, ಆರೋಗ್ಯ ಇಲಾಖೆಯ ಡಿ.ಎಚ್.ಓ. ಡಾ. ರತಿಕಾಂತ್ ಸ್ವಾಮಿ, ವಾರ್ತಾ ಇಲಾಖೆ, ಅಂಚೆ ಇಲಾಖೆಯ ಶ್ರೀಮತಿ ಮಂಗಲಾ ಭಗವಾನ್, ಇವರುಗಳನ್ನು ಭೇಟಿ ಮಾಡಿ ಅವರಿಗೆ ಸಂಸ್ಥೆಯ ಪರಿಚಯ ಮಾಡುವ ಮೂಲಕ



ಸ್ಕಾರ್ಫ್ ಡೇ ಆಚರಿಸಲಾಯಿತು. ಹಾಗೆ ಜಿಲ್ಲೆಯ ಭಾಲ್ಕಿ ತಾಲ್ಲೂಕು ಸರಕಾರಿ ಪ್ರೌಢ ಶಾಲೆಯಲ್ಲಿ, ಹುಮ್ನಾಬಾದ್ ತಾಲೂಕ್ ಹಳ್ಳಿಖೇಡಾ ಕೆ. ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ಸದ್ಗುರು ಶಾಲೆ ಬಾಲ್ಕಿ, ಸರ್ಕಾರಿ ಪ್ರೌಢಶಾಲೆ ಮುರ್ಕಿ ತಾಲೂಕ ಔರಾದ್, ಬಸವಕಲ್ಯಾಣ ತಾಲೂಕು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹಂದ್ರಾಳ ಸೇರಿದಂತೆ ವಿವಿಧ ಶಾಲೆಗಳಲ್ಲಿ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ  ಡಾ. ಗುರಮ್ಮ ಸಿದ್ದಾರೆಡ್ಡಿ, ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಲೀಲಾವತಿ ಚಕೋತೆ, ಜಿಲ್ಲಾ ಕಾರ್ಯದರ್ಶಿ ಡಾ. ಹನುಮಂತರಾವ್ ಭರ, ಜಿಲ್ಲಾ ಸಂಘಟಕರಾದ ಶ್ರೀಮತಿ ನಾಗರತ್ನ ಪಾಟಿಲ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



## ಚಿಕ್ಕಮಗಳೂರು

ಜುಲೈ 01 ರಂದು ಶೃಂಗೇರಿ ತಾಲ್ಲೂಕು ನೂತನ ಸ್ಥಳೀಯ ಸಂಸ್ಥೆಗಳ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಸಲುವಾಗಿ ಅಧ್ಯಕ್ಷರು ಕಾರ್ಯದರ್ಶಿಗಳು ಮತ್ತು ಪದಾಧಿಕಾರಿಗಳನ್ನು ಭೇಟಿ ಮಾಡಲಾಯಿತು ಹಾಗೂ ವಾರ್ಷಿಕ ಕಾರ್ಯಕ್ರಮಗಳ ಯೋಜನಾ ಪುಸ್ತಕವನ್ನು ವಿತರಿಸಲಾಯಿತು

* ಜುಲೈ 02 ರಂದು ತುಮಕೂರು ಜಿಲ್ಲೆಗೆ ವರ್ಗಾವಣೆಗೊಂಡ ಮಾನ್ಯ ಸಿ.ಇ.ಓ. ಶ್ರೀ ಜಿ. ಪ್ರಭುರವರನ್ನು ಚಿಕ್ಕಮಗಳೂರು ಜಿಲ್ಲಾ ಸಂಸ್ಥೆಯ ವತಿಯಿಂದ ಜಿಲ್ಲಾ ಸಂಸ್ಥೆಯ ಮುಖ್ಯ ಆಯುಕ್ತರಾದ ಶ್ರೀ ಎಂ.ಎನ್. ಷಡಕ್ಷರಿ ಹಾಗೂ ರಾಜ್ಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಎ.ಎನ್. ಮಹೇಶ್ ಮತ್ತು ಪದಾಧಿಕಾರಿಗಳು ಬೀಳ್ಕೊಟ್ಟರು.



* ಜುಲೈ 14 ರಂದು ನೂತನ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಾದ ಶ್ರೀ ಗೋಪಾಲಕೃಷ್ಣರವರನ್ನು ಚಿಕ್ಕಮಗಳೂರು ಜಿಲ್ಲಾ ಸಂಸ್ಥೆ ವತಿಯಿಂದ ಸ್ವಾಗತಿಸಲಾಯಿತು ಹಾಗೂ ವಾರ್ಷಿಕ ಯೋಜನಾ ಕಾರ್ಯಕ್ರಮ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ರಾಜ್ಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಎ.ಎನ್. ಮಹೇಶ್‌ರವರು ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.



* ಜುಲೈ 03 ರಂದು ಚಿಕ್ಕಮಗಳೂರು ಜಿಲ್ಲೆಗೆ ನೂತನ ಜಿಲ್ಲಾಧಿಕಾರಿಗಳಾಗಿ ಆಗಮಿಸಿರುವ ಶ್ರೀಮತಿ ಮೀನಾ ನಾಗರಾಜರವರನ್ನು ಚಿಕ್ಕಮಗಳೂರು ಜಿಲ್ಲಾ ಸಂಸ್ಥೆ ವತಿಯಿಂದ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಯುತ ಎಂ.ಎನ್. ಷಡಕ್ಷರಿ, ಜಿಲ್ಲಾ ಸಹಾಯಕ ಕಾರ್ಯದರ್ಶಿಗಳಾದ ನೀಲಕಂಠಚಾರ್, ಜಿಲ್ಲಾ ಸಂಘಟಕರಾದ ಶ್ರೀಯುತ ಬಿ.ಎಂ. ಕಿರಣ್‌ಕುಮಾರ್, ಗೈಡ್ ಕ್ಯಾಪ್ಟನ್ ಶ್ರೀಮತಿ ಭಾಗ್ಯ ಸಂಸ್ಥೆಯ ಪರವಾಗಿ ಸ್ವಾಗತಿಸಿದರು.



* ಜುಲೈ 05 ರಿಂದ 11ರ ವರೆಗೆ ರಾಜ್ಯ ಸಂಸ್ಥೆ, ಚಿಕ್ಕಮಗಳೂರು ಜಿಲ್ಲಾ ಸಂಸ್ಥೆ ಮತ್ತು ಶಾಲಾ ಶಿಕ್ಷಣ ಸಾಕ್ಷರತಾ ಇಲಾಖೆಯ ಸಹಯೋಗದೊಂದಿಗೆ ಜಿಲ್ಲಾ ಮಟ್ಟದ ಕಬ್ ಮತ್ತು ಬುಲ್ ಬುಲ್ ಶಿಕ್ಷಕ ಶಿಕ್ಷಕಿಯರಿಗೆ ಮೂಲ ತರಬೇತಿಯನ್ನು ಶ್ರೀ ಮಂಜುನಾಥೇಶ್ವರ ವಿದ್ಯಾ ಕೇಂದ್ರ ಜ್ಯೋತಿನಗರ ಇಲ್ಲಿ ಏರ್ಪಡಿಸಲಾಗಿತ್ತು ಈ ಶಿಬಿರದಲ್ಲಿ ಕಬ್ ವಿಭಾಗದ ನಾಯಕರಾಗಿ ಶ್ರೀಮತಿ ಸಿ ಸಂಧ್ಯಾರಾಣಿ ಹಾಗೂ ಬುಲ್ ಬುಲ್ ವಿಭಾಗದ ನಾಯಕರಾಗಿ ಶ್ರೀಮತಿ ಸೋಫಿಯಾ ಫರ್ನಾಂಡಿಸ್ ಅವರುಗಳು ಕಾರ್ಯನಿರ್ವಹಿಸಿದರು, ಕಬ್ ವಿಭಾಗದಿಂದ 14 ಹಾಗೂ ಬುಲ್ ಬುಲ್ ವಿಭಾಗದಲ್ಲಿ 10 ಶಿಬಿರಾರ್ಥಿಗಳು ಹಾಜರಿದ್ದರು. ಜುಲೈ 06ರಂದು ಮೂಲ ತರಬೇತಿ ಶಿಬಿರವನ್ನು ಜಿಲ್ಲಾ ಉಪ ನಿರ್ದೇಶಕರಾದ ಶ್ರೀ ರಂಗನಾಥಸ್ವಾಮಿರವರು ಉದ್ಘಾಟಿಸಿದರು. ಜಿಲ್ಲಾ ಸಂಸ್ಥೆಯ ಮುಖ್ಯ ಆಯುಕ್ತರಾದ ಶ್ರೀ ಎಂ.ಎನ್. ಷಡಕ್ಷರಿ, ರಾಜ್ಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಎ.ಎನ್. ಮಹೇಶ್, ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಮಮತಾ, ಶ್ರೀ ಸಿ.ಆರ್.ಪಿ. ಪೂರ್ಣೇಶ್‌ರವರುಗಳು ಉಪಸ್ಥಿತರಿದ್ದರು.



* ಜುಲೈ 19 ರಂದು ಕಡೂರು ತಾಲ್ಲೂಕಿನ ಶ್ರೀ ಸಿದ್ದರಾಜು ನಾಯಕ್, ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಭೇಟಿ ಮಾಡಿ ವಾರ್ಷಿಕ ಯೋಜನಾ ಪುಸ್ತಕವನ್ನು ನೀಡಲಾಯಿತು. ಕಡೂರು ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಪ್ರಕಾಶ್ ಮೂರ್ತಿ ಹಾಜರಿದ್ದರು.

* ಜುಲೈ 28 ರಂದು ಬೀರೂರು ತಾಲೂಕಿಗೆ ಆಗಮಿಸಿರುವ ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ವಾರ್ಷಿಕ ಯೋಜನೆ ಪುಸ್ತಕವನ್ನು ಹಸ್ತಾಂತರಿಸಲಾಯಿತು.

* ಆಗಸ್ಟ್ 01 ರಂದು ಸನ್ರೈಸ್ ಡೇ ಮತ್ತು ಸ್ಕಾರ್ಫ್ ಡೇ ಪ್ರಯುಕ್ತ ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀಮತಿ ಮೀನಾ ನಾಗರಾಜ್ ಮತ್ತು ಉಪ ದಂಡಾಧಿಕಾರಿಗಳಾದ ಶ್ರೀ ನಾರಾಯಣ ರೆಡ್ಡಿ ಹಾಗೂ ಜಿಲ್ಲಾ ವರಿಷ್ಠ ಪೊಲೀಸ್ ಅಧಿಕಾರಿಗಳಾದ ಶ್ರೀಮತಿ ಉಮಾ ಪ್ರಶಾಂತ್‌ರವರಿಗೆ ಜಿಲ್ಲಾ

ಸಂಸ್ಥೆಯ ಪರವಾಗಿ ಕಂಠ ಪಟ್ಟಿಯನ್ನು ನೀಡಿ. ಈ ದಿನದ ಮಹತ್ವವನ್ನು ತಿಳಿಸಲಾಯಿತು. ಈ ಸಂದರ್ಭದಲ್ಲಿ ಹಿರಿಯ ಸ್ಕೌಟರ್ ಶ್ರೀ ನೀಲಕಂಠಚಾರ್, ಜಿಲ್ಲಾ ಜಂಟಿ ಕಾರ್ಯದರ್ಶಿಗಳು ಶ್ರೀಮತಿ ವಾಸಂತಿ, FLOCK ಲೀಡರ್ (HWB) ಜಿಲ್ಲಾ ಸಂಘಟಕರುಗಳಾದ ಶ್ರೀ ಬಿ.ಎನ್. ಕಿರಣ್‌ಕುಮಾರ್, ALT (S) ಮತ್ತು ಶ್ರೀ ನಿಹಾಲ್, SGV ಉಪಸಿತರಿದ್ದರು.

* ಆಗಸ್ಟ್ 15 ರಂದು ಚಿಕ್ಕಮಗಳೂರು ಜಿಲ್ಲೆ ಸಂಸ್ಥೆಯ ವತಿಯಿಂದ ಸ್ವಾತಂತ್ರ ದಿನಾಚರಣೆ ಆಚರಿಸಲಾಯಿತು. ನೆಹರು ಯುವಕ ಕೇಂದ್ರದ ಶ್ರೀ ಸಿ. ಅಭಿಷೇಕ್‌ರವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀಮತಿ ಸಂಧ್ಯಾರಾಣಿ ಅವರು ಧ್ವಜಾರೋಹಣ ಮಾಡಿದರು. ಸ್ಕೌಟ್ ಮತ್ತು ಗೈಡ್ಸ್ ಮಕ್ಕಳು ಹಾಗೂ ಜಿಲ್ಲಾ ಸಂಘಟನಾ ಆಯುಕ್ತರು ಶ್ರೀ ಬಿ.ಎನ್. ಕಿರಣ್‌ಕುಮಾರ್, ಶ್ರೀ ಎಸ್.ಜಿ.ವಿ. ನಿಹಾಲ್ ಎನ್.ಎಸ್. ಉಪಸ್ಥಿತರಿದ್ದರು.

* ಆಗಸ್ಟ್ 15 ರಂದು ಜಿಲ್ಲಾಡಳಿತ ವತಿಯಿಂದ ನಡೆದ 77ನೇ ಸ್ವಾತಂತ್ರ್ಯ ದಿನಾಚರಣೆಯ ಕವಾಯತಿನಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ 7 ತುಕಡಿಗಳು ಭಾಗವಹಿಸಿದ್ದವು. ವಾಸವಿ ಶಾಲೆಯ ಸ್ಕೌಟ್ ತುಕಡಿ ಪ್ರಥಮ ಸ್ಥಾನವನ್ನು ಪಡೆಯಿತು.

## ದಕ್ಷಿಣ ಕನ್ನಡ

ಆಗಸ್ಟ್ 18 ರಂದು ಕರ್ನಾಟಕ ಸರ್ಕಾರ, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ, ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ), ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ಇವರ ಸಹಭಾಗಿತ್ವದಲ್ಲಿ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಭವನ ಲಾಲ್‌ಬಾಗ್ ಮಂಗಳೂರಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸರ್ಕಾರಿ ಅನುದಾನಿತ, ಅನುದಾನ ರಹಿತ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕ/ ಉಪನ್ಯಾಸಕಿಯರುಗಳ ರೋವರ್ ಮತ್ತು ರೇಂಜರ್ ಮಾಹಿತಿ ಕಾರ್ಯಾಗಾರವು ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಖ್ಯ ಆಯುಕ್ತರು ಮಾತನಾಡಿ "ಪಠ್ಯ ಚಟುವಟಿಕೆಗಳೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಲು ಪ್ರೇರೇಪಿಸುವಲ್ಲಿ ಭಾರತ್ ಸ್ಕೌಟ್ಸ್–ಗೈಡ್ಸ್‌ನ ರೋವರ್ ಮತ್ತು ರೇಂಜರ್ ವಿಭಾಗವು ಅವಕಾಶವನ್ನು ಒದಗಿಸಿಕೊಡುತ್ತದೆ. ಆದುದರಿಂದ ತಾವೆಲ್ಲರೂ, ತಮ್ಮ ವಿದ್ಯಾರ್ಥಿಗಳನ್ನು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಬೇಕೆಂದು" ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲೆಯ ಸಾಧನೆಯ ಬಗ್ಗೆ ಶ್ಲಾಘಿಸಿದರು. ಕಾರ್ಯಕ್ರಮವನ್ನು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಾದ





ಡಾ॥ ಆನಂದ್ .ಕೆ., ಐ.ಎ.ಎಸ್.ರವರು ದೀಪ ಬೆಳಗಿಸಿ ಉದ್ಘಾಟಿಸಿ "ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ಹಲವು ಸೇವಾ ಕಾರ್ಯದಲ್ಲಿ ತೊಡಗಿಕೊಂಡಿರುವ ಒಂದು ಸೇವಾ ಸಂಸ್ಥೆಯಾಗಿದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಘಟಿಸುವ ಸೇವಾ ಚಟುವಟಿಕೆಗಳು ಹಾಗೂ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಸೇವಾ ಮನೋಭಾವವನ್ನು ಬೆಳೆಸುವಲ್ಲಿ ಉಪನ್ಯಾಸಕರು ಶ್ರಮವಹಿಸಬೇಕೆಂದು" ತಿಳಿಸಿದರು. ಶ್ರೀ ಸಿ.ಡಿ. ಜಯಣ್ಣ ಉಪನಿರ್ದೇಶಕರು ಪದವಿಪೂರ್ವ ಇಲಾಖೆ ದ.ಕ. ಮಂಗಳೂರು, ಶ್ರೀ ಕೆ. ಗಂಗಾಧರ್ ಆಳ್ವ ಅಧ್ಯಕ್ಷರು ಪದವಿಪೂರ್ವ ಕಾಲೇಜು ಪ್ರಾಂಶುಪಾಲರ ಸಂಘ ದ.ಕ. ಮಂಗಳೂರು ಹಾಗೂ ಇತರರು ಉಪಸ್ಥಿತರಿದ್ದರು. ಕಾರ್ಯಾಗಾಲದಲ್ಲಿ ಒಟ್ಟು 194 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಶ್ರೀ ಎಂ. ಗುರುಮೂರ್ತಿ, ಎಲ್.ಟಿ. (ಸ್ಕೌಟ್ಸ್) ಶಿಬಿರ ನಾಯಕರಾಗಿದ್ದರು. ಶ್ರೀ ಎಂ. ಪ್ರಭಕರ ಭಟ್, ಶ್ರೀ ಎಂ.ಜಿ. ಕಜೆ, ಶ್ರೀಮತಿ ಜಯವಂತಿ ಸೋನ್ಸ್, ಶ್ರೀಮತಿ ಶಾಂತಾ ರಾಮಪ್ರಭು ಇವರುಗಳು ಸಹಕರಿಸಿದರು.

## ದಾವಣಗೆರೆ

ಜುಲೈ 18 ರಂದು ನಗರದ ಗುರುಭವನದಲ್ಲಿ ಶ್ರೀ ಅಂಬಣ್ಣ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರ ಅಧ್ಯಕ್ಷತೆಯಲ್ಲಿ ನಡೆದ ಸಿ.ಆರ್.ಪಿ., ಬಿ.ಆರ್.ಸಿ. ಮತ್ತು ಟಿ.ಪಿ.ಓ. ಹಾಗೂ ಪ್ರಾಥಮಿಕ ಪ್ರೌಢಶಾಲಾ ಮುಖ್ಯೋಪಾಧ್ಯಾಯರುಗಳ ಒಂದು ದಿನದ ಮಾಹಿತಿ ಕಾರ್ಯಾಗಾರದಲ್ಲಿ ರಾಜ್ಯ ಸಂಘಟನಾ ಆಯುಕ್ತರಾದ ಶ್ರೀಮತಿ ಮಂಜುಳ ಸಿ. ಭಾಗವಹಿಸಿ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀಮತಿ ರತ್ನ ಎಂ., ಎಸ್.ಜಿ.ವಿ. ಶ್ರೀಮತಿ ಅಶ್ವಿನಿ ಜೆ. ಉಪಸ್ಥಿತರಿದ್ದರು.



* ಜುಲೈ 19 ರಂದು ಗುರುಭವನದಲ್ಲಿ ಶ್ರೀ ದ್ವಾರಕೀಶ್, ಕ್ಷೇತ್ರ ಶಿಕ್ಷಣಾಧಿಕಾರಿಗಳು ದಾವಣಗೆರೆ ಉತ್ತರ ವಲಯ ಇವರ ಅಧ್ಯಕ್ಷತೆಯಲ್ಲಿ ನಡೆದ ಸಿ.ಆರ್.ಪಿ., ಬಿ.ಆರ್.ಸಿ, ಟಿ.ಪಿ.ಓ ಮತ್ತು ಪ್ರಾಥಮಿಕ ಶಾಲಾ



ಮುಖ್ಯೋಪಾಧ್ಯಾಯರ ಒಂದು ದಿನದ ಮಾಹಿತಿ ಶಿಬಿರದಲ್ಲಿ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀಮತಿ ಎಂ. ರತ್ನ ಮತ್ತು ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಭಾಗವಹಿಸಿ ಸ್ಕೌಟಿಂಗ್–ಗೈಡಿಂಗ್ ಮಾಹಿತಿಯನ್ನು ನೀಡಿದರು.

* ಜುಲೈ 20 ರಂದು ಸರ್ಕಾರಿ ಬಾಲಕರ ಪ್ರೌಢ ಶಾಲೆಯಲ್ಲಿ ಶ್ರೀ ದ್ವಾರಕೀಶ್, ಕ್ಷೇತ್ರ ಶಿಕ್ಷಣಾಧಿಕಾರಿಗಳು ದಾವಣಗೆರೆ ದಕ್ಷಿಣ ವಲಯ ಇವರ ಅಧ್ಯಕ್ಷತೆಯಲ್ಲಿ ನಡೆದ ಸಿ.ಆರ್.ಪಿ. ಬಿ.ಆರ್.ಸಿ, ಟಿ.ಪಿ.ಓ ಮತ್ತು ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಒಂದು ದಿನದ ಮಾಹಿತಿ ಶಿಬಿರದಲ್ಲಿ ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಸಿ.ಆರ್. ಮರುಳಪ್ಪ ಜಿಲ್ಲಾ ಸಹಾಯಕ ಆಯುಕ್ತರು ದಕ್ಷಿಣ ವಲಯ, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಭಾಗವಹಿಸಿದ ಸ್ಕೌಟಿಂಗ್–ಗೈಡಿಂಗ್ ಮಾಹಿತಿಯನ್ನು ನೀಡಿದರು.



* ಜುಲೈ 21 ರಂದು ಜಿಲ್ಲಾ ಸಂಸ್ಥೆ ವತಿಯಿಂದ ಜಿಲ್ಲಾ ಮಟ್ಟದ ಪ್ರಾರಂಭಿಕ ಮಾಹಿತಿ ಶಿಬಿರವನ್ನು ಧ.ರಾ.ಮ ಸ್ಕೌಟ್ ಭವನದಲ್ಲಿ ಆಯೋಜಿಸಲಾಗಿತ್ತು. ಶಿಬಿರದ ಉದ್ಘಾಟನೆಯನ್ನು ಶ್ರೀಮತಿ ಎಸ್. ಶಾಂತಾ ಯಾವಗಲ್, ಜಿಲ್ಲಾ ಉಪಾಧ್ಯಕ್ಷರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು ಹಾಗೂ ಇತರರು ಉಪಸ್ಥಿತರಿದ್ದರು.



* ಜುಲೈ 23 ರಂದು ವಿಶ್ವ ಪೋಷಕರ ದಿನಾಚರಣೆ ಅಂಗವಾಗಿ ಗೂಗಲ್ ಮೀಟ್ ಮೂಲಕ “ಪೋಷಕರಿಗೊಂದು ನಮನ” ಎಂಬ ವಿಶೇಷ ಆನ್‌ಲೈನ್ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ರಾಜ್ಯ ಸಂಘಟನಾ ಆಯುಕ್ತರಾದ ಶ್ರೀಮತಿ ಮಂಜುಳ ಸಿ., ಶ್ರೀಮತಿ ಶಾಂತಾ ಎಸ್. ಯಾವಗಲ್, ಶ್ರೀಮತಿ ಮಂಗಳ ವಿಶ್ವನಾಥ್, ಜಿಲ್ಲಾ ಉಪಾಧ್ಯಕ್ಷರು, ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಭಾಗವಹಿಸಿದ್ದರು. ಮಕ್ಕಳು ಪೋಷಕರೊಂದಿಗೆ ವಿವಿಧ ಹಾಡು ಮತ್ತು ನೃತ್ಯಗಳ ಮೂಲಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಕಾರ್ಯಕ್ರಮವನ್ನು ನಡೆಸಿಕೊಟ್ಟರು.

* ಜುಲೈ 24 ರಂದು ಧ.ರಾ.ಮ ಸ್ಕೌಟ್ ಭವನದಲ್ಲಿ ದಕ್ಷಿಣ ಕೊರಿಯಾ ದೇಶದಲ್ಲಿ ನಡೆಯುತ್ತಿರುವ 25ನೇ ಅಂತರ ರಾಷ್ಟ್ರೀಯ ಜಾಂಬೂರಿಯಲ್ಲಿ ಅಂತರ್ ರಾಷ್ಟ್ರೀಯ ಸೇವಾ ತಂಡದ ಸದಸ್ಯರಾಗಿ ಭಾಗವಹಿಸುತ್ತಿರುವ ಶ್ರೀ ವಿಜಯ್‌ಕುಮಾರ್ ಬಿ.ಪಿ., ಸೆಂಟ್ ಮೇರಿಸ್ ಕಾನ್ವೆಂಟ್ ಶಾಲೆ, ಹರಿಹರ ಮತ್ತು ಅಭ್ಯರ್ಥಿಯಾಗಿ ಕುಮಾರಿ ಶ್ರೀರಕ್ಷ ಎಸ್.ಕೆ., ಶ್ರೀ ತರಳಬಾಳು ವಿದ್ಯಾ ಸಂಸ್ಥೆ ಇವರಿಗೆ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ ಶುಭ ಹಾರೈಸಿದರು.

* ಜುಲೈ 26 ರಂದು ಕಾರ್ಗಿಲ್ ವಿಜಯೋತ್ಸವ ಅಂಗವಾಗಿ ಪಿ.ಎಸ್.ಎಸ್.ಇ.ಎಂ.ಆರ್. ಶಾಲೆಯಲ್ಲಿ ಯೋಧರಿಗೆ ವಿಶೇಷ ನಮನ ಸಲ್ಲಿಸಲಾಯಿತು.

* ಜುಲೈ 26 ರಂದು ಕಾರ್ಗಿಲ್ ವಿಜಯ ದಿವಸ್ ಆಚರಣೆಯನ್ನು ನಗರದ ಅಮರ್ ಜವಾನ್ ಪಾರ್ಕ್‌ನಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ನಿವೃತ್ತ ಏರ್‌ಫೋರ್ಸ್ ಅಧಿಕಾರಿಗಳಾದ ಶ್ರೀ ಎಮ್.ಎಸ್. ರಾಮಚಂದ್ರಪ್ಪರವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಗಿಲ್ ವಿಜಯ ದಿವಸ್ ಬಗ್ಗೆ ವಿವರಿಸಿದರು. ಕಾರ್ಯಕ್ರಮದಲ್ಲಿ ನಂದಗೋಕುಲ, ಆರ್.ವಿ.ಜಿ.ಕೆ. ಜೈನ್ ವಿದ್ಯಾಲಯ, ಸಿದ್ದಗಂಗಾ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು, ಸ್ಕೌಟರ್ಸ್–ಗೈಡರ್ಸ್‌ಗಳು, ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಶ್ರೀಮತಿ ಆರ್. ಸುಖವಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿಗಳು, ಶ್ರೀಮತಿ ಅನಸೂಯ ನಂದಗೋಕುಲ ಶಾಲೆ ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಕಾರ್ಯಕ್ರಮವನ್ನು ಸಂಘಟಿಸಿದರು.




* ಜುಲೈ 26 ರಂದು ಜೈನ್ ವಿದ್ಯಾಲಯ ಶಾಲೆಯಲ್ಲಿ, ಸೈನಿಕರ ನಂದಗೋಕುಲ ಶಾಲೆಯಲ್ಲಿ ಮತ್ತು ಅಮೃತವಿದ್ಯಾಲಯ ಶಾಲೆಯಲ್ಲಿ ಕಾರ್ಗಿಲ್ ವಿಜಯೋತ್ಸವವನ್ನು ಆಚರಿಸಿದರು.

* ಜುಲೈ 28 ರಂದು ದಾವಣಗೆರೆ ಉತ್ತರ ಸ್ಥಳೀಯ ಸಂಸ್ಥೆಯ ಆರ್.ವಿ.ಜಿ.ಕೆ. ಪ್ರೌಢ ಶಾಲೆಯಲ್ಲಿ ಆರೋಗ್ಯ ಇಲಾಖೆ ವತಿಯಿಂದ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಸ್ವಚ್ಛತೆ ಮತ್ತು ಆರೋಗ್ಯದ ಅರಿವು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಡಾಕ್ಟರ್ ದೇವರಾಜ್ ಮಕ್ಕಳಿಗೆ ಸ್ವಚ್ಛತೆ ಮತ್ತು ನೀರಿನಿಂದ ಹರಡುವ ರೋಗಗಳ ಬಗ್ಗೆ ಹಾಗೂ ಕುರಕಲು ತಿಂಡಿ ತಿನಿಸು ಪಾನೀಯಗಳು ದೇಹಕ್ಕೆ ಹೇಗೆ ಮಾರಕ ಎಂಬುದನ್ನು ತಿಳಿಸಿದರು.

* ಆಗಸ್ಟ್ 01 ರಂದು ವಿಶ್ವ ಸ್ಕಾರ್ಫ್ ಮತ್ತು ಸೂರ್ಯೋದಯ ದಿನಾಚರಣೆಯನ್ನು ಪ್ರತಿಜ್ಞೆಯ ಮರು ಉಚ್ಚಾರಣೆ ಮಾಡುವ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಕೆನಡಾ ದೇಶದಿಂದ ಬಂದಿದ್ದ ಜಿಲ್ಲಾ ಸಂಸ್ಥೆ ಅಧ್ಯಕ್ಷರಾದ ಶ್ರೀ ಜಯಪ್ರಕಾಶ್ ಜೆ. ಚಿಗಟೇರಿಯವರ ಮೊಮ್ಮಗ ಚಿರಂಜೀವಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಶ್ರೀ ಜಯಪ್ರಕಾಶ್ ಜೆ. ಚಿಗಟೇರಿ, ಅಧ್ಯಕ್ಷರು, ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಭಾಗವಹಿಸಿದ್ದರು.



* ಆಗಸ್ಟ್ 01 ರಂದು ವಿಶ್ವ ಸ್ಕಾರ್ಫ್ ದಿನಾಚರಣೆ ಅಂಗವಾಗಿ ಸಿದ್ದಗಂಗಾ ಸ್ಥಳೀಯ ಸಂಸ್ಥೆ ಶ್ರೀ ಸಿದ್ದಗಂಗಾ ಶಾಲೆಯಲ್ಲಿ ಸನ್‌ರೈಸ್ ಡೇ ಅನ್ನು ಆಚರಿಸಿದರು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯಸ್ಥರಾದ ಶ್ರೀಮತಿ ಜಸ್ಟೀನ್ ಡಿಸೋಜರವರು ಉಪಸ್ಥಿತರಿದ್ದರು.

* ಆಗಸ್ಟ್ 01 ರಂದು ದಾವಣಗೆರೆ ಜಿಲ್ಲೆಯ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಶಾಲೆಗಳಲ್ಲಿ ವಿಶ್ವ ಸ್ಕಾರ್ಫ್‌ಡೇ ಮತ್ತು ಸನ್‌ರೈಸ್ ಡೇ ಅನ್ನು ಆಚರಿಸಲಾಯಿತು.

* ಆಗಸ್ಟ್ 11 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಪಟೇಲ್ ವೀರಪ್ಪ ಶಾಲೆಯಲ್ಲಿ ಎಸ್.ಡಿ.ಆರ್.ಎಫ್. ತಂಡದವರು ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಿಗೆ ಪ್ರಕೃತಿ ವಿಕೋಪ ಸಂದರ್ಭದಲ್ಲಿ ಪರಿಹಾರ ಕಾರ್ಯಚರಣೆಯು ಹೇಗೆ ನಡೆಯುತ್ತದೆ ಎಂಬುದನ್ನು ಪ್ರಾತ್ಯಕ್ಷಿಕವಾಗಿ ತಿಳಿಸಿಕೊಟ್ಟರು. ಈ ಸಂದರ್ಭದಲ್ಲಿ ಎಸ್.ಡಿ.ಆರ್.ಎಫ್. ಮುಖ್ಯಸ್ಥರಾದ ಶ್ರೀ ಕಿರಣ್‌ಕುಮಾರ್, ಸಬ್‌ಇನ್ಸ್‌ಪೆಕ್ಟರ್ ಸಂಗಮೇಶ್, ಶಾಲಾ ನಿರ್ದೇಶಕರಾದ ಶ್ರೀಮತಿ ಪ್ರಣೀತ ಗಿರಿರಾಜ್, ಮುಖ್ಯೋಪಾಧ್ಯಾಯರಾದ ಶ್ರೀ ಮಲ್ಲಿಕಾರ್ಜುನ ಡಿ.ಕೆ. ಮತ್ತು ಶಾಲಾ ಸಿಬ್ಬಂದಿ ಉಪಸ್ಥಿತರಿದ್ದರು.

* ಆಗಸ್ಟ್ 12 ರಂದು ಧ.ರಾ.ಮ ಸ್ಕೌಟ್ ಭವನದಲ್ಲಿ ಜಿಲ್ಲಾ ಕಾರ್ಯಕಾರಿ ಸಮಿತಿ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಡಾ॥ ನಾರಾಯಣಸ್ವಾಮಿ ರೋವರ್ ಸ್ಕೌಟ್ ಲೀಡರ್ ಇವರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಪದವಿ ಕೇಂದ್ರದಿಂದ ಬೆಂಗಳೂರಿಗೆ ವರ್ಗಾವಣೆಯಾದ ಪ್ರಯುಕ್ತ ಅವರ ಸೇವೆಯನ್ನು ಸ್ಮರಿಸಿ ಜಿಲ್ಲಾ ಸಂಸ್ಥೆ ವತಿಯಿಂದ ಸನ್ಮಾನಿಸಲಾಯಿತು. ಜೊತೆಗೆ ಶ್ರೀ ಸಿ.ಆರ್. ಮರುಳಪ್ಪ ಜಿಲ್ಲಾ ಸಹಾಯಕ ಆಯುಕ್ತರು ಇವರು ಮುಖ್ಯೋಪಾದ್ಯಾಯರಾಗಿ ನಿವೃತ್ತಿ ಹೊಂದಿದ ಪ್ರಯುಕ್ತ ಇವರ ಸೇವೆಯನ್ನು ಸ್ಮರಿಸಿ ಸನ್ಮಾನಿಸಲಾಯಿತು.

* ಆಗಸ್ಟ್ 15 ರಂದು 77ನೇ ಸ್ವತಂತ್ರ ದಿನಾಚರಣೆಯನ್ನು ಜಿಲ್ಲಾ ಸಂಸ್ಥೆ ಆವರಣದಲ್ಲಿ ಆಚರಿಸಲಾಯಿತು. ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು ಧ್ವಜಾರೋಹಣ ಮಾಡಿದರು. ಜಿಲ್ಲಾ ಸಂಸ್ಥೆಯಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಆಗಸ್ಟ್ 14 ರಂದು ದಾವಣಗೆರೆ ಜಿಲ್ಲಾ ಸಂಸ್ಥೆ ವತಿಯಿಂದ ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ, ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ 'ಹುತಾತ್ಮರಿಗೊಂದು ನಮನ' ಎಂಬ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಭಾರತ ಬಿಟ್ಟು ತೊಲಗಿ ಚಳುವಳಿ ತಾರಕದಲ್ಲಿದ್ದಾಗ ದಾವಣಗೆರೆಯಲ್ಲಿ ಸ್ವಾತಂತ್ರ ಹೋರಾಟಗಾರರು ರೈಲ್ವೆ ನಿಲ್ದಾಣ ಮತ್ತು ತಾಲ್ಲೂಕು ಖಜಾನೆಗೆ ಮುತ್ತಿಗೆ ಹಾಕಿ ವಶಕ್ಕೆ ಪಡೆಯುವ ತಂತ್ರ ಹೂಡಿ ಕಾರ್ಯಯೋನ್ಮುಖರಾದಾಗ ಆಗಿನ ಬ್ರಿಟಿಷ್ ಸರ್ಕಾರ ಗೋಲಿಬಾರ್ ನಡೆಸಿತು. ಆ ಸಂದರ್ಭದಲ್ಲಿ ಶ್ರೀಯುತರಾದ ಹಳ್ಳೂರು ನಾಗಪ್ಪ, ಅಕ್ಕ ಸಾಲೆ ವಿರೂಪಾಕ್ಷಪ್ಪ, ಬಿದರಕುಂದಿ ನಿಂಗಪ್ಪ, ಹದಡಿ ನಿಂಗಪ್ಪ, ಹಮಾಲಿ ತಿಮ್ಮಣ್ಣ, ಮಗಾನಳ್ಳಿ ಹನುಮಂತಪ್ಪ ಈ 6 ಜನರು ಹುತಾತ್ಮರಾದರು. ಅವರ ಸ್ಮರಣಾರ್ಥ ಮಹಾ ನಗರ ಪಾಲಿಕೆ ಆವರಣದಲ್ಲಿ ನಿರ್ಮಿಸಿರುವ ಹುತಾತ್ಮರ ಸ್ಮಾರಕಕ್ಕೆ ಶ್ರೀಮತಿ ರೇಣುಕಾ, ಆಯುಕ್ತರು, ಶ್ರೀ ವಿನಾಯಕ ಮಹಾಪೌರರು ಮತ್ತು ಶ್ರೀ ಮುರುಘಾ ರಾಜೇಂದ್ರ ಜೆ. ಚಿಗಟೇರಿಯವರು ಹೂಗುಚ್ಛವನ್ನು ಇಡುವ ಮೂಲಕ ನಮನ ಸಲ್ಲಿಸಿದರು. ಜಿಲ್ಲಾ ಪದಾಧಿಕಾರಿಗಳು ರೋವರ್ಸ್, ರೇಂಜರ್ಸ್, ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಉಪಸ್ಥಿತಿರಿದ್ದರು.

## ಅಭಿನಂದನೆಗಳು



ಕರ್ನಾಟಕ ಸಮುದಾಯ ಆರೋಗ್ಯ ಸಂಸ್ಥೆ ನೀಡುವ 2023ನೇ ಸಾಲಿನ '**ಸಮೃದ್ಧ ಸಮುದಾಯ ಆರೋಗ್ಯ ಸಾಹಿತ್ಯ**' ಪ್ರಶಸ್ತಿಗೆ ಆಯುರ್ವೇದ ವೈದ್ಯೆ ಮತ್ತು ಸಾಹಿತಿ ಡಾ. ವಸುಂಧರಾ ಭೂಪತಿ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರತಿ ವರ್ಷ ವೈದ್ಯ ಸಾಹಿತ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ ಒಬ್ಬರನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗುತ್ತಿದ್ದು, ಈ ಬಾರಿ ಡಾ. ವಸುಂಧರಾ ಭೂಪತಿ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಡಾ. ದಯಾನಂದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. 'ಡಾ. ವಸುಂಧರಾ ಭೂಪತಿಯವರು ಸಾಹಿತ್ಯ ಕ್ಷೇತ್ರದಲ್ಲಿಯೂ ಹೆಸರು ಮಾಡಿದ್ದು, ವೈದ್ಯಕೀಯಕ್ಕೆ ಸಂಬಂಧಿಸಿದಂತೆ 70ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅಲ್ಲದೆ, ವೈದ್ಯಕೀಯಕ್ಕೆ ಸಂಬಂಧಿಸಿದಂತೆ ನಾಡಿನ ಹೆಸರಾಂತ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಅವರ ಅಂಕಣಗಳು ಹೆಚ್ಚು ಜನಪ್ರಿಯವಾಗಿವೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿ ಅವರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿ ಪ್ರದಾನ ಸಮಾರಂಭವು ಇದೇ ತಿಂಗಳ 11ರಂದು ಕೆಂಪೇಗೌಡ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ನಲ್ಲಿ ನಡೆಯಲಿದೆ'. ಇವರು ಕರ್ನಾಟಕ ಸ್ಕೌಟ್-ಗೈಡ್ ಮಾಸಪತ್ರಿಕೆಯ ಸಂಪಾದರ ಮಂಡಲಿಯ ಸದಸ್ಯರಾಗಿದ್ದಾರೆ. ರಾಜ್ಯ ಸಂಸ್ಥೆಯ ಪರವಾಗಿ ಇವರಿಗೆ ಹಾರ್ಧಿಕ ಅಭಿನಂದನೆಗಳು.

-ರಾಜ್ಯ ಕಾರ್ಯದರ್ಶಿ

## ಧಾರವಾಡ

ಅಪರ ಜಿಲ್ಲಾಧಿಕಾರಿಗಳಾದ ಶ್ರೀ ಶಿವಾನಂದ ಭಜಂತ್ರಿ ಇವರು ರಾಜ್ಯ ವಾರ್ಷಿಕ ಯೋಜನಾ ಪುಸ್ತಕ–2023 ಬಿಡುಗಡೆಗೊಳಿಸಿದರು. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಕುಲಪತಿಗಳಾದ ಶ್ರೀ ಕೆ.ಬಿ. ಗುಡಸಿ ಇವರು ರಾಜ್ಯ ವಾರ್ಷಿಕ ಯೋಜನಾ ಪುಸ್ತಕ–2023 ಬಿಡುಗಡೆಗೊಳಿಸಿ ಶುಭ ಕೋರಿದರು. ಪ್ರಾಂತೀಯ ಜಂಟಿ ನಿರ್ದೇಶಕರು ಆದ ಶ್ರೀ ಹನುಮಂತಪ್ಪ ಇವರು ರಾಜ್ಯ ವಾರ್ಷಿಕ ಯೋಜನಾ ಪುಸ್ತಕ–2023 ಬಿಡುಗಡೆಗೊಳಿಸಿದರು. ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಶ್ರೀಮತಿ ಶಶಿಕಲಾ ಇವರು ರಾಜ್ಯ ವಾರ್ಷಿಕ ಯೋಜನಾ ಪುಸ್ತಕ–2023 ಬಿಡುಗಡೆಗೊಳಿಸಿದರು. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರು ಆದ ಶ್ರೀ ಎಸ್.ಎಸ್. ಕೆಳದಿಮಠ ಇವರು ರಾಜ್ಯ ವಾರ್ಷಿಕ ಯೋಜನಾ ಪುಸ್ತಕ–2023 ಬಿಡುಗಡೆಗೊಳಿಸಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಸಹ ಭಾಗವಹಿಸಿದರು.



## ಹಾಸನ

ಅರಕಲಗೂಡು ತಾಲ್ಲೂಕು ಸ್ಥಳೀಯ ಸಂಸ್ಥೆ ಬಿ.ಎಂ. ಶೆಟ್ಟಿ ಪ್ರಥಮ ದರ್ಜೆ ಕಾಲೇಜಿನ ರೋವರ್–ರೇಂಜರ್ ಘಟಕದ ವತಿಯಿಂದ ರಕ್ತದಾನ ಶಿಬಿರವನ್ನು ಜುಲೈ 01 ರಂದು ಕಾಲೇಜಿನಲ್ಲಿ ಅಯೋಜನೆ ಮಾಡಿದರು. ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರು ಹಾಗೂ ರೋವರ್ ಸ್ಕೌಟ್ ಲೀಡರ್ ಶ್ರೀ ಸತ್ಯನಾರಾಯಣರವರು ಉಪಸ್ಥಿತರಿದ್ದರು.



* ಕರ್ನಾಟಕ ಸರಕಾರದ ಮಾಜಿ ಗೃಹ ಸಚಿವರು, ಉನ್ನತ ಶಿಕ್ಷಣ ಸಚಿವರಾದ ದಿ|| ಡಾ. ವಿ.ಎಸ್. ಆಚಾರ್ಯರವರ 84ನೇ ಹುಟ್ಟುಹಬ್ಬವನ್ನು ಜುಲೈ 06 ರಂದು ಹಾಸನ ಜಿಲ್ಲಾ ಸಂಸ್ಥೆಯ ಆವರಣದಲ್ಲಿ ಹೂ ಗಿಡಗಳನ್ನು ನೆಡುವುದರ ಮೂಲಕ ಆಚರಿಸಲಾಯಿತು. ಈ ಸಂಧರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರು



ಡಾ|| ವೈ.ಎಸ್. ವೀರಭದ್ರಪ್ಪ, ಜಿಲ್ಲಾ ಆಯುಕ್ತರು (ಗೈಡ್), ಶ್ರೀಮತಿ ಎಂ.ಬಿ. ಗಿರಿಜಾಂಬಿಕ, ಎ.ಎಸ್.ಓ.ಸಿ. ಶ್ರೀಮತಿ ಪ್ರಿಯಾಂಕ, ಹಾಸನ ತಾಲ್ಲೂಕು ಕಾರ್ಯದರ್ಶಿ ಶ್ರೀಮತಿ ಬಿ.ಎ. ವನಜಾಕ್ಷಿ, ತಾಲ್ಲೂಕು ಖಜಾಂಚಿ ಚಿತ್ರಗುಣೆ, ಶ್ರೀಮತಿ ಧನಲಕ್ಷ್ಮಿ ಹಾಗೂ ಶ್ರೀಮತಿ ಸೆಂಟ್ ಫಿಲೋಮಿನ ಶಾಲೆಯ ಗೈಡ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

* ಅರಕಲಗೂಡು ತಾಲ್ಲೂಕಿನ ಕಿತ್ತೂರು ರಾಣಿಚೆನ್ನಮ್ಮ ಗೈಡ್ ಕಂಪನಿ ವತಿಯಿಂದ ಒಂದು ದಿನದ ಪಯೋನರಿಂಗ್ ತರಬೇತಿ ಶಿಬಿರ ಆಯೋಜಿಸಲಾಗಿತ್ತು ಈ ಸಂದರ್ಭದಲ್ಲಿ ಗೈಡ್ ಶಿಕ್ಷಕಿ ಉಪಸ್ಥತರಿದ್ದು ಮಾಹಿತಿಯನ್ನು ನೀಡಿರುತ್ತಾರೆ.

* ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲಾ ವಿಭಾಗ) ಗಂಡಸಿ, ಅರಸೀಕೆರೆ ತಾಲ್ಲೂಕು ಸ್ನೇಹ ಗೈಡ್ ಕಂಪನಿಯ ವಿದ್ಯಾರ್ಥಿಗಳಿಗೆ 2 ದಿನಗಳ ಪುರ್ನಶ್ಚೇತನ ಕಾರ್ಯಕ್ರಮಗಳನ್ನು ಮಾಡಿರುತ್ತಾರೆ. ಶಿಬಿರದ ಉಸ್ತುವಾರಿಯನ್ನು ಗೈಡ್ ಶಿಕ್ಷಕಿ ಶ್ರೀಮತಿ ಕಾಮೇಶ್ವರಿ ಭಟ್‌ರವರು ನಿರ್ವಹಿಸಿರುತ್ತಾರೆ.




* ಜುಲೈ 01 ರಂದು ಸರ್ಕಾರಿ ವಿಜ್ಞಾನ ಕಾಲೇಜು ಹಾಸನ ತಾಲ್ಲೂಕಿನ ರೋವರ್ಸ್ ವಿದ್ಯಾರ್ಥಿಗಳ ಸೈಕಲ್ ಜಾಥ ಕಾರ್ಯಕ್ರಮವನ್ನು ಆಯೋಜನೆ ಮಾಡಿದ್ದರು. ಕಾರ್ಯಕ್ರಮಕ್ಕೆ ಕಾಲೇಜು ಪ್ರಾಂಶುಪಾಲರು ಪುಟ್ಟಸ್ವಾಮಿರವರು ಚಾಲನೆ ನೀಡಿದರು. ಈ ಸಂಧರ್ಭದಲ್ಲಿ ರೋವರ್ ಸ್ಕೌಟ್ ಲೀಡರ್ ಶ್ರೀ ಖಾಲಿಲ್ ಅಹಮದ್ ಕಾರ್ಯಕ್ರಮವನ್ನು ಸಂಘಟಿಸಿದರು.

## ಕಾರವಾರ (ಉ.ಕ.)

ಜುಲೈ 22 ರಂದು ಹೊನ್ನಾವರದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಹೊಸಪಟ್ಟಣದ ಕಬ್, ಬುಲ್–ಬುಲ್ ವಿದ್ಯಾರ್ಥಿಗಳು ಮತ್ತು ಕಬ್ ಮಾಸ್ಟರ್ ಶ್ರೀ ಮಂಜುನಾಥ್ ಎನ್. ಗೌಡರವರು, ಮುಖ್ಯ ಅಧ್ಯಾಪಕರು ಮತ್ತು ಎಸ್.ಡಿ.ಎಂ.ಸಿ. ಅಧ್ಯಕ್ಷರು "ಕೃಷಿ ಕಡೆಗೆ ಸ್ಕೌಟ್ ಗೈಡ್ಸ್ ನಡಿಗೆ" ಬತ್ತದ ಸಸಿ ನಾಟಿ ಕಾರ್ಯದಲ್ಲಿ ತೊಡಗಿಸಿಕೊಂಡರು.



* ಜುಲೈ 23 ರಂದು ಕುಮಟಾದಲ್ಲಿ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಕೆ.ಪಿ. ಭಂಡಾರಿ ಹಾಗೂ ಶ್ರೀಮತಿ ಬೇಬಿ ಪಡಿಯಾರ್ ಇವರ ಮಾರ್ಗದರ್ಶನದಲ್ಲಿ ಪೋಷಕರ ದಿನಾಚರಣೆ ಅಂಗವಾಗಿ ಸ್ಕೌಟ್–ಗೈಡ್ ವಿದ್ಯಾರ್ಥಿಗಳು ತಮ್ಮ ತಮ್ಮ ಪೋಷಕರನ್ನು ಗೌರವಿಸಿ ನಮಸ್ಕರಿಸಿ ಪೋಷಕರ ದಿನಾಚರಣೆ ಆಚರಿಸಿದರು. ಜಿಲ್ಲೆಯ ಎಲ್ಲ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಪೋಷಕರ ದಿನಾಚರಣೆ ನಡೆಸಲಾಯಿತು.

* ಜುಲೈ 31 ರಂದು ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ಉಪಾಧ್ಯಕ್ಷರುಗಳ ನೇತೃತ್ವದಲ್ಲಿ 5 ತಾಲ್ಲೂಕುಗಳ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು, ಪದಾಧಿಕಾರಿಗಳು ಕಾರವಾರ ಜಿಲ್ಲಾ ಕಟ್ಟಡದ ಜಾಗ ಮತ್ತು ಜಿಲ್ಲಾ ತರಬೇತಿ ಕೇಂದ್ರ ಮೂಡಿಗೆರೆ ಕಾರವಾರದ ಜಾಗದ ವೀಕ್ಷಣೆ ಮಾಡಿದರು.

* ಆಗಸ್ಟ್ 01 ರಂದು ಎಂ.ಪಿ.ಇ. ಸೊಸೈಟಿ ಸೆಂಟ್ರಲ್ ಸ್ಕೂಲ್‌ನಲ್ಲಿ ಸ್ಕೌಟ್ ಮಾಸ್ಟರ್ ಸುಜಯ್ ಭಟ್ ಇವರ ಮಾರ್ಗದರ್ಶನದಲ್ಲಿ ಸನ್ ರೈಸ್ ಡೇ ಮತ್ತು ಸ್ಕಾರ್ಫ್ ಡೇ ಆಚರಿಸಲಾಯಿತು. ಸ್ಕೌಟ್ ವಿದ್ಯಾರ್ಥಿಗಳು ಎಂ.ಪಿ.ಇ. ಸೊಸೈಟಿಯ ಸಿ.ಇ.ಓ. ಶ್ರೀ ಕಿರಣ್ ಕುಡತಲಕರ್, ಪ್ರಾಚಾರ್ಯರಾದ ಶ್ರೀಮತಿ ಕಾಂತಿ ಭಟ್ ಮತ್ತು ಶಿಕ್ಷಕ ವೃಂದದವರಿಗೆ ಸ್ಕಾರ್ಫ್ ಹಾಕುವ ಮೂಲಕ ಸ್ಕೌಟ್ ಮತ್ತು ಗೈಡ್ಸ್ ಸಂಸ್ಥೆಗೆ ಆಹ್ವಾನಿಸಲಾಯಿತು.

* ಆಗಸ್ಟ್ 01 ರಂದು ಶ್ರೀ ಕಾತ್ಯಾಯನಿ ಪ್ರೌಢಶಾಲೆಯಲ್ಲಿ ಸನ್ ರೈಸ್ ಡೇ (ಸ್ಕಾರ್ಫ್ ಡೇ) ಕಾರ್ಯಕ್ರಮ ಆಚರಿಸಲಾಯಿತು. ಸ್ಕೌಟ್ ಶಿಕ್ಷಕರಾದ ವಿನಾಯಕ ನಾಯಕರವರು ಮುಖ್ಯೋಧ್ಯಾಪಕರಿಗೆ ಹಾಗೂ ಸಹ ಶಿಕ್ಷಕರಿಗೆ ಸ್ಕಾಫ್ ಅನ್ನು ಧಾರಣೆ ಮಾಡಿದರು.

* ಆಗಸ್ಟ್ 01 ರಂದು ಕುಮಟಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ವ್ಯವಸ್ಥಾಪಕ ಸೂಪರಿಡೆಂಟ್ ಸಮನ್ವಯ ಅಧಿಕಾರಿ ಶ್ರೀಮತಿ ರೇಖಾ ನಾಯಕ್ ಅಂಕೋಲದ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಮಾನ್ಯ ಶ್ರೀ ಸುಮಂಗಲ ಲಕ್ಷ್ಮೀ ಪಾಟೀಲ್ ಇವರಿಗೆ ಸ್ಕಾರ್ಫ್ ಧಾರಣೆ ಮಾಡಿ 1907 ಆಗಸ್ಟ್ ಒಂದರಿಂದ ಪ್ರಾರಂಭವಾದ ಇತಿಹಾಸವನ್ನು ತಿಳಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಕುಮಟಾ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಕೆ.ಪಿ. ಭಂಡಾರಿ ಕುಬಾಲ್ ಸ್ಕೌಟ್ ಮಾಸ್ಟರ್ ಶ್ರೀ ನಾಗರಾಜು ನಾಯಕ್, ಕೋಶಾಧಿಕಾರಿ ಸ್ಥಳೀಯ ಸಂಸ್ಥೆ ಸಹಕರಿಸಿದರು.

* ಆಗಸ್ಟ್ 01 ರಂದು ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆ ವನ್ನಳ್ಳಿಯಲ್ಲಿ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕಲಭಾಗ ಕುಮಟಾ ಹಾಗೂ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಅಘನಾಶಿನಿ ಕೆಳಗಿನ ಕೇರಿಯಲ್ಲಿ ಸ್ಕಾರ್ಫ್ ಡೇ ಆಚರಿಸಲಾಯಿತು.



* ಆಗಸ್ಟ್ 06 ರಂದು ಕಾರವಾರ ಜಿಲ್ಲಾ ಸಂಸ್ಥೆಯ ವತಿಯಿಂದ ಕುಮಟಾ ಬಾಡ ದಲ್ಲಿ ಸ್ಕೌಟ್ಸ ಮತ್ತು ಗೈಡ್ ಮಕ್ಕಳಿಗೆ ಕೃಷಿ ಬಗ್ಗೆ ತರಬೇತಿ ನೀಡುವ ಉದ್ದೇಶದಿಂದ ಗದ್ದೆ ನಾಟಿ ಮಾಡುವ ಬಗ್ಗೆ ತಿಳಿಸಿಕೊಡಲಾಯಿತು. ಈ ಸಂದರ್ಭದಲ್ಲಿ ಉಪ ಆಯುಕ್ತ ಶ್ರೀ ಬಾಬು ನಾಯ್ಕ ಬಾಡ ಅವರು ಮಾತನಾಡಿದರು. ನಂತರ ತಾಲ್ಲೂಕಿನ ಕಾರ್ಯದರ್ಶಿ ಶ್ರೀ ಕೆ.ಪಿ. ಭಂಡಾರಿ ಅವರು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಸ್ಥಳೀಯರಾದ ಶ್ರೀ ನಾಗರಾಜ ಮಡಿವಾಳ, ಶ್ರೀ ರಾಘು ಮಡಿವಾಳ, ಶ್ರೀ ಗಿಂಡಿ ದೇವರ ಅರ್ಚಕ, ಶ್ರೀ ರಾಮು ಮಡಿವಾಳ, ಶ್ರೀ ಹೊಸ್ಬು ಗೌಡ ಅಘನಾಶಿನಿ, ಕುಮಾರಿ ಕವನಾ, ಶ್ರೀ ಸೋಮನಾಥ ಗೌಡ ಇದ್ದರು.



* ಆಗಸ್ಟ್ 9 ರಂದು ಬುಡಕಟ್ಟು ಜನಾಂಗದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕುಮಟಾ ಅಘನಾಶಿನಿ ಕೆಳಗಿನಕೇರಿ ಶಾಲೆಯ ಕಬ್–ಸ್ಕೌಟ್ಸ್ ಮಕ್ಕಳು ಭಾಗವಹಿಸಿದ್ದರು.

* ಆಗಸ್ಟ್ 9 ರಂದು ಹೊನ್ನಾವರದ ಎಂ.ಪಿ.ಇ. ಸೊಸೈಟಿಯ ಸೆಂಟ್ರಲ್ ಶಾಲೆಯಲ್ಲಿ ಗೈಡ್ಸ್ ವಿದ್ಯಾರ್ಥಿಗಳಿಂದ ವಿಶ್ವ ಬುಡಕಟ್ಟು ದಿನಾಚರಣೆಯನ್ನು ಆಚರಿಸಲಾಯಿತು. ಗೈಡ್ ಕುಮಾರಿ ಅಮೃತಾ ನಾಯ್ಕ ವಿಶ್ವ ಬುಡಕಟ್ಟು ದಿನಾಚರಣೆ ಮಹತ್ವದ ಬಗ್ಗೆ ಮಾಹಿತಿ ನೀಡಿದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಶಾರದಾ ಭಟ್ ಈ

ಸಂದರ್ಭದಲ್ಲಿ ವಿಶ್ವ ಬುಡಕಟ್ಟು ದಿನಾಚರಣೆ ಬಗ್ಗೆ ಪ್ರಾಸ್ತಾವಿಕ ನುಡಿಗಳನ್ನು ಆಡಿ ಶಾಲಾ ಹಂತದಲ್ಲಿ ಆಚರಣೆ ನಡೆಸುತ್ತಿರುವದು ನಿಜವಾಗಿ ಹೆಮ್ಮೆ ಪಡುವ ವಿಚಾರವಾಗಿದೆ ಎಂದರು. ಗೈಡ್ಸ್ ಕು॥ ಹೇಮಾ, ಕು॥ ಸಿಂಚನ, ಕು॥ ದಿಯಾ, ಕು॥ ಸೃಷ್ಟಿ ಭಾಷಣದ ಮೂಲಕ ವಿಶ್ವ ಬುಡಕಟ್ಟು ದಿನಾಚರಣೆ ಬಗ್ಗೆ ಹೆಚ್ಚಿನ ಮಾಹಿತಿ ಒದಗಿಸಿದರು. ಗೈಡ್ ಕ್ಯಾಪ್ಟನ್ ಶ್ರೀಮತಿ ವನಿತಾ ನಾಯ್ಕ ಮಾರ್ಗದರ್ಶನದಲ್ಲಿ ಗೈಡ್ ಶ್ರೀನಿಧಿ ನಾಯ್ಕ ಕಾರ್ಯಕ್ರಮದ ನಿರೂಪಣೆ ನಡೆಸಿದರು. ವಿದ್ಯಾರ್ಥಿಗಳು, ಶಿಕ್ಷಕ-ಶಿಕ್ಷಕಿಯರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಶಾಲೆಯ ಗ್ರಂಥಾಲಯದ ಸ್ವಚ್ಛತಾ ಕಾರ್ಯ ಹಾಗೂ ಮಧ್ಯಾಹ್ನ ಊಟದ ವಿತರಣಾ ಸಮಯದಲ್ಲಿ ಸ್ವಯಂ ಸೇವಾ ಕಾರ್ಯದಲ್ಲಿ ಪಾಲ್ಗೊಂಡರು.

* ಅಗಸ್ಟ್ 10 ರಂದು ಕುಮಟಾದ ಹೊಲನಗದ್ದೆಯ ಶ್ರೀ ರಾಮಾಂಜನೇಯ ದೇವಸ್ಥಾನಕ್ಕೆ ಹೋಗುವ ಕಾಂಕ್ರೀಟ್ ರಸ್ತೆ ಮತ್ತು ಕಡ್ಲೆ ಮೈದಾನವನ್ನು ಅಘನಾಶಿನಿ ಶಾಲೆಯ ಸ್ಕೌಟ್-ಗೈಡ್ ವಿದ್ಯಾರ್ಥಿಗಳು ಸಮಾಜ ಸೇವಕರು ಹಾಗೂ ಉದ್ಯಮಿಗಳು ಆದ ಎ.ಡಿ.ಸಿ. ಶ್ರೀ ಬಾಬು ನಾಯ್ಕ ಇವರ ಮಾರ್ಗದರ್ಶನದಲ್ಲಿ ಶ್ರಮದಾನದ ಮೂಲಕ ಸ್ವಚ್ಛಗೊಳಿಸಿದರು. ಕುಮಟಾ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಕೆ.ಪಿ. ಭಂಡಾರಿ ಹಾಗೂ ಸ್ಥಳೀಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕಾರ್ಯಕ್ರಮ ನಡೆಸಿದರು.

* ಆಗಸ್ಟ್ 11 ರಂದು ವ್ಯಸನ ಮುಕ್ತ ದಿನಾಚರಣೆ ಹಾಗೂ ಶ್ರೀ ಶ್ರೀ ಶ್ರೀ ಮ.ನಿ.ಪ್ರ. ಡಾಕ್ಟರ್ ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆಯನ್ನು ಹೊನ್ನಾವರದ ಓ.ಇ.ಖ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಸ್ಕೌಟ್ ಮಾಸ್ಟರ್ ಶ್ರೀ ಯಶವಂತ ಮೇಸ್ತ ಇವರ ಮಾರ್ಗದರ್ಶನದಲ್ಲಿ ಆಚರಿಸಿದರು.

* ಆಗಸ್ಟ್ 11 ರಂದು ವಿಶ್ವ ಬುಡಕಟ್ಟು ದಿನಾಚರಣೆ ಅಂಗವಾಗಿ ಹೊನ್ನಾವರದ ಎಂ.ಪಿ.ಇ. ಸೊಸೈಟಿಯ ಸೆಂಟ್ರಲ್ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಬುಡಕಟ್ಟು ಜನಾಂಗದ ಬಗ್ಗೆ ಮಾಹಿತಿ ನೀಡುವ ವಸ್ತು ಪ್ರದರ್ಶನ ಸ್ಪರ್ಧೆ ಏರ್ಪಡಿಸಲಾಗಿತ್ತು. ಪ್ರಾಂಶುಪಾಲರು ಶ್ರೀಮತಿ ಕಾಂತಿ ಭಟ್, ವಸ್ತು ಪ್ರದರ್ಶನ ವೀಕ್ಷಿಸಿ ಮಾರ್ಗದರ್ಶನ ನೀಡಿದರು. ಗೈಡ್ ಕ್ಯಾಪ್ಟನ್ ಶ್ರೀಮತಿ ವನಿತಾ ನಾಯ್ಕ, ಸ್ಕೌಟ್ ಮಾಸ್ಟರ್ ಶ್ರೀ ಸುಜಯ್ ಭಟ್ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

* ಆಗಸ್ಟ್ 12 ರಂದು ಹೊನ್ನಾವರದ ಎಂ.ಪಿ.ಇ ಸೊಸೈಟಿಯ ಸೆಂಟ್ರಲ್ ಶಾಲೆಯಲ್ಲಿ ನಶಾ ಮುಕ್ತ ಭಾರತ್ (ವ್ಯಸನ ಮುಕ್ತ ಭಾರತ) ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳಿಗೆ ನಶೆಯುಕ್ತ ಪದಾರ್ಥಗಳನ್ನು ಸೇವಿಸುವುದರಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಮಾಹಿತಿಯನ್ನು ನೀಡುವ ನಶಾ ಮುಕ್ತ ಭಾರತ್ ಕ್ಯಾಂಪೇನ್ ಸ್ಪರ್ಧೆ ಏರ್ಪಡಿಸಲಾಗಿತ್ತು. ವಿದ್ಯಾರ್ಥಿಗಳು ಡ್ರಗ್ಸ್ ಸೇವನೆ ಮಾಡುವುದರಿಂದ ವ್ಯಕ್ತಿಯ ಮೇಲೆ, ಪರಿವಾರ ಹಾಗೂ ಸಮಾಜದ ಮೇಲೆ ಬೀರುವ ಪರಿಣಾಮಗಳ ಕುರಿತು ಕಿರು ನಾಟಕದ ಮೂಲಕ ಪ್ರಸ್ತುತ ಪಡಿಸಿದರು.

* ಅಗಸ್ಟ್ 13 ರಂದು ಮೀನುಗಾರಿಕೆ ತರಬೇತಿ ಶಿಬಿರವನ್ನು ಕುಮಟ ತಾಲ್ಲೂಕಿನ ಅಘನಾಶಿನಿಯಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಕುಮಟಾ ತಾಲ್ಲೂಕಿನ ಕಾರ್ಯದರ್ಶಿಯಾದ ಶ್ರೀ ಕೆ.ಪಿ. ಭಂಡಾರಿ, ಮತ್ತು ಜಿಲ್ಲಾ ಗೈಡ್ ತರಬೇತಿ ಆಯುಕ್ತೆ ಶ್ರೀಮತಿ ಬೇಬಿ ಪಡಿಯಾರ್ ಅಲ್ಲಿಯ ಮುಖ್ಯಸ್ಥರು ಮತ್ತು ಸದಸ್ಯರು ಪಾಲ್ಗೊಂಡಿದ್ದರು. ಅಲ್ಲಿಯ



ಮೀನುಗಾರರು ಉತ್ತಮ ರೀತಿಯಲ್ಲಿ ಮೀನುಗಳನ್ನು ಹಿಡಿಯುವ ತರಬೇತಿಯನ್ನು ನೀಡಿದ್ದರು. ಉಪಾಹಾರದ ನಂತರ ತೆಂಗಿನ ಗರಿಯಿಂದ ಕರಕುಶಲ ವಸ್ತುವನ್ನು ತಯಾರಿಸುವ ಕಾರ್ಯಕ್ರಮ ನಡೆಯಿತು.

* ಕಾರವಾರ ಜಿಲ್ಲೆ ಜಿಲ್ಲಾಡಳಿತ ನಡೆಸಿದ 77ನೇ ಸ್ವಾತಂತ್ರ್ಯ ದಿನಾಚರಣೆ ಪಥಸಂಚಲನ ಕಾರ್ಯಕ್ರಮದಲ್ಲಿ ಶ್ರೀ ಮಂಕಾಳ್ ಎಸ್. ವೈದ್ಯ, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಬಂದರು ಮೀನುಗಾರಿಕೆ ಜಲ ಸಾರಿಗೆ ಸಚಿವರು ಕರ್ನಾಟಕ ಸರ್ಕಾರ, ಶ್ರೀ ಸತೀಶ್ ಸೈಲ್, ಶಾಸಕರು ಅಂಕೋಲಾ-ಕಾರವಾರ, ಶ್ರೀ ಗಣಪತಿ ಉಳುವೇಕರ್, ಎಂ.ಎಲ್.ಸಿ, ಮಾನ್ಯ ಜಿಲ್ಲಾಧಿಕಾರಿಗಳು, ಶ್ರೀ ಅಶೋಕ ಕಾಂದು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು, ಶ್ರೀ ವಿಷ್ಣುವರ್ಧನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಶ್ರೀ ರಾಜು .ಕೆ ಮೊಗವೀರ್, ಜಿಲ್ಲಾ ಸಹಾಯಕ ಆಯುಕ್ತರು ನಗರಸಭಾ ಅಧ್ಯಕ್ಷರು ಹಾಗೂ ಜನಪ್ರತಿನಿಧಿಗಳು, ಇತರೆ ಇಲಾಖೆಗಳ ಅಧಿಕಾರಿ ವರ್ಗದವರು ಪಾಲ್ಗೊಂಡಿದ್ದರು. ಈ ಕಾರ್ಯಕ್ರಮದಲ್ಲಿ ಸೇಂಟ್ ಜೋಸೆಫ್ ಶಾಲೆಯ ಸ್ಕೌಟ್ ವಿದ್ಯಾರ್ಥಿಗಳು ದ್ವಿತೀಯ ಸ್ಥಾನವನ್ನು ಪಡೆದಿದ್ದು ಹಾಗೂ ಬಾಲ ಮಂದಿರ ಶಾಲೆಯ ಸ್ಕೌಟ್ ವಿದ್ಯಾರ್ಥಿಗಳು ಬಹುಮಾನವನ್ನು ಪಡೆದಿರುತ್ತಾರೆ. ಸೇಂಟ್ ಜೋಸೆಫ್ ಶಾಲೆಯ ಗೈಡ್ ವಿದ್ಯಾರ್ಥಿಗಳು ತೃತೀಯ ಸ್ಥಾನವನ್ನು ಪಡೆದಿರುತ್ತಾರೆ.

## ಕೊಡಗು

ಮಡಿಕೇರಿ ನಗರದ ಕೇಂದ್ರ ಸ್ಥಾನದಲ್ಲಿರುವ "ಯುದ್ಧ ಸ್ಮಾರಕದಲ್ಲಿ" ನಡೆಸಲಾಯಿತು. ಮೊದಲಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸರ್ವರನ್ನು ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಜಿಮ್ಮಿ ಸಿಕ್ವೇರಾರವರು ಆತ್ಮೀಯವಾಗಿ ಸ್ವಾಗತಿಸಿದರು. ನಂತರ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಕೊಡಗು ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರು ಆಗಿರುವ ಶ್ರೀ ವೇದಮೂರ್ತಿ, ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯೂ, ಹಾಗೂ ಮೇಜರ್ ಶ್ರೀ ಓ.ಎಸ್. ಚಿಂಗಪ್ಪನವರು



ಜೊತೆಗೂಡಿ, “ಯುದ್ಧ ಸ್ಮಾರಕಕ್ಕೆ” ಹೂಗುಚ್ಛ ಅರ್ಪಿಸಿದರು. ನಂತರ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರನ್ನು ಕುರಿತು ಮೇಜರ್ ಶ್ರೀ ಓ.ಎಸ್. ಚಿಂಗಪ್ಪನವರು, “ಕಾರ್ಗಿಲ್ ವಿಜಯೋತ್ಸವದ” ಬಗ್ಗೆ ಮಾತನಾಡಿದರು ಕಾರ್ಯಕ್ರಮದಲ್ಲಿ ಮಡಿಕೇರಿ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ಮಂಜುನಾಥ್, ರಾಜ್ಯ ಸರಕಾರಿ ನೌಕರರ ಸಂಘದ ಅಧ್ಯಕ್ಷರಾದ ಶ್ರೀ ಶ್ರೀನಿವಾಸ್, ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪಯೋಜನ ಸಮನ್ವಯ ಅಧಿಕಾರಿ ಶ್ರೀ ಕೃಷ್ಣಪ್ಪರವರು ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್, ಉಪನ್ಯಾಸಕರುಗಳು ಉಪಸ್ಥಿತರಿದ್ದರು.

* ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಸ.ಹಿ.ಪ್ರಾ. ಶಾಲೆ ಕುಟ್ಟ ಇವರ ಸಹಯೋಗದಲ್ಲಿ ಆಗಸ್ಟ್ 09 ರಂದು ವಿಶ್ವ ಬುಡಕಟ್ಟು ದಿನಾಚರಣೆಯನ್ನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕುಟ್ಟದಲ್ಲಿ ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸ.ಹಿ.ಪ್ರಾ. ಶಾಲೆ ಕುಟ್ಟ ಇದರ ಮುಖ್ಯೋಪಾಧ್ಯಾಯರಾದ ಶ್ರೀಮತಿ ಶಕುಂತಲ ಅವರು ವಹಿಸಿಕೊಂಡು ಸರ್ವರನ್ನೂ ಸ್ವಾಗತಿಸಿದರು. ನಂತರ ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಸಂಘಟಕರಾದ ಶ್ರೀಮತಿ ದಮಯಂತಿ ಅವರು “ವಿಶ್ವ ಬುಡಕಟ್ಟು ದಿನಾಚರಣೆಗೆ ಎಲ್ಲಾ ದಿನಾಚರಣೆಗಳಂತೆ ಪ್ರತೀವರ್ಷ ಆಚರಿಸಲು ಆಗಸ್ಟ್ 9 ರಂದು ನಿಗದಿ ಮಾಡಿರುವುದು ಸ್ವಾಗತಾರ್ಹ ಮತ್ತು ಎಲ್ಲಾ ಬುಡಕಟ್ಟು ಮಕ್ಕಳು ಉತ್ತಮ ಶಿಕ್ಷಣ ಪಡೆಯುವುದರ ಮೂಲಕ ಮುಖ್ಯ ವಾಹಿನಿಗೆ ಬರಬೇಕೆಂದು” ಹಾರೈಸಿದರು. ನಂತರ ಶಿಕ್ಷಕಿ ಶ್ರೀಮತಿ ಸನಿತರವರು ಬುಡ ಕಟ್ಟುಜನಾಂಗದ ಆಚಾರ–ವಿಚಾರ, ಸಂಸ್ಕೃತಿ ಬಗ್ಗೆ ಮಾತನಾಡಿದರು.



ಗಿಡಕ್ಕೆ ನೀರು ಹಾಕುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಗೈಡ್ ಆಯುಕ್ತರಾದ ಪದ್ಮಶ್ರೀ ಪ್ರಶಸ್ತಿ ವಿಜೇತೆ ಶ್ರೀಮತಿ ಐ. ಮುಡಿಯಂಡರಾಣಿ ಮಾಚಯ್ಯ ಅವರು “ಮಕ್ಕಳು ಶಾಲೆಗಳಲ್ಲಿ ಕಲಿಕೆಗೆ ಮಾತ್ರ ಒತ್ತು ಕೊಡಬೇಕು, ತಂದೆ–ತಾಯಿಗಳಂತೆ ನೀವು ಕೂಲಿ ಕಾರ್ಮಿಕರಾಗದೆ ಸಮಾಜದಲ್ಲಿ ಮುಂದೆ ಬರಬೇಕು ಮತ್ತು ತಮ್ಮ ಜಾನಪದ ಕಲೆಯನ್ನು ಎಲ್ಲರೂ ಕಲಿತು ಅದನ್ನು ಎಲ್ಲೆಡೆ ಪ್ರದರ್ಶನಗಿಳಿಸಿ ಪ್ರಪಂಚಾದ್ಯಂತ ಹರಡಬೇಕು” ಎಂದು ಶುಭ ನುಡಿದರು. ನಂತರ ಮಾತನಾಡಿದ ಜಿಲ್ಲಾ ಖಜಾಂಚಿ ಶ್ರೀಮತಿ ಪುಷ್ಪವೇಣಿ ಅವರು “ವಿಶ್ವದಾದ್ಯಂತ ಅಲ್ಲಲ್ಲಿ ಬುಡಕಟ್ಟು ಜನಾಂಗದವರಿದ್ದಾರೆ. ಅವರು ಶ್ರೀಮಂತವಾದ ಆಚಾರ–ವಿಚಾರ, ಸಂಸ್ಕೃತಿಗಳನ್ನು ಹೊಂದಿರುತ್ತಾರೆ, ಇವರ ಪರಿಚಯ ಇಡೀ ವಿಶ್ವಕ್ಕೆ ಸಾರಬೇಕಾಗಿದೆ” ಎಂದರು. ಇದೇ ಸಂದರ್ಭದಲ್ಲಿ ಮಾತನಾಡಿದ ಮಡಿಕೇರಿ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಹಾಗೂ ಪತ್ರಕರ್ತ ಶ್ರೀ ಅಜ್ಜ ಮಕ್ಕಡ ವಿನುಕುಮಾರ್ಮಾತ “ನಾವು ಬಡವರಾಗಿ ಹುಟ್ಟುವುದು ತಪ್ಪಲ್ಲ ನಾವು ಉತ್ತಮ ಶಿಕ್ಷಣ ಪಡೆಯದೆ ಉದ್ಯೋಗವಂಚಿತರಾಗಿ ಬಡವನಾಗಿ ಸಾಯಬಾರದು” ಎಂದರು. ಕಿವಿ ಮಾತು ಹೇಳಿದರು. ಈ ಸಂದರ್ಭದಲ್ಲಿ ಪದ್ಮಶ್ರೀ ಪ್ರಶಸ್ತಿ ವಿಜೇತೆ ಐಮುಡಿಯಂಡ ರಾಣಿಮಾಚಯ್ಯ ಅವರನ್ನು ಸನ್ಮಾನಿಸಿದರು. ಇದೇ ಸಂದರ್ಭದಲ್ಲಿ ಬೇಸಿಗೆ ಶಿಬಿರದ ವಿದ್ಯಾರ್ಥಿಗಳೀಗೆ ಸ್ಕಾರ್ಫ್, ಓಗಲ್, ಮತ್ತು ಪ್ರಶಸ್ತಿ ಪತ್ರವನ್ನು ಭಾಗವಹಿಸಿದ ಎಲ್ಲಾ ಮಕ್ಕಳಿಗೂ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಶ್ರೀ ಸಿ.ಆರ್. ಮುರುಗನ್, ಪೊನ್ನಂಪೇಟೆ ಸ್ಥಳೀಯ ಸಂಸ್ಥೆಯ ಖಜಾಂಚಿ ಮುತ್ತಮ್ಮ, ಶಾಲಾ ಎಸ್.ಡಿ.ಎಂ.ಸಿ. ಸದಸ್ಯರು, ಶಾಲಾ ಶಿಕ್ಷಕರು, ಹಾಗೂ ಪೋಷಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದರು. ನಂತರ ಗೈಡ್ಸ್ ವಿಭಾಗದ ಜಿಲ್ಲಾ ಸಹಾಯಕ ತರಬೇತಿ ಆಯುಕ್ತರಾದ ಶ್ರೀಮತಿ ಅಲಿಮ ಅವರು ಕಾರ್ಯಕ್ರಮ ನಿರೂಪಿಸಿ ಸರ್ವರನ್ನು ವಂದಿಸಿದರು.

* ಜಿಲ್ಲಾಡಳಿತದ ವತಿಯಿಂದ ನಡೆದ 77ನೇ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಪಥಸಂಚಲನದಲ್ಲಿ ಭಾಗವಹಿಸಿದ ಸಂತಜೋಸೆಫರ ಶಾಲೆಯ ಗೈಡ್ಸ್ ವಿದ್ಯಾರ್ಥಿಗಳು ದ್ವಿತೀಯ ಸ್ಥಾನವನ್ನು, ಸಂತ ಮೈಕಲರ ಶಾಲೆಯ ಗೈಡ್ಸ್ ವಿದ್ಯಾರ್ಥಿಗಳು ತೃತಿಯ ಸ್ಥಾನವನ್ನು ಪಡೆದಿರುತ್ತಾರೆ. ಈ ಸಂದರ್ಭದಲ್ಲಿ ಸ್ಕೌಟ್–ಗೈಡ್‌ನಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಮೈಥಿಲಿ ರಾವ್ ಎಚ್., ಶ್ರೀಮತಿ ಅಲಿಮಾ ಪಿ.ಹೆಚ್., ಶ್ರೀಮತಿ ವಾಮನ ರಾವ್ ಇವರನ್ನು ಜಿಲ್ಲಾಡಳಿತದ ವತಿಯಿಂದ ಸನ್ಮಾನಿಸಲಾಯಿತು. ಕೊಡಗು ಉಸ್ತುವಾರಿ ಸಚಿವರಾದ ಶ್ರೀ ಬೋಸರಾಜ್, ಸಂಸ್ಥೆಯ ಅಧ್ಯಕ್ಷರು ಜಿಲ್ಲಾಧಿಕಾರಿಗಳು ಆಗಿರುವ ಶ್ರೀ ವೆಂಕಟರಾಜ್, ಮಡಿಕೇರಿ ಕ್ಷೇತ್ರದ ಶಾಸಕರಾದ ಶ್ರೀ ಮಂತರ್ ಗೌಡ, ಕೊಡಗು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಪೋಲಿಸ್ ವರಿಷ್ಠಾಧಿಕಾರಿಗಳು ಅಲ್ಲದೆ ಅಪಾರ ಜಿಲ್ಲಾಧಿಕಾರಿಗಳು ಉಪವಿಭಾಗಾಧಿಕಾರಿಗಳು ಉಪಸ್ಥಿತರಿದ್ದರು.



* ಸಂಪಾಜೆ ಸ್ಥಳೀಯ ಸಂಸ್ಥೆಯ ವತಿಯಿಂದ “ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಕೃಷಿಯ ಕಡೆಗೆ ಎಂಬ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಧನಂಜಯ್, ಕಾರ್ಯದರ್ಶಿಯವರಾದ ಶ್ರೀಮತಿ ಉಷಾರಾಣಿ ಕೆ.ಬಿ. ಉಪಸ್ಥಿತರಿದ್ದರು. ಬಿದ್ದಟ 0ಡ. ರೋಜಿ ಚಿನ್ನಪ್ಪ ಅವರ ಗದ್ದೆಯಲ್ಲಿ ಅವರ ಧರ್ಮಪತ್ನಿಯವರು ಮಕ್ಕಳಿಗೆ ಕೃಷಿಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಪ್ರತ್ಯಕ್ಷವಾಗಿ ತೋರಿಸಿ ಕೊಟ್ಟರು. ಈ ಕಾರ್ಯಕ್ರಮದಲ್ಲಿ ಸಂಪಾಜೆ ಸ್ಥಳೀಯ ಸಂಸ್ಥೆ ಅಡಿ ಬರುವ ವಿವಿಧ ಶಾಲೆಗಳಿಂದ ಆಗಮಿಸಿದ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಶಿಕ್ಷಕರು ಭಾಗವಹಿಸಿದರು ಸುಮಾರು 150 ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಕೋಲಾರ

ಜುಲೈ 01 ರಂದು ಜಿಲ್ಲಾ ಸಂಸ್ಥೆ ಕೋಲಾರ, ಸ್ಥಳೀಯ ಸಂಸ್ಥೆ ಶ್ರೀನಿವಾಸಪುರ ಶ್ರೀ ಜಿ.ಜಿ. ವೇಣು ಸೆಂಟ್ರಲ್ ಶಾಲೆ, ಶ್ರೀನಿವಾಸಪುರ ವತಿಯಿಂದ ತಾಲ್ಲೂಕು ಸಾರ್ವಜನಿಕ ಹಾಗೂ ಆರೋಗ್ಯ ಕೇಂದ್ರದಲ್ಲಿ ವಿಶ್ವ ವೈದ್ಯರ ದಿನಾಚರಣೆ ಅಂಗವಾಗಿ ಆಸ್ಪತ್ರೆಯಲ್ಲಿರುವ ವೈದ್ಯರು ಮತ್ತು ಸಿಬ್ಬಂದಿ ವರ್ಗದವರಿಗೆ ಸ್ಕೌಟ್-ಗೈಡ್ ವಿದ್ಯಾರ್ಥಿಗಳ ಮುಖಾಂತರ ಹೂವನ್ನು ಹಾಗೂ ಸಿಹಿಯನ್ನು ನೀಡುವುದರ ಮುಖಾಂತರ ಅವರ ಸೇವೆಗೆ ಧನ್ಯವಾದಗಳು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ವೈದ್ಯರು ಮಕ್ಕಳನ್ನು ಹಾರೈಸಿದರು. ಈ ಕಾರ್ಯಕ್ರಮದಲ್ಲಿ ಸ್ಕೌಟ್ ಶಿಕ್ಷಕರಾದ ಶ್ರೀ ಕಿಫಾಯತ್, ಗೈಡ್ ಶಿಕ್ಷಕರಾದ ಶ್ರೀಮತಿ ಅನುಷಾ ಶಾಲಾ ಮೇಲ್ವಿಚಾರಕರಾದ ಶ್ರೀ ಪ್ರವೀಣ್ ಹಾಗೂ ಶ್ರೀ ಗಿರೀಶ್ ಸ್ಕೌಟ್-ಗೈಡ್ ಸ್ಥಳೀಯ ಸಂಸ್ಥೆ ಸಹ ಕಾರ್ಯದರ್ಶಿ ಶ್ರೀ ಬಿ.ಎನ್. ವಿನಯ್ ಕುಮಾರ್ ಹಾಗೂ ಶಾಲಾ ಸಿಬ್ಬಂದಿ ಅವರು ಉಪಸ್ಥಿತರಿದ್ದರು.

* ಜುಲೈ 04 ರಂದು ಸ್ಕೌಟ್ ಭವನ, ಕೋಲಾರದಲ್ಲಿ ಕೋಲಾರ ಜಿಲ್ಲಾ ಸಂಸ್ಥೆ ವತಿಯಿಂದ 2021-22ನೇ ಸಾಲಿನ ರಾಜ್ಯ ಪುರಸ್ಕಾರ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಯೋಜಿಸಲಾಗಿತ್ತು. ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ರಾಮಚಂದ್ರಪ್ಪರವರು ಕಾರ್ಯಕ್ರಮ ಉದ್ಘಾಟಿಸಿ ಪ್ರಮಾಣ ಪತ್ರಗಳನ್ನು ವಿತರಿಸಿ ಶುಭ ಹಾರೈಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆ ಜಿಲ್ಲಾ ಮುಖ್ಯ ಆಯುಕ್ತರು ಮತ್ತು ಸಹಾಯಕ ರಾಜ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು ವಹಿಸಿ ವಿದ್ಯಾರ್ಥಿಗಳು ಮತ್ತು ದಳನಾಯಕರ ಸೇವೆಯನ್ನು ಶ್ಲಾಘಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆ ಉಪಾಧ್ಯಕ್ಷರಾದ ಡಾ. ಎಂ. ಚಂದ್ರಶೇಖರ್, ಶ್ರೀಮತಿ ಕುರ್ಕಿ ರಾಜೇಶ್ವರಿ, ಜಿಲ್ಲಾ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್, ಶ್ರೀಮತಿ ಕೆ.ಆರ್. ಜಯಶ್ರೀ, ಜಿಲ್ಲಾ ಕಾರ್ಯದರ್ಶಿ ಶ್ರೀ ವಿ.ಎಂ. ನಾರಾಯಣಸ್ವಾಮಿ ಹಾಗೂ ಇತರರು ಉಪಸ್ಥಿತಿರಿದ್ದರು.



* ಜುಲೈ 06 ರಂದು ಕರ್ನಾಟಕ ಸರಕಾರದ ಮಾಜಿ ಗೃಹ ಸಚಿವರು,ಉನ್ನತ ಶಿಕ್ಷಣ ಸಚಿವರಾದ ದಿ॥ ಡಾ. ವಿ.ಎಸ್ ಆಚಾರ್ಯರವರ 84ನೇ ಹುಟ್ಟುಹಬ್ಬದ ಪ್ರಯುಕ್ತ ಕಿರಿಯ ಪ್ರಾಥಮಿಕ ಶಾಲೆ ಪಚ್ಚರಮಾಕಲ ಹಳ್ಳಿಯಲ್ಲಿ, ನಡೆದ ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕರು, ಶ್ರೀಮತಿ ಎನ್. ದೇವಿಕಾ ದೇವಿ, ಸಹ ಶಿಕ್ಷಕಿ ಶ್ರೀಮತಿ ಉಮಾದೇವಿ ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ ನಾಗರತ್ನ, ಸಹಾಯಕಿ ಶ್ರೀಮತಿ ರಮಾದೇವಿ ಹಾಗೂ ಕಬ್-ಬುಲ್‌ಬುಲ್ ಮಕ್ಕಳು ಭಾಗವಹಿಸಿದ್ದರು ನಂತರ ಶಾಲಾ ಆವರಣದ ಗಿಡಗಳ ಸ್ವಚ್ಛತೆ ಹಾಗೂ ಗಿಡಗಳನ್ನು ನೆಡುವ ಕಾರ್ಯಕ್ರಮವನ್ನು ಕೈಗೊಳ್ಳಲಾಯಿತು.

* ಜುಲೈ 06 ರಂದು ಕರ್ನಾಟಕ ಸರ್ಕಾರದ ಮಾಜಿ ಗೃಹ ಸಚಿವರು, ಉನ್ನತ ಶಿಕ್ಷಣ ಸಚಿವರಾದ ದಿ॥ ಡಾ. ವಿ.ಎಸ್ ಆಚಾರ್ಯ ರವರ 84ನೇ ಹುಟ್ಟುಹಬ್ಬದ ಪ್ರಯುಕ್ತ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಂಗಾರಪೇಟೆ ಇಲ್ಲಿ ಗಿಡಗಳನ್ನು ನಡೆಲಾಯಿತು.

* ಜುಲೈ 07 ರಿಂದ 09ರ ವರೆಗೆ 'ಜಿಲ್ಲಾ ಮಟ್ಟದ ಸ್ಕೌಟ್ಸ್-ಗೈಡ್ಸ್ ತೃತೀಯ ಸೋಪಾನ ಪರೀಕ್ಷಾ ಶಿಬಿರ ಮತ್ತು ರಾಜ್ಯ ಪುರಸ್ಕಾರ ಪೂರ್ವ ಸಿದ್ಧತಾ ಪರೀಕ್ಷಾ ಶಿಬಿರ'ವನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರ ನೇತೃತ್ವದಲ್ಲಿ ಸ್ಕೌಟ್ ಭವನ, ನಗರಸಭೆ ಆವರಣ, ಟಿ. ಚನ್ನಯ್ಯ ರಂಗ ಮಂದಿರ ಹಿಂಭಾಗ, ಕೋಲಾರ ಇಲ್ಲಿ ಆಯೋಜಿಸಲಾಯಿತು. ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು, ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಹಾಗು ಪದಾಧಿಕಾರಿಗಳು, ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಶುಭಹಾರೈಸಿದರು. ಸದರಿ ಪರೀಕ್ಷಾ ಶಿಬಿರದಲ್ಲಿ 418 ಸ್ಕೌಟ್ಸ್ - ಗೈಡ್ಸ್ ಶಿಬಿರಾರ್ಥಿಗಳು ಮತ್ತು ದಳ ನಾಯಕರು ಭಾಗವಹಿಸಿದ್ದರು.



* ಜುಲೈ 12 ರಂದು ಶ್ರೀನಿವಾಸಪುರ ಸ್ಥಳೀಯ ಸಂಸ್ಥೆಯ ವತಿಯಿಂದ. ಮಾನ್ಯ ತಹಶೀಲ್ದಾರರಾದ ಶ್ರೀ ಶರೀನ್ ತಾಜ್ ಕೆ.ಎ.ಎಸ್.ರವರಿಗೆ ರಾಜ್ಯ ಸಂಸ್ಥೆಯಿಂದ ಕಳುಹಿಸಿರುವ 2023-24ನೇ ಸಾಲಿನ ವಾರ್ಷಿಕ ಚಟುವಟಿಕೆಗಳ ಪುಸ್ತಕ ನೀಡಿ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳಿಗೆ ಸಂಪೂರ್ಣ ಸಹಕಾರ ಮಾರ್ಗದರ್ಶನ ನೀಡುವಂತೆ ಮನವಿ ಮಾಡಲಾಯಿತು. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಂಪನ್ಮೂಲಧಿಕಾರಿಗಳು, ಪುರಸಭೆ ಅಧಿಕಾರಿಗಳು ಅವರಿಗೆ ಪುಸ್ತಕ ನೀಡಿ ಸಹಕಾರ ಮಾರ್ಗದರ್ಶನ ನೀಡುವಂತೆ ಕೋರಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಸಂಘಟಕ ಶ್ರೀ ವಿಶ್ವನಾಥ ವಿ. ಕೋಲಾರ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಟಿ.ಎಂ. ರಾಮಕೃಷ್ಣೇಗೌಡ, ಖಜಾಂಚಿ ಶ್ರೀ ಜಿ.ವಿ. ಚಂದ್ರಪ್ಪ ಮುಂತಾದವರು ಉಪಸ್ಥಿತರಿದ್ದರು.

* ಜುಲೈ 13 ರಂದು ಕರ್ನಾಟಕ ಪಬ್ಲಿಕ್ ಶಾಲೆ (ಕಾಲೇಜು ವಿಭಾಗ) ಮಾಸ್ತಿ ಮಾಲೂರು ತಾಲ್ಲೂಕು ರೋವರ್ಸ್-ರೇಂಜರ್ಸ್ ಘಟಕ ಮತ್ತು ಎನ್.ಎಸ್.ಎಸ್. ಘಟಕಗಳಿಂದ ವಿಶ್ವ ಜನಸಂಖ್ಯಾ ದಿನಾಚರಣೆಯ ಅಂಗವಾಗಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

* ಜುಲೈ 14 ರಂದು ಮುಳಬಾಗಿಲು ಸ್ಥಳೀಯ ಸಂಸ್ಥೆಯ ವತಿಯಿಂದ. ತಾಲ್ಲೂಕು ದಂಡಾಧಿಕಾರಿಗಳಾದ ಶ್ರೀ ಮುನಿವೆಂಕಟಪ್ಪ ಕೆ.ಎ.ಎಸ್.ರವರಿಗೆ ರಾಜ್ಯ ಸಂಸ್ಥೆಯಿಂದ ಕಳುಹಿಸಿರುವ 2023-24ನೇ ಸಾಲಿನ ವಾರ್ಷಿಕ ಚಟುವಟಿಕೆಗಳ ಪುಸ್ತಕ ನೀಡಿ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳಿಗೆ

ಸಂಪೂರ್ಣ ಸಹಕಾರ ಮಾರ್ಗದರ್ಶನ ನೀಡುವಂತೆ ಮನವಿ ಮಾಡಲಾಯಿತು. ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಪುಸ್ತಕ ನೀಡಿ ಸಹಕಾರ ಮತ್ತು ಮಾರ್ಗದರ್ಶನ ನೀಡುವಂತೆ ವಿನಂತಿಸಲಾಯಿತು. ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಗಂಗರಾಮಯ್ಯ ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳಾದ ಶ್ರೀ ಸೋಮೇಶ್‌ರವರಿಗೆ ವಾರ್ಷಿಕ ಕ್ರಿಯಾ ಯೋಜನೆ ಪುಸ್ತಕ ನೀಡಿ ಸಹಕಾರ ಮಾರ್ಗದರ್ಶನ ನೀಡುವಂತೆ ವಿನಂತಿಸಲಾಯಿತು. ಈ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ಮೋಹನ್ ರೆಡ್ಡಿ , ಜಿಲ್ಲಾ ಸಂಘಟಕ ಶ್ರೀ ವಿಶ್ವನಾಥ ವಿ ಕೋಲಾರ, ಶ್ರೀಮತಿ ಮಂಜುಳ, ಬಿ.ಆರ್.ಪಿ ಮತ್ತು ಜಂಟಿ ಕಾರ್ಯದರ್ಶಿಗಳು ಉಪಸ್ಥಿತರಿದ್ದರು.

* ಜುಲೈ 18 ರಂದು ಕೋಲಾರ ಜಿಲ್ಲಾ ಸಂಸ್ಥೆಯ ವತಿಯಿಂದ ಕೋಲಾರ ಜಿಲ್ಲೆಗೆ ನೂತನ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿಗಳಾಗಿ ಆಗಮಿಸಿರುವ ಶ್ರೀಮತಿ ಪದ್ಮ ಬಸವಂತಪ್ಪ, ಭಾ.ಆ.ಸೇ.ರವರನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ ರವರ ನೇತೃತ್ವದಲ್ಲಿ ಜಿಲ್ಲಾ ಸಂಸ್ಥೆಯ ಪರವಾಗಿ ಸ್ವಾಗತ ಕೋರಲಾಯಿತು ಹಾಗೂ ರಾಜ್ಯ ಸಂಸ್ಥೆಯ ವತಿಯಿಂದ ನೀಡಲ್ಪಟ್ಟ 2023-24ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನಾ ಪುಸ್ತಕ ನೀಡಿ ಸಹಕಾರ ಮತ್ತು ಮಾರ್ಗದರ್ಶನ ಕೋರಲಾಯಿತು. ಈ ಸಂಧರ್ಭದಲ್ಲಿ ಜಿಲ್ಲಾ ಆಯುಕ್ತರಾದ, ಶ್ರೀ ಕೆ.ಆರ್. ಸುರೇಶ್ ಹಾಗೂ ಇತರರು ಉಪಸ್ಥಿತರಿದ್ದರು.



## ಕೊಪ್ಪಳ

ಜುಲೈ 31 ರಿಂದ ಆಗಸ್ಟ್ 6ರ ವರೆಗೆ ನಡೆದ ಮೂಲ ತರಬೇತಿ ಶಿಬಿರದಲ್ಲಿ ಕಲ್ಯಾಣ ಕರ್ನಾಟಕ ವಿಭಾಗೀಯ ಮಟ್ಟದ ಬೀದರ್, ಕಲಬುರ್ಗಿ, ಯಾದಗಿರಿ, ರಾಯಚೂರು, ಬಳ್ಳಾರಿ, ವಿಜಯನಗರ, ಕೊಪ್ಪಳ ಈ 7 ಜಿಲ್ಲೆಗಳಿಂದ 128 ಸ್ಕೌಟ್ಸ್ ಶಿಬಿರಾರ್ಥಿಗಳು ಹಾಗೂ 89 ಗೈಡ್ಸ್ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು, ಶ್ರೀ ಸಿ.ಬಿ. ಪಾಟೀಲ್, ಕಲಬುರ್ಗಿ ವಿಭಾಗದ ಆಯುಕ್ತರು, ಶ್ರೀ ಎಸ್.ಎಸ್. ಬಿರಿದಾರ್, ಡಿ.ಡಿ.ಪಿ.ಐ. ಕೊಪ್ಪಳ, ಶ್ರೀ ಸಿದ್ಧರಾಮಯ್ಯ ಸ್ವಾಮಿ ಡಿ.ಸಿ.ಸಿ. ಕೊಪ್ಪಳ, ಶ್ರೀ ಮಲ್ಲಿಕಾರ್ಜುನ ಚೌಕಿಮಠ್, ಡಿ.ಸಿ.(ಎಸ್) ಕೊಪ್ಪಳ, ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು. ಸ್ಕೌಟ್ಸ್ ವಿಭಾಗದ 1ನೇ ಶಿಬಿರಕ್ಕೆ ಶ್ರೀ ಬಾಬುರಾವ್ ನಿಂಬೂರಿ ಬೀದರ್ ಜಿಲ್ಲಾ ಆಯುಕ್ತರು, 2ನೇ ಶಿಬಿರಕ್ಕೆ ಶ್ರೀ ಶ್ರೀಕಾಂತ ಮಾಸಗಟ್ಟಿ ತರಬೇತಿ ಆಯುಕ್ತರು ಕೊಪ್ಪಳ, 3ನೇ ಶಿಬಿರಕ್ಕೆ ಶ್ರೀ ನಟರಾಜ ಸ್ವಾಮಿ ತಾಲ್ಲೂಕು ಕಾರ್ಯದರ್ಶಿ ಸಿರುಗುಪ್ಪ, 4ನೇ ಶಿಬಿರಕ್ಕೆ ಶ್ರೀ ಕೊಟ್ರೇಶ್ ಗೌಡ ಜಿ. ಇಟಗಿ ತರಬೇತಿ ನಾಯಕರಾಗಿದ್ದರು.








ಗೈಡ್ಸ್ ವಿಭಾಗದ 1ನೇ ಶಿಬಿರಕ್ಕೆ ಶ್ರೀಮತಿ ಅರುಣಾ ವಸ್ತ್ರದ್ ಎ.ಎಲ್.ಟಿ.(ಜಿ) ನಾಯಕಿಯರಾಗಿದ್ದರು.

* ಅಸಂಖ್ಯ ಜೀವರಾಶಿಗೆ ಆಶ್ರಯ ದಾಣವಾದ ನೆಲ ಮತ್ತು ದೇಶದ ಬಗ್ಗೆ ಜಾಗೃತಿ ಮೂಡಿಸುವ ಸರ್ಕಾರದ ಮಹತ್ವದ "ನನ್ನ ಮಣ್ಣು, ನನ್ನ ದೇಶ" ಕಾರ್ಯಕ್ರಮವನ್ನು ಆಗಸ್ಟ್ 17 ರಂದು ಆಚರಿಸಲಾಯಿತು. ತಾಲ್ಲೂಕು ಪಂಚಾಯತ್ ಕೊಪ್ಪಳ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗ್ರಾಮ ಪಂಚಾಯತಿಗಳು, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ನೆಹರು ಯುವ ಕೇಂದ್ರ, ಕೊಪ್ಪಳ, ಭಗತ್ ಸಿಂಗ್ ಸ್ಕೌಟ್ಸ್ ಓಪನ್ ಟ್ರೂಪ್ ಕೊಪ್ಪಳ ಇವರ ಸಹಯೋಗದಲ್ಲಿ ಕೊಪ್ಪಳ ನಗರದ ತಾಲ್ಲೂಕು ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಂಗನವಾಡಿ ನೌಕರರು, ಗ್ರಾಮ ಪಂಚಾಯತಿ ಸಿಬ್ಬಂದಿ, ಗ್ರಾಮ ಕಾಯಕ ಮಿತ್ರರು, ತಾಲ್ಲೂಕು ಪಂಚಾಯತಿಯ ಎಲ್ಲಾ ಸಿಬ್ಬಂದಿ, ತಾಂತ್ರಿಕ ಸಹಾಯಕರು, ಬೇರ್‌ಫೂಟ್ ಟೆಕ್ನಿಷಿಯನ್ ಹಾಗೂ ಸ್ವಾಮಿ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳ ಇತರ ಶಾಲೆಗಳ ಸ್ಕೌಟ್-ಗೈಡ್ ಮಕ್ಕಳು ಹಾಗೂ ಇನ್ನೀತರ ಶಾಲೆಗಳ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ಕೊಪ್ಪಳ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ರಾಹುಲ್ ರತ್ನಂ ಪಾಂಡೆ ಅವರು ಮಾತನಾಡಿ, "ನಮ್ಮ ದೇಶವು ಉತ್ತಮ ಪರಿಸರ, ಹವಾಗುಣ ಹೊಂದಿರಲು ಇಲ್ಲಿನ ಮಣ್ಣಿನ ಗುಣ ಮುಖ್ಯವಾಗಿದೆ. ಅನೇಕ ಮಹಾತ್ಮರ ಹೋರಾಟದಿಂದಾಗಿ



ಮತ್ತು ತ್ಯಾಗದಿಂದಾಗಿ ನಮ್ಮ ದೇಶ ಸ್ವಾತಂತ್ರ್ಯ ಪಡೆದು ಅಭಿವೃದ್ಧಿಯತ್ತ ಸಾಗುತ್ತಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರಕಿ 75 ವರ್ಷಗಳು ಪೂರ್ಣಗೊಂಡು ಈ ಸವಿನೆನಪಿಗಾಗಿ ಪ್ರತಿ ಗ್ರಾಮ ಪಂಚಾಯತಿಯಿಂದ ಮಣ್ಣು ಸಂಗ್ರಹಿಸುವ ಮೂಲಕ ಜನರಲ್ಲಿ ಮಣ್ಣು ಮತ್ತು ದೇಶದ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ" ಎಂದು ತಿಳಿಸಿದರು. ನನ್ನ ಮಣ್ಣು ನನ್ನ ದೇಶ ಕಾರ್ಯಕ್ರಮ ಮುಖ್ಯ ಉದ್ದೇಶ ಕುರಿತು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ದುಂಡಪ್ಪ ತುರಾದಿ ಅವರು ಮಾತನಾಡಿ, "ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಳೆದ ಆಗಸ್ಟ್-9 ರಿಂದ ಈ ಕಾರ್ಯಕ್ರಮ ಜರುಗಿಸಿ ಜನರಲ್ಲಿ ದೇಶ, ಮಣ್ಣಿನ ಬಗ್ಗೆ ಜಾಗೃತಿ ಮೂಡಿಸಿದ್ದು ಪ್ರತಿ ಗ್ರಾಮ ಪಂಚಾಯತಿಯ ಒಂದು ಹಿಡಿ ಮಣ್ಣನ್ನು ದೆಹಲಿಗೆ ತಲುಪಿಸಲಾಗುತ್ತದೆ" ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಶ್ರೀ ಮಲ್ಲಪ್ಪ ತೊದಲಬಾಗಿ ಅವರು ಎಲ್ಲರಿಗೂ ಪಂಚಪ್ರಾಣ ಶಪಥ ಬೋಧಿಸಿದರು. "ನನ್ನ ಮಣ್ಣು ನನ್ನ ದೇಶ" ಕುರಿತ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರಾದ ಶ್ರೀ ಟಿ. ಕೃಷ್ಣಮೂರ್ತಿ, ಪಂಚಾಯತ್ ರಾಜ್ ಸಹಾಯಕ ನಿರ್ದೇಶಕ ಶ್ರೀ ಎಚ್. ಮಹೇಶ್, ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ಶಂತ್ರಯ್ಯ, ತಾಲ್ಲೂಕು ಯೋಜನಾಧಿಕಾರಿ ಶ್ರೀ ರಾಜೇಸಾಬಹ ನದಾಫ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಶ್ರೀ ಹನುಮಂತಪ್ಪ, ಸಹಾಯಕ ಲೆಕ್ಕಾಧಿಕಾರಿ ಶ್ರೀ ರವಿಕುಮಾರ, ನರೇಗಾ ಸಹಾಯಕ ನಿರ್ದೇಶಕಿ ಶ್ರೀಮತಿ ಸೌಮ್ಯ ಕೆ., ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸ್ಕೌಟ್ ಮಾಸ್ಟರ್ ಶ್ರೀ ಪ್ರಹ್ಲಾದ್ ಮತ್ತು ಲೀಡರ್ ಟ್ರೈನರ್ ಜಯರಾಜ್ ಬೂಸದ್ ಭಾಗವಹಿಸಿದ್ದರು.

## ಅಭಿನಂದನೆಗಳು



ಹಾಸನದ ಶ್ರೀ ಗಿರೀಶ್ ಅವರ ಏಕಲವ್ಯ ರೋವರ್ ತಂಡದ ರೋವರ್
ಶ್ರೀ ರಂಗಸ್ವಾಮಿ ಹೆಚ್.ಎ. ಇವರಿಗೆ ಸ್ಕೌಟ್ ಕೋಟಾದಡಿಯಲ್ಲಿ ರೈಲ್ವೆ ಇಲಾಖೆಯಲ್ಲಿ ಸಹಾಯಕರಾಗಿ ಉದ್ಯೋಗ ದೊರಕಿದೆ.

## ಮಂಡ್ಯ

ವಿಶ್ವ ಸ್ಕಾರ್ಫ್ ಡೇ ಅನ್ನು ಸರ್ಕಾರಿ ಪ್ರೌಢ ಶಾಲೆ ಬೇಲೂರು ಮಂಡ್ಯ ಇಲ್ಲಿ ಆಯೋಜಿಸಿದ್ದು, ಕಾರ್ಯಕ್ರಮವನ್ನು ಮಂಡ್ಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಟಿ. ವರಪ್ರಸಾದ್ ಅವರು ಉದ್ಘಾಟಿಸಿದರು. ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಶ್ರೀ ಉಮೇಶ್ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ಕೆ.ಎಂ. ಪವಿತ್ರ ಅವರು ವಹಿಸಿದ್ದರು.



## ಮೈಸೂರು

ಜುಲೈ 10 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪು ನಗರ, ಮೈಸೂರು ಇಲ್ಲಿ ರೋವರ್ ಮತ್ತು ರೇಂಜರ್‌ಗಳಿಗೆ ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಜಿಲ್ಲಾ ಕಾರ್ಯದರ್ಶಿಗಳು ಶ್ರೀ ಅಬ್ದುಲ್ ಜಮೀಲ್‌ರವರು ಕಾರ್ಯಾಗಾರವನ್ನು ಉದ್ಘಾಟಿಸಿದರು. ಜಿಲ್ಲಾ ಸಂಘಟಕರುಗಳಾದ ಶ್ರೀ ರಾಮಪ್ರಸಾದ್ ಮತ್ತು ಶ್ರೀ ಆರ್.ಪಿ. ಚಂದ್ರುರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



* ಜುಲೈ 12 ರಂದು ಮೈಸೂರು ವಿಭಾಗ ಮಟ್ಟದ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳಿಗೆ ರೋವರ್ ಮತ್ತು ರೇಂಜರ್‌ನ ಸಾಮಾನ್ಯ ಮಾಹಿತಿ ಶಿಬಿರವನ್ನು ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಸಾಹುಕಾರ್ ಚೆನ್ನಯ್ಯ ಸಭಾಂಗಣದಲ್ಲಿ





ಆಯೋಜಿಸಲಾಗಿತ್ತು. ಶ್ರೀ ಗುಬ್ಬಿಗೂಡು ರಮೇಶ್, ಸಹಾಯಕ ನಿರ್ದೇಶಕರು ಪದವಿಪೂರ್ವ ಶಿಕ್ಷಣ ಇಲಾಖೆ ಕರ್ನಾಟಕ ಬೆಂಗಳೂರುರವರು ಈ ಮಾಹಿತಿ ಶಿಬಿರವನ್ನು ಉದ್ಘಾಟಿಸಿದರು. ಶ್ರೀಮತಿ ನಾಗಮ್ಮ, ಉಪನಿರ್ದೇಶಕರು ಪದವಿಪೂರ್ವ ಶಿಕ್ಷಣ ಇಲಾಖೆ ಮೈಸೂರುರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಶ್ರೀ ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು, ಶ್ರೀ ಬಿ.ಕೆ. ಬಸವರಾಜು, ಜಂಟಿ ರಾಜ್ಯ ಕಾರ್ಯದರ್ಶಿಗಳು, ಶ್ರೀಮತಿ ರಾಮಲತಾ, ಜಂಟಿ ರಾಜ್ಯ ಕಾರ್ಯದರ್ಶಿಗಳು, ಶ್ರೀಮತಿ ಪುಷ್ಪವಲ್ಲಿ, ಜಿಲ್ಲಾ ಗೈಡ್ ಆಯುಕ್ತರು ಹಾಗೂ ರಾಜ್ಯ ಸಂಸ್ಥೆ ಉಪಾಧ್ಯಕ್ಷರು, ಡಾ. ಕೆ.ಬಿ. ಗುರುಮೂರ್ತಿ, ಜಿಲ್ಲಾ ಖಜಾಂಚಿಗಳು, ಶ್ರೀ ಅಬ್ದುಲ್ ಜಮೀಲ್, ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಪ್ರಭಾಕರ ಭಟ್, ರಾಜ್ಯ ಸಂಘಟನಾ ಆಯುಕ್ತರು ಸ್ಕೌಟ್ಸ್ ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಈ ಮಾಹಿತಿ ಶಿಬಿರದಲ್ಲಿ ಮೈಸೂರು ವಿಭಾಗದ ಎಲ್ಲಾ ಜಿಲ್ಲೆಗಳಿಂದ ಪದವಿಪೂರ್ವ ಕಾಲೇಜುಗಳ 356 ಉಪನ್ಯಾಸಕರುಗಳು ಭಾಗವಹಿಸಿದ್ದರು. ಸಮಾರೋಪ ಸಮಾರಂಭದಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಪ್ರಧಾನ ಆಯುಕ್ತರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

* ಮೈಸೂರು ಜಿಲ್ಲಾ ಮಟ್ಟದ ಸ್ಕೌಟ್ಸ್ ಮತ್ತು ಗೈಡ್ಸ್ ತೃತೀಯ ಸೋಪಾನ ಶಿಬಿರವನ್ನು ಜುಲೈ 22 ರಿಂದ 24ರ ವರೆಗೆ ಶ್ರೀ ಜಯಚಾಮರಾಜೇಂದ್ರ ಸ್ಕೌಟ್-ಗೈಡ್ ಕೇಂದ್ರ ಕಛೇರಿ, ಮೈಸೂರು ಇಲ್ಲಿ ಆಯೋಜಿಸಲಾಗಿತ್ತು 340 ಸ್ಕೌಟ್ಸ್ ಮತ್ತು ಗೈಡ್ಸ್ ಈ ಶಿಬಿರದಲ್ಲಿ ಭಾಗವಹಿಸಿದ್ದರು. ಶ್ರೀಮತಿ ಮನೋಹರ ಪ್ರಭ, ಗೈಡ್ ವಿಭಾಗಕ್ಕೆ ಮತ್ತು ಶ್ರೀ ರಾಮಪ್ರಸಾದ್ ಸ್ಕೌಟ್ ವಿಭಾಗಕ್ಕೆ ನಾಯಕರುಗಳಾಗಿ ಕಾರ್ಯ ನಿರ್ವಹಿಸಿದರು.



* ಮೈಸೂರು ಜಿಲ್ಲೆ ಉತ್ತರ-ದಕ್ಷಿಣ ತಾಲ್ಲೂಕು ಮತ್ತು ಶ್ರೀರಾಮಪುರ ಸ್ಥಳೀಯ ಸಂಸ್ಥೆಗಳ ಸ್ಕೌಟರ್ಸ್ ಮತ್ತು ಗೈಡರ್ಸ್ ಸಭೆ ಆಗಸ್ಟ್ 03 ಗುರುವಾರ ಜಿಲ್ಲಾ ಸಂಸ್ಥೆಯಲ್ಲಿ ನಡೆಯಿತು. ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಟಿ.ಎಸ್. ರವಿಶಂಕರ್, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀಮತಿ ಪುಷ್ಪವಲ್ಲಿ, ಜಿಲ್ಲಾ ಗೈಡ್ ಆಯುಕ್ತರು, ಶ್ರೀ ಅಬ್ದುಲ್ ಜಮೀಲ್, ಜಿಲ್ಲಾ ಕಾರ್ಯದರ್ಶಿ, ಡಾ. ಕೆ.ಬಿ. ಗುರುಮೂರ್ತಿ, ಜಿಲ್ಲಾ ಖಜಾಂಚಿ ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಈ ಸಭೆಯಲ್ಲಿ ಉಪಸ್ಥಿತರಿದ್ದರು.

## ರಾಮನಗರ

ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಕೋಡಿಹಳ್ಳಿ ಸ್ಥಳೀಯ ಸಂಸ್ಥೆಯ ಹಾಗೂ ಸಾಮಾಜಿಕ ಅರಣ್ಯ ಇಲಾಖೆ ಕನಕಪುರ ಅವರ ಸಹಯೋಗದೊಂದಿಗೆ ಜುಲೈ 06 ರಂದು ವನ ಮಹೋತ್ಸವ, ಸ್ವಚ್ಛತಾ ಶಿಬಿರ ಹಾಗೂ ಡಾಕ್ಟರ್ ವಿ.ಎಸ್. ಆಚಾರ್ಯರವರ 84ನೇ ಜನ್ಮ ದಿನಾಚರಣೆ ಅಂಗವಾಗಿ ಶ್ರೀ ಋಷಿ ಕ್ಷೇತ್ರ ದೊಡ್ಡಮರಳವಾಡಿ ಶ್ರೀ ಅನ್ನಪೂರ್ಣೇಶ್ವರಿ ಆಶ್ರಮದಲ್ಲಿ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ನಂತರ ಆಶ್ರಮದ ಸುತ್ತಮುತ್ತ ಪ್ರದೇಶವನ್ನು ಸ್ವಚ್ಛತೆ ಮಾಡಿ ಪ್ಲಾಸ್ಟಿಕ್ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಲಾಯಿತು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಇವರ ನೇತೃತ್ವದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಶ್ರೀ ಲಿಂಗರಾಜು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶ್ರೀ ಗಣೇಶ್, ವಲಯ ಅರಣ್ಯಾಧಿಕಾರಿ ಶ್ರೀ ಮಲ್ಲೇಶ್, ಉಪ ವಲಯ ಅರಣ್ಯಾಧಿಕಾರಿ ಶ್ರೀ ರಮೇಶ್, ಶ್ರೀ ರಾಜು, ಶ್ರೀ ನರಸಿಂಹಮೂರ್ತಿ, ಅರಣ್ಯ ಇಲಾಖೆ ಸಿಬ್ಬಂದಿ, ಮರಳವಾಡಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಶ್ರೀ ಶಿವಶಂಕರ್ ಹಾಗೂ ಮಾಜಿ ಅಧ್ಯಕ್ಷರಾದ ಶ್ರೀ ಬೈರೇಗೌಡ, ಕಬ್ ಕಾಂಗ್ರೆಸ್ ಅಧ್ಯಕ್ಷ ಶ್ರೀ ಸಬದರ್, ಶ್ರೀ ಜಗನ್ನಾಥ್ ರಾವ್ ಸಿಂಧ್ಯ, ಶ್ರೀಮತಿ ಭಾರತಿ ಜೆ.ವಿ., ಜಿಲ್ಲಾ ಆಯುಕ್ತರು (ಗೈಡ್ಸ್), ಶ್ರೀಮತಿ ನಾಗಮ್ಮ, ರಾಮನಗರ ತಾಲ್ಲೂಕು ನೋಡಲ್ ಅಧಿಕಾರಿಗಳು, ಶ್ರೀಮತಿ ಮಾಲಿನಿ ಮತ್ತು ಎಸ್.ಎಸ್.ವೈ. ಆಶ್ರಮದ ಸಿಬ್ಬಂದಿರವರ ಉಪಸ್ಥಿತಿಯಲ್ಲಿ. ಸಸಿ ನೆಟ್ಟು 1 ಕೋಟಿ ವೃಕ್ಷ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ವೇದಿಕೆ ಕಾರ್ಯಕ್ರಮದಲ್ಲಿ ಸ್ವಾಗತವನ್ನು ಶ್ರೀ ಮಠಪತಿರವರು ಮಾಡಿದರು. ನಂತರ ಶ್ರೀ ಲಿಂಗರಾಜು ಡಿ.ಸಿ.ಎಫ್.ರವರು "ಪರಿಸರ ದಿನಾಚರಣೆ ಮಹತ್ವ ಕುರಿತು ಜಾಗೃತಿ ಮೂಡಿಸುವುದು ಜೂನ್ ತಿಂಗಳ 5 ಕ್ಕೆ ಮಾತ್ರ ಅಲ್ಲ ಜೀವನ ಪೂರ್ತಿ ಅಳವಡಿಸಿಕೊಳ್ಳಬೇಕು" ಎಂದು ಸಲಹೆ ನೀಡಿದರು. ಶ್ರೀಮತಿ ಮಾಲಿನಿ ಆಶ್ರಮದ ಬಗ್ಗೆ ಮಾಹಿತಿ ನೀಡಿದರು. ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಋಷಿ ಪ್ರಭಾಕರ್ ಗುರೂಜಿರವರನ್ನು ನೆನೆದು ತಮ್ಮ ಬಾಲ್ಯದಲ್ಲಿ ಈ ಸ್ಥಳದಲ್ಲಿ ಕಳೆದ ದಿನಗಳನ್ನು ಮೆಲುಕು ಹಾಕಿದರು. ಸಿದ್ಧಿ ಸಮಾಧಿ ಯೋಗ ಕುರಿತು ಮಾಹಿತಿ ನೀಡಿದರು. ಜಿಲ್ಲಾ ಮುಖ್ಯ ಆಯುಕ್ತರು



ಶ್ರೀ ಗಂಗಣ್ಣಸ್ವಾಮಿ ಮತ್ತು ಜಿಲ್ಲಾ ಕಾರ್ಯದರ್ಶಿ ಶ್ರೀ ಶಿವನಂಜಪ್ಪ ರವರು ಯಶಸ್ವಿಗೆ ಸಹಕಾರ ನೀಡಿದರು. ಶ್ರೀಮತಿ ಜೀವಿತಾ ಬಿ. ರವರು ವಂದನೆಗಳು ಸಲ್ಲಿಸಿದರು.

* ಜುಲೈ 08 ರಂದು ರಾಮನಗರ ಜಿಲ್ಲೆಯ, ಮಾಗಡಿ ಸ್ಥಳೀಯ ಸಂಸ್ಥೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಾಗಡಿ ಇಲ್ಲಿನ ರೇಂಜರ್-ಲೀಡರ್ ಶ್ರೀಮತಿ ಚಂದ್ರಪ್ರಭ ಹಾಗೂ ಕಾಲೇಜು ಪ್ರಾಂಶುಪಾಲರ ಸಹಕಾರದಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಬೀಜದುಂಡೆಗಳು ತಯಾರಿಸಲಾಯಿತು. ಅದನ್ನು ಕಮಿಕವನ ಎಸ್ಟೇಟ್ ಪೋಲೋಹಳ್ಳಿಯವರ ಸಹಯೋಗದೊಂದಿಗೆ ರೋವರ್ ಮತ್ತು ರೇಂಜರ್ ವಿದ್ಯಾರ್ಥಿಗಳು ಚಾಮರಾಜನಗರ ಜಲಾಶಯದ ತಿಪ್ಪಗೊಂಡನಹಳ್ಳಿ ಸಮೀಪದ ಬೆಟ್ಟಕ್ಕೆ ತೆರಳಿ ಬಿತ್ತಿದರು.




* ರಾಮನಗರ ಸ್ಥಳೀಯ ಸಂಸ್ಥೆಯ ವತಿಯಿಂದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ರಾಮನಗರದ ಅವರ ಸಹಯೋಗದೊಂದಿಗೆ ಆಗಸ್ಟ್ 09 ರಂದು ವಿಶ್ವ ಬುಡಕಟ್ಟು ಜನಾಂಗದ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ರಾಮನಗರ ಡಯಟ್ ಹಿರಿಯ ಉಪನ್ಯಾಸಕರಾದ ಶ್ರೀ ಭೀಮಾ ನಾಯಕ್, ಶ್ರೀ ವೆಂಕಟೇಶ್, ಕಿರಿಯ ಉಪನ್ಯಾಸಕರು ಶ್ರೀ ರಾಜಶೇಖರ್, ಶ್ರೀ ಬಾಬು ಕೆ.ಪಿ. ಶ್ರೀಮತಿ ಚಂದ್ರಿಕಾ ಬಿ, ಶ್ರೀಮತಿ ನಾಗಮ್ಮ ಡಿ ಎಸ್, ಶ್ರೀಮತಿ ರೂಪಲಕ್ಷ್ಮೀ, ಶಾಲೆ ತೋಟಗಾರಿಕೆ ಶಿಕ್ಷಕರು, ಹಾಗೂ ಇತರೆ ಸಿಬ್ಬಂದಿ ಉಪಸ್ಥಿತರಿದ್ದರು. ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಪದಮ್ ಚಂದ್ ಜೈನ್‌ರವರ ಸಹಕಾರದಲ್ಲಿ ಈ ದಿನಾಚರಣೆ ಆಚರಿಸಲಾಯಿತು. ಸ್ವಾಗತವನ್ನು ಶ್ರೀ ಕೃಷ್ಣಪ್ಪ ಎಸ್.ರವರು ನಡೆಸಿದರು. ಗಣ್ಯರು ಗಿಡಕ್ಕೆ ನೀರು ಹಾಕುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶ್ರೀ ಬಾಬು ಕೆ.ಪಿ., ಕಿರಿಯ ಉಪನ್ಯಾಸಕರು ಡಯಟ್ ರಾಮನಗರ ಅವರು ಬುಡಕಟ್ಟು ಜನಾಂಗದ ದಿನಾಚರಣೆ ಮಹತ್ವ ಹಾಗೂ ಬುಡಕಟ್ಟು ಜನಾಂಗದ ಆಚರಣೆ ಮತ್ತು ಸಂಸ್ಕೃತಿ ಬಗ್ಗೆ ಮಾಹಿತಿ ನೀಡಿದರು. ನಂತರ ಶ್ರೀ ಭೀಮಾ ನಾಯಕ್ ರವರು ಕರ್ನಾಟಕದ ಮೈಸೂರು, ರಾಮನಗರ, ಚಾಮರಾಜನಗರ



ಕೊಡಗು ಜಿಲ್ಲಾ ಇರುವ ಕಾಡು ಕುರುಬ ಜೇನು ಕುರುಬ ಸಮುದಾಯದ ಗಿರಿಜನ ಹಾಡಿ ಮತ್ತು ಸೋಲಿಗ ಸಮುದಾಯವನ್ನು ಕುರಿತು ಮಾಹಿತಿ ನೀಡಿದರು. ನಂತರ ಜಿ.ಕೆ.ಎಂ.ಪಿ. ರಾಮನಗರ ಟೌನ್ ಶಾಲೆಯ ಗೈಡ್ಸ್ ಕ್ಯಾಪ್ಟನ್‌ರವರು ದಳದ ಗೈಡ್ಸ್ ವಿದ್ಯಾರ್ಥಿಗಳಿಂದ ಬುಡಕಟ್ಟು ಜನಾಂಗದ ನೃತ್ಯ ಪ್ರದರ್ಶನ ಜಿ.ಜಿ.ಜೆ.ಸಿ. ರಾಮನಗರ ಶಾಲೆ ಗೈಡ್ಸ್ ವಿದ್ಯಾರ್ಥಿನಿಯರಿಂದ ಬುಡಕಟ್ಟು ಜನಾಂಗದ ನೃತ್ಯ ನಡೆಯಿತು. ಎಲ್ಲಾ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ಶ್ರೀಮತಿ ರತ್ನಮ್ಮರವರು ವಂದಿಸಿದರು.

* ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಗ್ರೀನ್ ಬೆಲ್ ಹೈ ಸ್ಕೂಲ್ ಮೇಡಮಾರನಹಳ್ಳಿ ಶಾಲೆಯ ಸ್ಕೌಟ್ ಮಾಸ್ಟರ್ ಶ್ರೀಕಾಂತ್ ಮತ್ತು ಗೈಡ್ಸ್ ಕ್ಯಾಪ್ಟನ್ ಶ್ರೀಮತಿ ಶಿಲ್ಪಾ ರವರು ಆಗಸ್ಟ್ 09 ರಂದು ವಿಶ್ವ ಬುಡಕಟ್ಟು ಜನಾಂಗದ ದಿನಾಚರಣೆ ಕಾರ್ಯಕ್ರಮವನ್ನು ತಮ್ಮ ಶಾಲೆಯ ಮಟ್ಟದಲ್ಲಿ ಸಂಘಟನೆ ಮಾಡಿ ಬುಡಕಟ್ಟು ಜನಾಂಗದ ಆಚಾರ ಮತ್ತು ಸಂಸ್ಕೃತಿ ಹಾಗೂ ಪರಂಪರೆಯನ್ನು ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಕರ್ತವ್ಯ ಎಂದು ಮಾಹಿತಿ ನೀಡಿದರು ಈ ಸಂದರ್ಭದಲ್ಲಿ ಇತರೆ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗ ಸಹಕಾರ ನೀಡಿದರು. ನಂತರ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಬುಡಕಟ್ಟು ಜನಾಂಗದ ವೇಷಭೂಷಣ ಧರಿಸಿ ನೃತ್ಯ ಪ್ರದರ್ಶನ ಕಾರ್ಯಕ್ರಮ ನೀಡಿದರು.



## Congratulations




Kum. P.C. Deepthi of 16th Kanteerava Open Scout and Guide Group won Gold Medal under 49 kg Junior Girls Category in the 40th State Level Taekwondo Championship held at Koramangala Indoor Stadium Bengaluru from 13th to 17th July 2023. Sri M. Srinivas Presented Certificate to her.

## ಶಿವಮೊಗ್ಗ

“ಶಿಕ್ಷಣ ಕೇವಲ ಅಂಕಗಳಿಗೆ ಮಾತ್ರ ಸೀಮಿತವಾಗಿರದೆ, ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸೀಮಿತವಾಗಿರಬೇಕು. ಪುಸ್ತಕದ ಕಲಿಕೆಯಿಂದ ವ್ಯಕ್ತಿ ಪರಿಪೂರ್ಣನಾಗಲು ಸಾಧ್ಯವಿಲ್ಲ, ಜೀವನದ ಪ್ರತಿಯೊಂದು ಕ್ಷಣವನ್ನು ಸದುಪಯೋಗ ಮಾಡಿಕೊಂಡು ನಮ್ಮಲ್ಲಿ ನೈತಿಕ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು” ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಮಾನ್ಯ ಶ್ರೀ ಬಿ. ಕೃಷ್ಣಪ್ಪರವರು ಜಿಲ್ಲಾ ಮಟ್ಟದ ರೋವರ್ಸ್ ಮತ್ತು ರೇಂಜರ್ಸ್ ನಿಪುಣ್ ಪರೀಕ್ಷಾ ಶಿಬಿರದ ಉದ್ಘಾಟನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಸಂಸ್ಥೆಯ ಜಿಲ್ಲಾ ಆಯುಕ್ತರಾದ ಶ್ರೀ ಕೆ.ಪಿ. ಬಿಂದುಕುಮಾರ ಇಂದಿನ ಯುವ ಪೀಳಿಗೆ ತಮ್ಮ ಅಮೂಲ್ಯವಾದ ಸಮಯವನ್ನು ಅಂತರ್ಜಾಲದಲ್ಲಿ ಕಳಿಯುತ್ತಿರುವುದು ವಿಷಾದನಿಯ, ಸಮಯದ ಸದುಪಯೋಗ ಪಡಿಸಿಕೊಂಡು ಜೀವನದ ಗುರಿಯತ್ತ ಗಮನವಹಿಸಬೇಕೆಂದು ನುಡಿಯುತ್ತಾ ಪರೀಕ್ಷೆಗೆ ಎಲ್ಲರಿಗೂ ಶುಭಕೋರಿದರು. ಈ ಶಿಬಿರದಲ್ಲಿ ಜಿಲ್ಲೆಯ 339 ಶಿಬಿರಾರ್ಥಿಗಳು 21 ಕಾಲೇಜಿನಿಂದ ಭಾಗವಹಿಸಿರುತ್ತಾರೆ. ಈ ಶಿಬಿರದ ಸಂಘಟನೆಯನ್ನು ಹಾಗೂ ರೇಂಜರ್ ವಿಭಾಗದ ನಾಯಕರಾಗಿ ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀಮತಿ ಭಾರತಿ ಡಾಯಸರವರು ಕಾರ್ಯನಿರ್ವಹಿಸಿದರು, ರೋವರ್ ವಿಭಾಗಕ್ಕೆ ಶ್ರೀ ಎ.ವಿ. ರಾಜೇಶರವರು ಕಾರ್ಯನಿರ್ವಹಿಸಿದರು. ಜುಲೈ 22 ರಂದು ನಿಪುಣ್ ಪರೀಕ್ಷಾ ಶಿಬಿರದ ಸಮಾರೋಪ ಸಮಾರಂಭವು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಹೆಚ್.ಡಿ. ರಮೇಶಶಾಸ್ತ್ರಿರವರ ಅಧ್ಯಕ್ಷತೆಯಲ್ಲಿ ನಡೆಯಿತು. ರೋವರ್ ವಿಭಾಗದಿಂದ ಇಬ್ಬರು ಹಾಗೂ ರೇಂಜರ್ ವಿಭಾಗದಿಂದ ಇಬ್ಬರು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಹೆಚ್.ಡಿ. ರಮೇಶಶಾಸ್ತ್ರಿರವರು ಮಾತನಾಡುತ್ತಾ “ಇಷ್ಟೊಂದು ಸಂಖ್ಯೆಯಲ್ಲಿ ಜಿಲ್ಲೆಯ ಎಲ್ಲಾ ತಾಲ್ಲೂಕಿನ 21 ಕಾಲೇಜಿನಿಂದ ತಮಗೆ ಕಳಿಸಿರುವ ಪ್ರಾಂಶುಪಾಲರಿಗೂ ಹಾಗೂ ನಿಮ್ಮ ಲೀಡರ್‌ಗಳಿಗೆ ಧನ್ಯವಾದ ತಿಳಿಸುತ್ತೇನೆ” ಎಂದು ಎಲ್ಲರಿಗೂ ಶುಭಕೋರಿದರು. ಶಿಬಿರದ ವರದಿಯನ್ನು ರೋವರ್ ವಿಭಾಗದ ನಾಯಕರಾದ ಶ್ರೀ ಎ.ವಿ. ರಾಜೇಶರವರು ನೀಡಿದರು. ಸಭೆಯ ನಿರೂಪಣೆ, ಶಿಬಿರದ ಉಸ್ತುವಾರಿ ಹಾಗೂ ರೇಂಜರ್ ವಿಭಾಗದ ನಾಯಕಿಯಾಗಿ ಎ.ಎಸ್.ಓ.ಸಿ ಶ್ರೀಮತಿ ಭಾರತಿ ಡಾಯಸ್‌ರವರು ನೇರವೇರಿಸಿದರು. ಈ ಸಮಾರಂಭದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಹೆಚ್. ಪರಮೇಶ್ವರ, ಜಂಟಿ ಕಾರ್ಯದರ್ಶಿ ಶ್ರೀ ವೀರೇಶಪ್ಪ ಸಹಾಯಕರುಗಳು ಉಪಸ್ಥಿತರಿದ್ದರು.




* ಆಗಸ್ಟ್ 01 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ಶಿವಮೊಗ್ಗರವರಿಂದ ಜಿಲ್ಲಾ ಸ್ಕೌಟ್ ಭವನ, ಬಿ.ಹೆಚ್.ರಸ್ತೆ, ಶಿವಮೊಗ್ಗ ಇಲ್ಲಿ ವಿಶ್ವ ಸೂರ್ಯೋದಯ ಹಾಗೂ ವಿಶ್ವ ಸ್ಕಾರ್ಫ್ ದಿನವನ್ನು ಆಚರಣೆ ಮಾಡಲಾಯಿತು. ಸಮಾರಂಭದ ಅಧ್ಯಕ್ಷತೆ ವಹಿಸಿದ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಕೆ.ಪಿ. ಬಿಂದುಕುಮಾರ್‌ರವರು ಮಾತನಾಡಿದರು. ಸ್ಕೌಟ್-ಗೈಡ್ ಪ್ರತಿಜ್ಞೆಯನ್ನು ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀಮತಿ ಭಾರತಿ ಡಾಯಸ್, ಎಲ್.ಟಿ. (ಗೈಡ್), ಹೆಚ್.ಡಬ್ಲ್ಯೂ.ಬಿ.(ರೇಂ) ಬೋಧಿಸಿದರು ಹಾಗೂ ಸಭೆಯ ನಿರೂಪಣೆಯನ್ನು ನಿರ್ವಹಿಸಿದರು. ಪ್ರಾಸ್ತಾವಿಕ ನುಡಿಯನ್ನು ಎಲ್.ಎ. ಕಾರ್ಯದರ್ಶಿ ಶ್ರೀ ರಾಜೇಶ್ ಅವಲಕ್ಕಿ, ಎ.ಎಲ್.ಟಿ (ರೋ)ರವರು ನುಡಿದರು. ಸ್ವಾಗತವನ್ನು ಎಲ್.ಎ ಸಹ ಕಾರ್ಯದರ್ಶಿ ಶ್ರೀ ಘನಶ್ಯಾಮ್ ಗಿರಿಮಾಜಿರವರು ನಿರ್ವಹಿಸಿದರು ವಂದನೆಯನ್ನು ಪಿ.ಆರ್.ಓ. ಶ್ರೀ ಜಿ. ವಿಜಯಕುಮಾರ್ ನೇರವೇರಿಸಿದರು. ಸುಮಾರು 50 ಸ್ಕೌಟ್ಸ್, ಗೈಡ್ಸ್‌ಗಳು ಉಪಸ್ಥಿತರಿದ್ದರು.




* “ಸಾಕಷ್ಟು ಮಹಾನ್ ವ್ಯಕ್ತಿಗಳ ತ್ಯಾಗ ಮತ್ತು ಬಲಿದಾನದಿಂದ ನಮಗೆ ಸ್ವಾತಂತ್ರ್ಯ ಸಿಕ್ಕಿದೆ. ಸ್ವಾತಂತ್ರ್ಯ ಭಾರತದಲ್ಲಿ ಸತ್‌ಪ್ರಜೆಗಳಾಗಿ ದೇಶ ಪ್ರೇಮದ ಧ್ಯೇಯವನ್ನು ಇಟ್ಟುಕೊಂಡು ಬದುಕಿದಲ್ಲಿ ಮಾತ್ರ ಆ ಮಹಾನ್ ವ್ಯಕ್ತಿಗಳ ತ್ಯಾಗ ಮತ್ತು ಬಲಿದಾನಕ್ಕೆ ನಾವು ಬೆಲೆನೀಡಿದಂತಾಗುತ್ತದೆ” ಎಂದು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಹೆಚ್.ಡಿ. ರಮೇಶಶಾಸ್ತ್ರಿಯವರು ತಿಳಿಸಿದರು. ಅವರು ಗೈಡ್ಸ್, ಶಿವಮೊಗ್ಗ ಜಿಲ್ಲಾ ಸಂಸ್ಥೆಯ ವತಿಯಿಂದ 77ನೇ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಧ್ವಜಾರೋಹಣ ಮಾಡುವ ಮೂಲಕ ಮಾತನಾಡಿದರು. ಈ ಸಮಾರಂಭದಲ್ಲಿ ಶಿವಮೊಗ್ಗ ತಾಲ್ಲೂಕಿನ ವಿವಿಧ ಶಾಲೆಯ 100 ಸ್ಕೌಟ್ಸ್, ಗೈಡ್ಸ್, ರೇಂಜರ್ಸ್ ಮತ್ತು ರೋವರ್ಸ್ ಹಿರಿಯ ಸ್ಕೌಟರ್ಸ್ ಮತ್ತು ಗೈಡರ್ಸ್‌ಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಪದಾಧಿಕಾರಿಗಳು ಸಿಬ್ಬಂದಿ ವರ್ಗದವರು ಪೊಷಕರು ಉಪಸ್ಥಿತರಿದ್ದರು.



## ತುಮಕೂರು

ಆಗಸ್ಟ್ 01 ರಂದು ಸ್ಥಳೀಯ ಸಂಸ್ಥೆ ಗುಬ್ಬಿವತಿಯಿಂದ ಜಿ.ಎಲ್.ಪಿ.ಎಸ್. ಕಾಡೆಗೌಡನಹಟ್ಟಿ ಶಾಲೆಯಲ್ಲಿ ಸ್ಕಾರ್ಫ್ ಡೇ ಮತ್ತು ಸನ್‌ರೈಸ್ ಡೇ ಆಚರಿಸಲಾಯಿತು. ಈ ಸಮಯದಲ್ಲಿ ಎಸ್.ಟಿ.ಸಿ.ಎಂ.ಸಿ. ಅಧ್ಯಕ್ಷರಾದ ಗುರುಚಿಕ್ಕೇಗೌಡ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಜಿ.ಆರ್. ಶಿವಕುಮಾರ್ ಉಪಾಧ್ಯಕ್ಷರಾದ ಶ್ರೀ ಎಂ.ಬಿ. ಕುಮಾರಸ್ವಾಮಿ, ಕಾರ್ಯದರ್ಶಿ ಶ್ರೀ ರಂಗಪ್ಪ ವಿವಿಧ ಶಾಲೆಗಳಿಂದ ಆಗಮಿಸಿದ ಸ್ಕೌಟ್ಸ್–ಗೈಡ್ಸ್, ಬುಲ್‌ಬುಲ್ ಘಟಕದ ದಳನಾಯಕಿರಾದ ಶ್ರೀಮತಿ ಪುಷ್ಪಾವತಿ, ಶ್ರೀಮತಿ ಸಿಂಧು, ಶ್ರೀಮತಿ ಸಿದ್ದಗಂಗಮ್ಮ ಭಾಗವಹಿಸಿದ್ದರು.



* ಆಗಸ್ಟ್ 01 ರಂದು ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ತುಮಕೂರು ವತಿಯಿಂದ ಸನ್ ರೈಸ್ ಡೇ ಮತ್ತು ಸ್ಕರ್ಫ್ ಡೇ ದಿನಾಚರಣೆಯನ್ನು ಆಚರಿಸಲಾಯಿತು. ಸ್ಕಾರ್ಫ್ ದಿನಾಚರಣೆಯ ಪ್ರಯುಕ್ತ ಮಾನ್ಯ ಕುಲಪತಿಗಳು, ಮತ್ತು ಕುಲಸಚಿವರು, ಪೊಲೀಸ್ ಇಲಾಖೆಯ ಅಧಿಕಾರಿಗಳು, ಶಿಕ್ಷಣ ಇಲಾಖೆ ಅಧಿಕಾರಿಗಳು, ಮತ್ತಿತರರನ್ನು ಭೇಟಿ ಮಾಡಿ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯ ಕುರಿತಾಗಿ ಮಾಹಿತಿ ನೀಡಿ ಸ್ಕಾರ್ಫ್‌ನು ನೀಡುವುದರ ಮೂಲಕ ಸ್ಕಾರ್ಫ್ ದಿನಾಚರಣೆಯ ಮಹತ್ವವನ್ನು ತಿಳಿಸಲಾಯಿತು. ಇದೇ ಸಂದರ್ಭದಲ್ಲಿ ಪ್ರೊಫೆಸರ್ ಶ್ರೀ ಪರಶುರಾಮ್, ನೋಡಲ್ ಅಧಿಕಾರಿಗಳು ತುಮಕೂರು ವಿಶ್ವವಿದ್ಯಾಲಯ, ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಕುಮಾರ್‌ರವರು, ತಾಲ್ಲೂಕು ಕಾರ್ಯದರ್ಶಿ ಶ್ರೀ ದಯಾನಂದ್, ಜಿಲ್ಲಾ ಸಂಘಟಕರಾದ ಶ್ರೀ ನವೀನ್‌ಕುಮಾರ್‌ರವರು ಉಪಸ್ಥಿತರಿದ್ದರು.



* ಆಗಸ್ಟ್ 15 ರಂದು 77ನೇ ಸ್ವಾತಂತ್ರ ದಿನಾಚರಣೆ ಅಂಗವಾಗಿ ಜಿಲ್ಲಾ ಸ್ಕೌಟ್ ಭವನದಲ್ಲಿ ಧ್ವಜಾರೋಹಣವನ್ನು ನಿವೃತ್ತ ಉಪನಿರ್ದೇಶಕರು ಹಾಗೂ ಜಿಲ್ಲಾ ಸ್ಥಾನಿಕ ಆಯುಕ್ತರಾದ ಶ್ರೀ ಕೆಂಪರಂಗಯ್ಯರವರು ಮತ್ತು ಶ್ರೀ ಹುಚ್ಚಯ್ಯ ನೆರವೇರಿಸಿದರು. ತದನಂತರ ನಗರದ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ನಡೆದ ಕವಾಯಿತು ಪ್ರದರ್ಶನದಲ್ಲಿ ಜಿಲ್ಲೆಯ ಸ್ಕೌಟ್ಸ್–2, ಗೈಡ್ಸ್–4, ರೋವರ್ಸ್–3, ರೇಂಜರ್ಸ್–2 ಮತ್ತು ಯೂನಿರ್ಸಿಟಿ ಕಾಲೇಜಿನ ರೋವರ್ಸ್ ಮತ್ತು ರೇಂಜರ್ಸ್ ಬ್ಯಾಂಡ್ ತಂಡ 1 ಎಲ್ಲಾ ಸೇರಿ ಒಟ್ಟು 12 ತಂಡಗಳು ಪಥಸಂಚಲನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಉತ್ತಮ ಕವಾಯಿತು ಪ್ರದರ್ಶನ ನೀಡಿದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ರೇಂಜಸ್ ತಂಡಕ್ಕೆ ಪ್ರಥಮ ಬಹುಮಾನ ಲಭಿಸಿತು, ದ್ವಿತೀಯ ಬಹುಮಾನ ಶ್ರೀ ಸಿದ್ದಗಂಗಾ ಮಠ ಸ್ಕೌಟ್ ತಂಡಕ್ಕೆ ಸಿಕ್ಕಿತು. ಮೂರನೇ ಬಹುಮಾನ ಕಲ್ಪತರು ರೋವರ್ ಓಪನ್ ಯೂನಿಟ್ ತಂಡಕ್ಕೆ ಮಾನ್ಯ ಗೃಹ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಜಿ. ಪರಮೇಶ್ ರವರು ಬಹುಮಾನವನ್ನು ವಿತರಿಸಿದರು. ಉತ್ತಮ ಕವಾಯಿತು ಪ್ರದರ್ಶನ ನೀಡಿದ ವಿದ್ಯರ್ಥಿಗಳಿಗೆ ಮಾನ್ಯ ಗೃಹ ಸಚಿವರು ಇದೇ ಸಂಧರ್ಭದಲ್ಲಿ ಅಭಿನಂದನೆ ಸಲ್ಲಿಸಿದರು.



* ಆಗಸ್ಟ್ 04 ರಂದು ಜಿಲ್ಲಾ ಸಂಸ್ಥೆ ವತಿಯಿಂದ ಬೆಳಗುಂಬ ತರಬೇತಿ ಶಿಬಿರದ ನೂತನ ಕಟ್ಟಡದ ಭೂಮಿ ಪೂಜಾಕಾರ್ಯವನ್ನು ಜಿಲ್ಲಾ ಪದಾಧಿಕಾರಿಗಳಾದ ಶ್ರೀ ಪ್ರಸನ್ನಕುಮಾರ್, ಜಿಲ್ಲಾ ಉಪಾಧ್ಯಕ್ಷರು ಮತ್ತು ಜಿಲ್ಲಾ ಆಯುಕ್ತರುರಾದ ಶ್ರೀಮತಿ ಆಶಾ ಪ್ರಸನ್ನಕುಮಾರ್‌ರವರು ನೆರವೇರಿಸಿದ್ದರು, ಇದೇ ಸಂದರ್ಭದಲ್ಲಿ ಶ್ರೀಮತಿ ವೇಣುಗೋಪಾಲ್ ಕೃಷ್ಣ, ಶ್ರೀಮತಿ ಶುಭಾಷಿಣಿ ಆರ್., ಮತ್ತಿತರು ಹಾಜರಿದ್ದರು.

* ಜುಲೈ 19 ರಂದು ಸ್ಥಳೀಯ ಸಂಸ್ಥೆ ಗುಬ್ಬಿ ತಾಲ್ಲೂಕಿನಲ್ಲಿ ಒಂದು ದಿನದ ಪುನಶ್ಚೇತನ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀ ಸೋಮಶೇಖರ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು, ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶಿವಕುಮಾರ್, ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು, ಜಿಲ್ಲಾ ತರಬೇತಿ ಆಯುಕ್ತರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ರಾಜ್ಯ ಸಂಸ್ಥೆಯ ನೀಡಲಾದ ವಾರ್ಷಿಕ ಕ್ರಿಯಾಯೋಜನ ಪುಸ್ತಕವನ್ನು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

* ಜುಲೈ 19 ರಂದು ಪ್ರಸ್ತುತ ಸಾಲಿನ ಕ್ರಿಯಾ ಯೋಜನೆ ಪುಸ್ತಕವನ್ನು ಮಾನ್ಯ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳು ಆದ ಶ್ರೀ ಶ್ರೀನಿವಾಸ್‌ರವರು ಬಿಡುಗಡೆಗೊಳಿಸಿದರು. ಇದೇ ಸಂದರ್ಭದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಶ್ರೀ ಪ್ರಭು, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ಗಂಗಾಧರ್, ಜಿಲ್ಲಾ ದೈಹಿಕ ಶಿಕ್ಷಣ ಪರೀಕ್ಷಕರಾದ ಶ್ರೀ ಪರಮೇಶ್ವರ್‌ರವರು ಉಪಸ್ಥಿತರಿದ್ದರು ಈ ಕಾರ್ಯಕ್ರಮದಲ್ಲಿ ರಾಜ್ಯ ಉಪಾಧ್ಯಕ್ಷರು ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ಆದ ಶ್ರೀಮತಿ ಆಶಾ ಪ್ರಸನ್ನಕುಮಾರ್, ಜಿಲ್ಲಾ ಆಯುಕ್ತರು



ಶ್ರೀ ವೇಣುಗೋಪಾಲಕೃಷ್ಣ, ಜಿಲ್ಲಾ ಗೈಡ್ಸ್ ಆಯುಕ್ತರು, ಶ್ರೀಮತಿ ಸುಭಾಷಿಣಿ ಆರ್. ಕುಮಾರ್ ಉಪಸ್ಥಿತರಿದ್ದರು.

* ಜುಲೈ 28 ರಂದು ಸ್ಥಳೀಯ ಸಂಸ್ಥೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಒಂದು ದಿನದ ಪುನಶ್ಚೇತನ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ರಾಜ್ಯ ಸಂಸ್ಥೆಯು ನೀಡಲಾದ ವಾರ್ಷಿಕ ಕ್ರಿಯಾಯೋಜನ ಪುಸ್ತಕವನ್ನು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು. ಜಿಲ್ಲಾ ಸಹಾಯಕ ಆಯುಕ್ತರುರಾದ ಶ್ರೀ ಚಂದ್ರಶೇಖರ್‌ರವರು ಜಿಲ್ಲಾ ಸಂಘಟಕರು ಸ್ಥಳಿಯ ಸಂಸ್ಥೆಯ ಕಾರ್ಯದರ್ಶಿ ಪದಾಧಿಕಾರಿಗಳು ಹಾಜರಿದ್ದರು.

## ವಿಜಯನಗರ

ವಿಜಯನಗರ ಜಿಲ್ಲೆ ಕೊಟ್ಟೂರು ಪಟ್ಟಣದ ಪ್ರತಿಷ್ಠಿತ ಶಾಲೆಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ದಳವನ್ನು ವಿಜಯನಗರ ಜಿಲ್ಲಾ ಸ್ಕೌಟ್ಸ್ ಕಾರ್ಯದರ್ಶಿ ಶ್ರೀ ಮಂಜುನಾಥ್ ಇವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಅವರು "ಇಂದು ಶಾಲೆಯಲ್ಲಿ ಶಿಕ್ಷಣದ ಜೊತೆಗೆ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪಠ್ಯೇತರ ಚಟುವಟಿಕೆಗಳು ಅಗತ್ಯ ಹಾಗೂ ಈ ರೀತಿಯಾದ ಶಿಸ್ತು ದೇಶ ಪ್ರೇಮ ಮತ್ತು ಸಾಮಾಜಿಕ ಬುದ್ಧಿತೆಯನ್ನು ಮಕ್ಕಳಲ್ಲಿ ಬೆಳೆಸುವಲ್ಲಿ ಈ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಪ್ರೇರಣೆಯಾಗಿದೆ" ಎಂದು ತಿಳಿಸಿದರು. ಬಳ್ಳಾರಿ ಜಿಲ್ಲಾ ಸ್ಕೌಟ್ಸ್ ತರಬೇತಿ ಆಯುಕ್ತರಾದ ಶ್ರೀ ನಾಗರಾಜ ವಿಜಯನಗರ ಜಿಲ್ಲಾ ಪ್ರತಿನಿಧಿ ಶ್ರೀ ಶಿವಪುತ್ರ ಹಗರಿ ಬೊಮ್ಮನಹಳ್ಳಿ ಸ್ಕೌಟ್ಸ್ ಮಾಸ್ಟರ್ ಶ್ರೀ ಮಹಾಲಿಂಗಪ್ಪ ಮುಂತಾದವರು ಹಾಜರಿದ್ದರು.



## ಯಾದಗಿರಿ

ಆಗಸ್ಟ್ 15ರಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಯಾದಗಿರಿ ವತಿಯಿಂದ ಜಿಲ್ಲಾ ಕ್ರೀಡಾಂಗಣ ಯಾದಗಿರಿಯಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ರಾಷ್ಟ್ರ ಧ್ವಜಾರೋಹಣವನ್ನು ಸನ್ಮಾನ್ಯ ಶ್ರೀ ಶರಣಬಸಪ್ಪಗೌಡ ದರ್ಶನಾಪೂರ, ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಕರ್ನಾಟಕ ಸರ್ಕಾರ ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರು ಇವರು ನೆರವೇರಿಸಿದರು. ತದನಂತರ ಪಥಸಂಚಲನವನ್ನು ಆಯೋಜನೆ ಮಾಡಲಾಯಿತು. ಈ ಪಥಸಂಚಲನದಲ್ಲಿ ಪ್ರಥಮ ಸ್ಥಾನವನ್ನು ಸರ್ಕಾರಿ ಪ್ರೌಢಶಾಲೆ ಅಲ್ಲಿಪುರ, ಯಾದಗಿರಿ ಗೈಡ್ ತಂಡವು ಪಡೆಯಿತು. ದ್ವಿತೀಯ ಸ್ಥಾನವನ್ನು ಮಹಾತ್ಮಗಾಂಧಿ ಆಂಗ್ಲ ಮಾಧ್ಯಮ ಶಾಲೆ ಯಾದಗಿರಿ. ತೃತೀಯ ಸ್ಥಾನ ಸರ್ಕಾರಿ ಆದರ್ಶ ವಿದ್ಯಾಲಯ ಯಾದಗಿರಿ ಗೈಡ್ (ನೂತನ ಘಟಕ) ಹಾಗೂ ಸರ್ಕಾರಿ ಮಹಿಳಾ ಪದವಿ ಕಾಲೇಜು ಯಾದಗಿರಿ ರೇಂಜರ್ಸ್ ಪಡೆದರು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ರಾಘವೇಂದ್ರ ಅಳ್ಳಳ್ಳಿ, ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಸಿ.ಎಂ. ಪಟ್ಟೇದಾರ್, ಅಲ್ಲಿಪುರ ಪ್ರೌಢ ಶಾಲೆಯ ಮುಖ್ಯ ಗುರುಗಳು ಶ್ರೀಮತಿ ವಿದ್ಯಾ ಸಜ್ಜನ್, ರೇಂಜರ್ ಲೀಡರ್ ಶ್ರೀಮತಿ ಡಾ. ಅನುಸೂಯ ಪಾಟೀಲ್, ಗೈಡ್ ಕ್ಯಾಪ್ಟನ್ ಶ್ರೀಮತಿ ಲತಾ, ಸ್ಕೌಟ್ ಮಾಸ್ಟರ್ ಶ್ರೀ ಬಸವರಾಜ ಹಾಗೂ ಶ್ರೀ ಮಹಮ್ಮದ್ ಶರ್ಪುದ್ದೀನ್ ಉಪಸ್ಥಿತರಿದ್ದರು.



## ಅಭಿನಂದನೆಗಳು



ನಾಡಿನ ಸಮಾಚಾರ ಸೇವಾ ಸಂಘ (ರಿ.) ಗೋಕಾಕ ಸಂಸ್ಥೆಯ ಎರಡನೇ ವಾರ್ಷಿಕೋತ್ಸವದ ಅಂಗವಾಗಿ ಜರುಗಿದ ಧಾರವಾಡ ಜ್ಞಾನ ದರ್ಶನಿ ಸಮಾರಂಭದಲ್ಲಿ ಗೈಡ್ಸ್ ಕ್ಯಾಪ್ಟನ್ ಶ್ರೀಮತಿ ಚಂದ್ರಕಲಾ ಎಂ. ಪಾಟೀಲ್ ಇವರಿಗೆ 2023–24ನೇ ಸಾಲಿನ ರಾಷ್ಟ್ರೀಯ ಪ್ರಶಸ್ತಿಯನ್ನು ಅವರ ನಲಿ–ಕಲಿ ಕವನ ಸಂಕಲನಕ್ಕೆ ನೀಡಿ ಸನ್ಮಾನಿಸಲಾಯಿತು.

## ವಿಜಯಪುರ



ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನಿಡಗುಂದಿ ಎಲ್.ಟಿ. ಶಾಲೆಯಲ್ಲಿ ಜುಲೈ 20 ರಂದು ನಡೆದ ಸ್ಕೌಟ್ಸ್ ಮತ್ತು ಗೈಡ್ಸ್ ಕುರಿತು ಪಾಠ ಪ್ರವಚನ ಮಾಡಲಾಯಿತು ಹಾಗೂ ವನಮಹೋತ್ಸವ ಕಾರ್ಯಕ್ರಮದ ಅಂಗವಾಗಿ ಸಸಿಗಳನ್ನು ನೀಡಲಾಯಿತು ಮತ್ತು ಶಾಲೆಯ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ತಾಲೂಕ ಕಾರ್ಯದರ್ಶಿಗಳಾದ ಶ್ರೀ ಎಸ್.ಬಿ. ಭಜಂತ್ರಿ ರವರು, ಪಟ್ಟಣ ಪಂಚಾಯಿತಿಯ ಸದಸ್ಯರಾದ ಶ್ರೀ ಸಂಜು ರಾಠೋಡ್, ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಶ್ರೀ ಪಂಡಿತ್ ರಾಥೋಡ್, ಶಾಲೆಯ ಮುಖ್ಯ ಗುರುಗಳಾದ ಶ್ರೀ ಆರ್.ಎ. ನದಾಫ, ಸ್ಕೌಟ್ ಮಾಸ್ಟರ್ ಶ್ರೀ ಎಂ.ಎಚ್. ಲಷ್ಕರಿ, ಸಹ ಶಿಕ್ಷಕರಾದ ಶ್ರೀ ಡಿ.ಎಂ. ಬಾಗೇವಾಡಿ ಮತ್ತು ಇತರರು ಉಪಸ್ಥಿತರಿದ್ದರು.



A View of Brownsea Island

# Great Grandson of Late Kondajji Basappa Visits Brownsea Island as a Scout

Brownsea Island in the County of Dorset, England is the Birthplace of Scouting where Lord Baden Powell, Founder of the Scouts & Guides Movement, held a first ever experimental Boy Scouts Camp with 20 boys between 1st - 9th August 1907. Naman Bada, Son of Mrs. Smitha Kondajji & Mr. Srinivas Bada, a Scout in Snowdon Troop of Trinity Sutton Scouts Group, London was part of a 7 day scout camp at the Brownsea Island. He is the Grandson of Mrs. & Mr. Vijayakumar Kondajji and Great Grandson of Late Sri Kondajji Basappa, Former State Chief Commissioner, Bharat Scouts and Guides, Karnataka. Naman & their troop did several activities that included Archery, Stand-Up-Paddleboards, Gliding, Hiking, Cooking, Renewing Scout's Promise at the Commemorative Stone and a visit to Bovington Tank Museum along with most Evenings Finishing off with a Campfire & Camp Songs.




Naman with Gliding Instructor



Naman, the third Boy from the left



Naman, third Boy from the left in front of the Commemorative Stone

## Why? & How? of Celebration of

# TEACHER'S DAY

**K. Gangappa Gowda**
DPI (Rtd.) & State Secretary
Bharat Scouts and Guides, Karnataka
Mob. 9845547653



**a) Why? of Celebration of Teachers' Day :**

Teachers' day is a special day dedicated to honoring and appreciating Educators and Teachers for their contribution to society and the all round development of Students. It is a day to express gratitude to teaching community for their hard-work and dedication in shaping the minds of the next generation. It provides an opportunity to express their gratitude and appreciation for their dedication, guidance and support in imparting knowledge and values. Celebration of Teachers' Day also helps to raise awareness about the upliftment of the society and encourages the continued improvement of the Education system.

Every year on 5th September Teacher's Day in India is being celebrated to commemorate the Birth Anniversary of Dr. Sarvepalli Radha Krishnan, an academician, professor, Philosopher and former first Vice President and Second President of India. He was born on 5th September 1888. He was a renowned scholar, recipient of Bharat Rathna, The greatest Teacher and Scholar of India. Though Hailed from respectable small city family, with the help of Education, he became as esteemed politician and a Visionary Educationist.

He was man of many good qualities and a favorite teacher among Students. It was his request that his Birth-day should be celebrated as an honorable day for all teachers in the country in cases someone is wishing to celebrate his birth-day at all. Accordingly the first Teacher's Day in India was celebrated on 5th September 1962, which was his 74thBirth day. He died on 17th April 1975.

In addition to celebrations and festivities carried out in schools and Colleges, Public Institutions, different Service Organisations and at States and District levels, in National level also celebrating the Teachers' Day by presenting the National Awards for Teachers. These awards are given to the exceptional teachers working in Primary Schools, Middle Schools and Secondary Schools by the President of India for their outstanding works.Similarly to their efforts of Pre-university, University Teachers are being acknowledged by presenting them Inspiring Teacher Recognitions by Organising various programme and activities in honoring them at various stages.

In Karnataka State Awards to teachers community are presented at State Level, District Level and even at Taluk Levels(Educational Block levels) to recognize and honor the yeomen Services being done by the teachers.

**b) "How",? of Celebration of Teachers' day.**

Important steps to be taken to celebrate the Teachers'day:

In order to make Teachers feel valued, respected and appreciated for their dedicated and hard work, it is suggested to have plans and take following some of the important steps to execute them.

1. Formulation of Planning Committee: If you want to celebrate Teachers'Day at school level, form a Committee of students and school staff to organize the celebration. If you want to celebrate at local Association/District Association level form a committee of unit leaders and members of the Associations to organize the same. Then Assign responsibilities for different tasks such as decorations, invitations conduct of activities etc.,
2. Organizing Cultural Programmes: Take steps to organize Variety of Cultural Programme, such as music, dance, drama performances etc., to entertain and honour teachers.

3. Organizing Award Ceremonies: Have programs of recognize outstanding teachers through an award ceremonies.
4. Organizing Speeches and Tributes: Allow students to deliver speeches or recite poem highlighting the importance of teachers' in their lives. This can be an emotional and touching way to express their gratitude.
5. Organizing Interactive sessions: Arrange Interactive sessions where students can share their personal anecdotes experiences or memories related to their teachers.
6. Organizing Workshops and Seminars: Conduct workshops or seminars on education related topics, inviting teachers to share their insights and experiences.
7. Organizing Community Services: Encourage students to participate in Community Service activities as a tribute to their teachers. This can promote a sense of giving back and gratitude.
8. Hosting Lunch or Tea Party: Organise a special lunch, tea party or picnic where teachers and students can interact in relaxed and informal setting.
9. Making use of Technology and its Integration: Use technology to create virtual Messages, Videos or online events for teachers who may not be able to attend in person.
10. Inviting and OrganizingGuest Speakers: Invite guest speakers, such as prominent educators or motivational speakers to deliver inspiring talks on the importance of teaching and role of teachers.
11. Providing Platform for Feed back and suggestions: Provide a platform for teachers to share their feedback and suggestions to improve the learning environment and teaching methods.
12. Encouraging Distribution of Gifts and Cards: Encourage students to create personalized "Thank-You Cards", "Letters"or "Small gifts" for their teachers. These heart felt gestures go a long way in expressing appreciation of the teachers.
13. Making best use of Library Facilities: Encourage students to make best use of Libraries in their Institutions by reading books and articles enlightening importance of Teachers' Day and great contributions given by Dr.Sarvapalli Radha Krishnan.

Hence, we are celebrating Teachers' Day in Commemoration of the Great Teacher Dr. Sarvepalli Radhakrishnan, according to whom, it is in furtherance of honoring and recognizing the valuable role teachers play in shaping the lives of their students and the society at large.

In further of the celebration with great excitement and most appropriate matter, many events can be organized as enlisted above, in the honour of teachers.I earnestly request all of you to do your best to organize the teacher's Day in most fitting and honorable way.

I am happy to conclude this Article with the following Message of Dr. Sarvepalli Radhakrishnan about, how? Any Common Man can become a Great Man.

"All great men, – whether great social Reformer, Great thinker, Great statesman,
Great sages, Great Patriots or great men of letters __________________ differ from common menonly
in one thing they have courage to dream and also work hard to turn that dream into reality.
They give life a meaning, a purpose and dedicate themselves to that purpose".

**– Dr. Sarvepalli Radhakrishnan**

"Dream is not what we see, while we are sleeping,
it should be the dream, which will not allow you to sleep"

**- Dr. A.P.J. Abdul Kalam**

**WISH YOU ALL HAPPY TEACHER'S DAY in advance**

# ವಿ ಶಲ್ ಓವರ್ ಕಮ್....

– ಎನ್. ಶ್ರೀನಿವಾಸನ್
ಎಲ್.ಟಿ. (ಸ್ಕೌಟ್); ಎ.ಎಸ್.ಸಿ. (ಸ್ಕೌಟ್)

ಹೌದು "ವಿಶಲ್ ಓವರ್ ಕಮ್....". ನಾವು ಜಯಿಸುತ್ತೇವೆ. ನಾವು ಎದುರಿಸುತ್ತೇವೆ. ನಾವು ದಾಟುತ್ತೇವೆ. ಅಲ್ಲಲ್ಲ. ಜಯಿಸಿಯೇ ಜಯಿಸುತ್ತೇವೆ. ಎದುರಿಸಿಯೇ ಎದುರಿಸುತ್ತೇವೆ. ದಾಟೇದಾಟುತ್ತೇವೆ. ಅದ್ಭುತ ನಿಶ್ಚಯ. ಸಕಾರಾತ್ಮಕ ಮನೋಭೋದೆ.

ಈ ಹಾಡಿನಲ್ಲಿರುವ ಎಲ್ಲಾ ಸಾಲುಗಳು ಹಾಗೆಯೇ ಇವೆ. ಇದನ್ನು ನಮ್ಮ ಸ್ಕೌಟ್–ಗೈಡಿನ ಸರ್ವಧರ್ಮ ಪ್ರಾರ್ಥನೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಸ್ಕೌಟ್–ಗೈಡ್‌ನ ನಿಯಮದ ಏಳನೇ ಅಂಶವಾದ 'ಸ್ಕೌಟ್–ಗೈಡ್ ಧೈರ್ಯವಂತನು/ಳು' ಎನ್ನುವ ವಾಕ್ಯಕ್ಕೆ ಪೂರಕವಾದುದು ಇದು.

ಇದು ಕೇವಲ ಸರ್ವಧರ್ಮ ಪ್ರಾರ್ಥನೆಯಲ್ಲಿ ಹಾಡುವ ಹಾಡಲ್ಲ, ಸದಾ ಸರ್ವದಾ ನಮಗೆ ನಾವೇ ಹೇಳಿಕೊಳ್ಳಬಹುದಾದ ಮನೋಭೋದೆ. ಕಠಿಣ ಸಂದರ್ಭಗಳಲ್ಲಿ ವಿಷಮ ಪರಿಸ್ಥಿತಿಗಳಲ್ಲಿ ಈ ಸಾಲುಗಳನ್ನು ಅನೇಕ ಬಾರಿ ಹೇಳಿಕೊಂಡರೆ ಮನೋಬಲ ಹೆಚ್ಚುತ್ತದೆ ಮತ್ತು ಕೆಲಸ ಮಾಡಲು ಉತ್ಸಾಹ ಬರುತ್ತದೆ. ಇಂತಹ ಅದ್ಭುತ ಸಾಲುಗಳನ್ನು ಪ್ರಪಂಚಕ್ಕೆ ನೀಡಿದ ಆ ವ್ಯಕ್ತಿ ಯಾರು? ಎಲ್ಲಿಯವ? ಯಾವ ಸಂದರ್ಭದಲ್ಲಿ ಹಾಡಿದ? ಇವುಗಳೆಲ್ಲದರ ಬಗೆಗಿನ ಪುಟ್ಟ ಮಾಹಿತಿ ಇಲ್ಲಿದೆ.

ಪೀಟ್‌ಸೀಗರ್ ಎಂಬುವಾತನೆ ಆ ವ್ಯಕ್ತಿ. ಈತ 30ನೇ ಮೇ 1919 ರಂದು ಅಮೇರಿಕಾದ ನ್ಯೂಯಾರ್ಕಿನ ಪ್ಯಾಟರ್‌ಸನ್ ಎಂಬಲ್ಲಿ ಜನಿಸಿದ. ಈತ ಒಬ್ಬ ಜಾನಪದ ಹಾಡುಗಾರ ಹಾಗೂ ಸಾಮಾಜಿಕ ಕಾರ್ಯಕರ್ತ. ಸಾಮಾಜಿಕ ವ್ಯತ್ಯಾಸಗಳ ಬಗ್ಗೆ, ಅದರಲ್ಲೂ ಪ್ರಮುಖವಾಗಿ ಕಾರ್ಮಿಕ ಶೋಷಣೆಯ ಬಗ್ಗೆ ದನಿ ಎತ್ತಿದವರಲ್ಲಿ ಅಗ್ರಗಣ್ಯ "Almanac Singer" ಮತ್ತು "The Weavers" ಎಂಬ ಎರಡು ವಾದ್ಯ ತಂಡಗಳನ್ನು ಪ್ರಾರಂಭಿಸಿದ. ಇವನ ಕೈಯಲ್ಲಿ ಯಾವಾಗಲು ಬ್ಯಾಂಜೋ ಎಂಬ ವಾದ್ಯ ಇರುತ್ತಿತ್ತು. ಅಮೇರಿಕಾದಲ್ಲಿ ಇದನ್ನು ಪೀಟ್ ಬ್ಯಾಂಜೋ ಎಂದೇ ಕರೆಯುತ್ತಾರೆ.

ಈತನು ಸಂಗೀತಗಾರರ ಹಾಗೂ ಸಂಗೀತ ಶಾಸ್ತ್ರಜ್ಞರ ಕುಟುಂಬದಿಂದ ಬಂದವನು. ಇವನಿಗೆ ಶಾಲಾ ಶಿಕ್ಷಣ ಹಿಡಿಸಲಿಲ್ಲ. ಶಾಲೆಯನ್ನು ಬಿಟ್ಟು, ಊರೂರು ಸುತ್ತಲು ಶುರು ಮಾಡಿದ, ಅಲ್ಲೆಲ್ಲಾ ಅವನು ಕೇಳಿದ ಜನಪದ ಹಾಡುಗಳು, ಅವನ ಹಾಡುಗಾರಿಕೆಯ ಪ್ರತಿಭೆಯನ್ನು ಬಡಿದೆಬ್ಬಿಸಿತು. ಕೈಯಲ್ಲಿ ಬ್ಯಾಂಜೋ ಹಿಡಿದು ಹಾಡುತ್ತಿದ್ದರೆ, ಬೇರೆಯೇ ಲೋಕ ಪ್ರಕಟಗೊಳ್ಳುತ್ತಿತ್ತು. ನೊಂದವರ, ಬೆಂದವರ, ವಿಷಾದದ, ಶೋಷಿತರ, ಕಣ್ಣೀರಿಟ್ಟವರ, ಹಾಡುಗಳನ್ನು ಹಾಡಿ, ಹಾಡುಗಳ ಮೂಲಕವೇ ಅವರ ಕಣ್ಣೀರನ್ನು ಒರೆಸಿದ. ವಿಯಾಟ್ನಾಂ ಯುದ್ಧ, ವಾಟರ್‌ಗೇಟ್ ಪ್ರಕರಣ, ಆಫ್ರಿಕಾದ ಚಿನ್ನದ ಗಣಿಗಳ ಶೋಷಣೆ, ಇವುಗಳ ವಿರುದ್ಧ ಹಾಡು ಕಟ್ಟಿ ಹಾಡಿದ. ಮಾರ್ಟಿನ್ ಲೂಥರ್ ಕಿಂಗ್ ಜೊತೆಯಲ್ಲಿ ಹಾಡುತ್ತಾ ಹೋದ.

ಬೈಬಲ್ ಪುಟಗಳಿಂದ, ತಾಯಂದಿರು ಹಾಡಿದ ಜೋಗುಳದಿಂದ, ಆಫ್ರಿಕಾ ಅಮೇರಿಕನ್ ಜನರ ಕಾಲೋನಿಗಳಿಂದ, ರಷ್ಯಾ ಕಾದಂಬರಿಕಾರ ಶೋಲೋಕೋವ್‌ನ ಕಾದಂಬರಿಗಳಿಂದ ಹಾಡುಗಳನ್ನು ಹುಡುಕಿ ತಂದ. ಜನರ ನೋವನ್ನು, ಭರವಸೆಯ ಕಿರಣಗಳನ್ನು ಸರಳ ಶಬ್ದಗಳಲ್ಲಿ ಹಿಡಿದಿಟ್ಟ. ಅವನು ರಚಿಸಿದ 1700 ಹಾಡುಗಳು ಪ್ರಪಂಚದೆಲ್ಲೆಡೆ ವ್ಯಾಪಿಸಿದೆ.

ಯುದ್ಧಕ್ಕೆ ಹೋಗುವ ಯೋಧರ ನಿಸ್ಸಹಾಯಕತೆ, ರಾಜಕಾರಣಿಗಳ ಮುಖವಾಡ ಇವುಗಳ ಬಗ್ಗೆ ತೀಕ್ಷ್ಣವಾಗಿ ಬರೆದ. ಪೀಟ್‌ಸೀಗರ್‌ಗೆ ಭಾಷೆಯ ಎಲ್ಲೆ ಇರಲಿಲ್ಲ. "ಭಾಷೆ ಸೋತಾಗ, ನಾದದ ಬೆನ್ನು ಹತ್ತಿ" ಎನ್ನುತ್ತಿದ್ದ. ಅವನು ಭಾರತದ ಕೊಲ್ಕತ್ತ, ಬೆಂಗಳೂರು ಮತ್ತು ತಿರುವನಂತಪುರಗಳಿಗೂ ಸಹ ಭೇಟಿ ನೀಡಿದ್ದ. ಕೊಲ್ಕತ್ತದಲ್ಲಿ ಒಬ್ಬ ಶ್ರೋತೃ ಹೀಗೆ ಕೇಳುತ್ತಾರೆ. "ಭಾರತವನ್ನು ಬಡಿದೆಬ್ಬಿಸಿದ ಒಂದು ಪ್ರತಿಭಟನಾ ಗೀತೆ ಎಂದರೆ ಯಾವುದು?" ಆಗ ಅವನು ತನ್ನ ಬ್ಯಾಂಜೋ ಶೃತಿ ಮಾಡಿ "ರಘುಪತಿ ರಾಘವ ರಾಜಾರಾಮ್, ಪತಿತ ಪಾವನ ಸೀತರಾಮ್" ಎಂದು ಹಾಡಿದ.

"ವಿ ವಿಲ್ ಓವರ್ ಕಮ್" ಎಂಬ ಹಳೆಯ ಹಾಡನ್ನು "ವಿ ಶಲ್ ಓವರ್ ಕಮ್" ಎಂದು ಬದಲಾಯಿಸಿ ಅದಕ್ಕೆ ಮತ್ತೆರಡು ಸಾಲುಗಳನ್ನು ಸೇರಿಸಿ ಅದ್ಭುತ ಹಾಡನ್ನು ನೀಡಿದ.

ಈ ಅದ್ಭುತ ಗಾಯಕ 27ನೇ ಜನವರಿ 2014 ರಂದು ತನ್ನ 94ನೇ ವಯಸ್ಸಿನಲ್ಲಿ ನಿಧನ ಹೊಂದಿದರು



# ಕಲುಷಿತ ನೀರು

ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ
ಮಕ್ಕಳ ಹೃದಯ ತಜ್ಞರು, ಬೆಂಗಳೂರು

ಅಥರ್ವ ವೇದದಲ್ಲಿ ನೀರನ್ನು ಜೀವಜಲವೆಂದೂ ಶರೀರದಲ್ಲಿರುವ ಎಲ್ಲಾ ಕಲ್ಮಷ ತೆಗೆದು ಗುಣಪಡಿಸುವ ಉತ್ತಮ ಆರೋಗ್ಯಕ್ಕೆ ಅಮೃತವೆಂದು ವರ್ಣಿಸಿದೆ. ವೈಜ್ಞಾನಿಕವಾಗಿ ನಾವು ನೀರಿಲ್ಲದೇ ಕೇವಲ 3 ದಿನ ಮಾತ್ರ ಬದುಕಬಹುದು. ಆದ್ದರಿಂದ ನಮ್ಮ ಶರೀರದ ಪ್ರತಿ ಅವಯವಕ್ಕೂ 100 ಟ್ರಿಲಿಯನ್ ಜೀವಕಣಗಳಿಗೆ ಪ್ರಾಣವಾಯು ಪೋಷಣೆ ಸರಬರಾಜು ಮಾಡಲು ಮತ್ತು ಬೆವರು, ಮೂತ್ರದ ಮುಖಾಂತರ ತ್ಯಾಜ್ಯ ಹೊರಹಾಕಲು ನೀರು ಅತೀ ಅವಶ್ಯ.

ಆದರೆ, ಇತ್ತೀಚೆಗೆ ಕಲುಷಿತ ನೀರನ್ನು ಕುಡಿದು, ಜನರು ಸಾಯುತ್ತಿರುವುದು ಸಹಜವಾಗಿಯೂ ದುರಂತ ಮತ್ತು ದುರ್ದೈವದ ಸಂಗತಿ. ನೀರು ನಾಲ್ಕು ರೀತಿಯಿಂದ ಕಲುಷಿತಗೊಳ್ಳುತ್ತದೆ. 1) ಚರಂಡಿ ನೀರು ಕುಡಿಯುವ ನೀರಲ್ಲಿ ಮಿಶ್ರಣಗೊಂಡು ಅದರಲ್ಲಿ ರೋಗಾಣುಗಳು ಸೇರುವುದರಿಂದ. 2) ಕೀಟನಾಶಕ ಮತ್ತು ಇತರ ವಿಷಪೂರಿತ ರಾಸಾಯನಗಳು ಸೇರಿಕೊಂಡರೆ. 3) ವಿಕಿರಣಗಳು ಮಿಶ್ರಿತಗೊಂಡು. 4) ಮಣ್ಣು ಕಸಕಡ್ಡಿಗಳು ಸೇರಿಕೊಂಡಿದ್ದನ್ನು ಸೋಸಿದರೆ ಸಾಕಾಗುತ್ತದೆ. ಆದರೆ, ರೋಗ ಹೆಚ್ಚಿಸುವ ರೋಗಾಣುಗಳನ್ನು ಸಾಯಿಸುವ chlorination ಅತ್ಯಂತ ಉತ್ತಮ ರೀತಿ. ಆದರೆ ವಿಷ ಮತ್ತು ವಿಕರಣ ತೆಗೆಯುವುದು ಕಷ್ಟಸಾಧ್ಯ. ಅದನ್ನು ಮೊದಲೇ ತಡೆಗಟ್ಟುವುದೇ ಉತ್ತಮ WHO ಪ್ರಕಾರ ನಮ್ಮ ದೇಶದಲ್ಲಿ ಪ್ರತಿವರ್ಷ 1995 ಕೋಟಿ ರೂಪಾಯಿಯನ್ನು ನೀರಿನಿಂದ ಆದ ರೋಗಗಳ ಚಿಕಿತ್ಸೆಗೆ ಭಾರತ ಖರ್ಚು ಮಾಡುತ್ತಿದೆ ಎಂದು ತಿಳಿಸಿದ್ದಾರೆ. ಜನರಿಗೆ 80% ಕಾಯಿಲೆಗಳು ಕಲುಷಿತ ನೀರಿನಿಂದ ಬರುತ್ತವೆ. ಪ್ರಮುಖವಾಗಿ ಕಾಲರಾ, ಅಮೀಬಿಯಾಸಿಸ್, ಕರಳು ಬೇನೆಯಿಂದ ವಾಂತಿ ಬೇದಿ, ಜಿಯಾರ್ಡಿಯಾಸಿಸ್, ಕಾಮಾಲೆ ಇತ್ಯಾದಿ. ಇದನ್ನು ಅರಿತ ನಮ್ಮ ನೆಚ್ಚಿನ ಪ್ರಧಾನಿಯವರು 'ಜಲ ಜೀವನ್ ಮಿಶನ್' ಎಂಬ ಹೊಸ ಖಾತೆ ಪ್ರಾರಂಭಿಸಿ, ಅದರಲ್ಲಿ 'ಘರ್–ಘರ್–ನಲ್' ಎಂಬ ಅಭಿಯಾನ ಪ್ರಾರಂಭಿಸಿದ್ದಾರೆ. ಪ್ರತೀ ಊರಿನ ಪಂಚಾಯಿತಿಯವರು, ಮುನಿಸಿಪಾಲ್ಟಿಯವರು, ಕಾರ್ಪೋರೇಶನ್‌ನವರು ಕೇಂದ್ರದಿಂದ ಹಣ ಪಡೆದು ಪ್ರತಿಯೊಬ್ಬ ಭಾರತೀಯರಿಗೆ ಶುದ್ಧ ಕುಡಿಯುವ ನೀರು ಪೂರೈಸುವುದು ಅವರ ಆದ್ಯ ಕರ್ತವ್ಯವಾಗಿರಬೇಕು. ಜನರು ನೀರನ್ನು ಕುದಿಸಿ, ಸೋಸಿ ಕುಡಿಯಬೇಕು, ಶುದ್ಧ ನೀರು ಅಮೃತ, ಕಲುಷಿತವಾದರೆ ವಿಷ–ಮರೆಯದಿರಿ.

## ಶ್ರದ್ಧಾಂಜಲಿ



ಶ್ರೀ ಕೆ.ಎಸ್. ಶಿವಕುಮಾರ್, ನಿವೃತ್ತ ಸಹಾಯಕ ರಾಜ್ಯ ಸಂಘಟನಾ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಇವರು ಆಗಸ್ಟ್ 04ರಂದು ಬೆಂಗಳೂರಿನಲ್ಲಿ ನಿಧನರಾದರು. ಇವರಿಗೆ 70 ವರ್ಷ ವಯಸ್ಸಾಗಿತ್ತು, ಇವರು ಹಲವಾರು ವರ್ಷಗಳು ಸಂಸ್ಥೆಯಲ್ಲಿ ಸಹಾಯಕ ರಾಜ್ಯ ಸಂಘಟನಾ ಆಯುಕ್ತರಾಗಿ ವಿವಿಧ ಜಿಲ್ಲೆಗಳಲ್ಲಿ ಸೇವೆ ಮಾಡಿ ಸ್ವ–ನಿವೃತ್ತಿಯನ್ನು ಪಡೆದಿದ್ದರು. ಪ್ರಸ್ತುತ ಬೆಂಗಳೂರು ದಕ್ಷಿಣ ಜಿಲ್ಲೆಯ ಅಧ್ಯಕ್ಷರಾಗಿದ್ದರು. ಬೆಂಗಳೂರಿನ ಸಜ್ಜನರಾವ್ ಸರ್ಕಲ್‌ನಲ್ಲಿ 'ವಾಸವಿ ಕಾಂಡಿಮೇಂಟ್ಸ್ ಬೇಕರಿ'ಯನ್ನು ನಡೆಸುತ್ತಿದ್ದು ಸಾಕಷ್ಟು ಜನರಿಗೆ ಉದ್ಯೋಗವನನು ನೀಡಿದ್ದರು. ಇವರು ಪತ್ನಿ, ಮಗ, ಮಗಳು ಹಾಗೂ ಅಪಾರ ಬಂದು ಬಳಗವನ್ನು ಅಗಲಿದ್ದಾರೆ.



ಶ್ರೀಮತಿ ರೇಣುಕಾ ಪ್ರಭು, ಮಾಜಿ ಗೈಡ್ ಆಯುಕ್ತರು, ಹಾಸನ ಜಿಲ್ಲೆ ಇವರು ಜೂನ್ 30 ರಂದು ಅನಾರೋಗ್ಯದಿಂದ ದೈವಾಧೀನರಾಗಿರುತ್ತಾರೆ. ಇವರು ಹಾಸನ ಜಿಲ್ಲಾ ಸಂಸ್ಥೆಯಲ್ಲಿ ಜಿಲ್ಲಾ ಉಪಧ್ಯಾಕ್ಷರಾಗಿ ಮತ್ತು ಜಿಲ್ಲಾ ಆಯುಕ್ತರು (ಗೈಡ್ಸ್) ಆಗಿ ಹಲವಾರು ವರ್ಷಗಳ ಕಾಲ ತಮ್ಮ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿರುತ್ತಾರೆ.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

– ರಾಜ್ಯ ಕಾರ್ಯದರ್ಶಿ

## ಆಗಸ್ಟ್ 15ರಂದು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ನಡೆದ 77ನೇ ಸ್ವಾತಂತ್ರ್ಯ ದಿನಾಚರಣೆಯ ಪಥಸಂಚಲನದಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿದ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಗಣ್ಯರಿಂದ ಪ್ರಶಸ್ತಿಗಳನ್ನು ಪಡೆದರು.



ದ್ವಿತೀಯ ಸ್ಥಾನ ಪಡೆದ ಮಡಿಕೇರಿಯ ಸೆಂಟ್ ಜೋಸೆಪ್ ಶಾಲೆಯ ಗೈಡ್ಸ್ ತಂಡಕ್ಕೆ ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗಳ ಸಚಿವರು ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎನ್.ಎಸ್. ಬೋಸರಾಜು ಅವರು ಪ್ರಶಸ್ತಿ ನೀಡಿ ಗೌರವಿಸಿದರು.



ಪ್ರಥಮ ಸ್ಥಾನ ಪಡೆದ ರಾಯಚೂರಿನ ಸೇಂಟ್ ಮೇರಿ ಕಾನ್ವೆಂಟ್ ಶಾಲೆಯ ಗೈಡ್ಸ್ ತಂಡಕ್ಕ ಮಾನ್ಯ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ॥ ಶರಣಪ್ರಕಾಶ್ ಆರ್. ಪಾಟೀಲ್‌ರವರು ರೂ. 5000/– ನಗದು ಹಾಗೂ ಪ್ರಶಸ್ತಿ ನೀಡಿ ಗೌರವಿಸಿದರು.



ಪ್ರಥಮ ಸ್ಥಾನ ಪಡೆದ ಯಾದಗಿರಿ ಗೈಡ್ಸ್ ತಂಡಕ್ಕೆ ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶರಣಬಸಪ್ಪ ದರ್ಶನಾಪುರ ಅವರು ಪ್ರಶಸ್ತಿ ನೀಡಿ ಗೌರವಿಸಿದರು.




ದ್ವಿತೀಯ ಸ್ಥಾನ ಪಡೆದ ಉಡುಪಿ ಸೆಂಟ್ ಸಿಸಿಲಿ ಆಂಗ್ಲ ಮಾಧ್ಯಮ ಶಾಲೆಯ ಗೈಡ್ಸ್ ತಂಡಕ್ಕೆ ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವೆಯಾದ ಶ್ರೀಮತಿ ಲಕ್ಷ್ಮಿ ಹೆಬ್ಬಾಳ್ಕರ್‌ರವರು ಪ್ರಶಸ್ತಿ ನೀಡಿ ಗೌರವಿಸಿದರು.



ದ್ವಿತೀಯ ಸ್ಥಾನ ಪಡೆದ ಕೋಲಾರದ ಶ್ರೀ ಎ.ಇ.ಎಸ್. ಶಿಕ್ಷಣ ಸಂಸ್ಥೆಯ ಸ್ಕೌಟ್ ತಂಡಕ್ಕೆ ಮಾನ್ಯ ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಬೈರತಿ ಸುರೇಶ್ ರವರು ಪ್ರಶಸ್ತಿಯನ್ನು ನೀಡಿ ಗೌರವಿಸಿದರು.



ದ್ವಿತೀಯ ಸ್ಥಾನ ಪಡೆದ ಕಾರವಾರದ ಸೆಂಟ್ ಜೋಸೆಫ್ ಶಾಲೆಯ ಸ್ಕೌಟ್ಸ್ ತಂಡಕ್ಕೆ ಮಾನ್ಯ ಮೀನುಗಾರಿಕೆ, ಬಂದರು ಮತ್ತು ಜಲಸಾರಿಗೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಮಂಕಾಳ್ ಎಸ್. ವೈದ್ಯರವರು ಪ್ರಶಸ್ತಿ ನೀಡಿ ಗೌರವಿಸಿದರು.

Regd. as News Paper (Magazine) RNI No: 13348/1959. Postal Regd. No. KA/BGGPO/2580/2021-23
Licensed to Post Without Prepayment License No. PMG/BG/WPP-340/2021-2023.
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 44)




If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
shanthigruha@scout.org.in
www.bsgkarnataka.org

Published by: The Bharat Scouts & Guides, Karnataka, State Headquarters
Shanthi Gruha #39, Palace Road, Bengaluru - 560 001. Publisher & Editor: K. Gangappa Gowda
Printed by: L. Lingappa, M.D. Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Rd, Bengaluru 26